ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಡಿಸೆಂಬರ್ 2 ಶನಿವಾರ 2023
ಸಂಪುಟ: 44 | ಸಂಚಿಕೆ: 225 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.cor..



ಬೆಂಗಳೂರಿನ 60 ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ಬಾಂಬ್ ಬೆದರಿಕೆ

● ಎಲ್ಲಾ ಶಾಲೆಗಳಿಗೂ ಒಂದೆ ಇ–ಮೇಲ್ ಮೂಲಕ ಸಂದೇಶ ● ಪೋಷಕ ವರ್ಗ ತಲ್ಲಣ; ಕಂಗಾಲಾದ ಶಾಲಾ ಆಡಳಿತ ಮಂಡಳಿ, ಸಿಬ್ಬಂದಿ ● ಸಿಕ್ಕ ಸಿಕ್ಕ ವಾಹನಗಳಲ್ಲಿ ಮಕ್ಕಳ ಮನೆಗೆ ಕರೆದೊಯ್ದ ಆತಂಕಿತ ಪೋಷಕರು ● ಬಾಂಬ್ ನಿಷ್ಕ್ರೀಯ ದಳದಿಂದ ಪರಿಶೀಲನೆ ನಂತರ 'ಹುಸಿ ಬಾಂಬ್' ಖಾತರಿ; ನಿಟ್ಟುಸಿರು ಬಿಟ್ಟ ರಾಜ್ಯ ರಾಜಧಾನಿ



ಬೆಂಗಳೂರು, ಡಿ.1–ರಾಜ್ಯದ ರಾಜಧಾನಿ ಬೆಂಗಳೂರು ಹಾಗೂ ಆನೇಕಲ್ಲಿನ 60 ಖಾಸಗಿ ಶಾಲೆಗಳಲ್ಲಿ ಬಾಂಬ್ ಇಟ್ಟಿರುವುದಾಗಿ ಏಕಕಾಲಕ್ಕೆ ಇ–ಮೇಲ್ ರವಾನಿಸಲಾಗಿದ್ದು, ಶುಕ್ರವಾರ ಇಡೀ ರಾಜಧಾನಿ ತಲ್ಲಣಗೊಂಡಿತ್ತು. ಶುಕ್ರವಾರ ಬೆಳಗ್ಗೆ ಖಾಸಗಿ ಶಾಲೆಗಳ ಪ್ರಾಂಶುಪಾಲರು ಹಾಗೂ ಶಿಕ್ಷಕರು ಶಾಲೆಗೆ ಆಗಮಿಸಿ ಶೈಕ್ಷಣಿಕ ಚಟುವಟಿಕೆಯನ್ನು ಪ್ರಾರಂಭಿಸಿದ್ದರು. ಈ ವೇಳೆ ಶಾಲೆಗೆ ಬಂದಿದ್ದ ಮೇಲ್‌ಗಳನ್ನು ಪರಿಶೀಲಿಸಿದಾಗ ಬಾಂಬ್ ಬೆದರಿಕೆ ಸಂದೇಶವಿರುವ ಮೇಲ್ ಇಡೀ ಶಾಲೆಯ ವಾತಾವರಣವನ್ನು ಭಯಭೀತಗೊಳಿಸಿದೆ.

ಪೊಲೀಸರಿಗೆ ಮಾಹಿತಿ ನೀಡಿ ತಕ್ಷಣವೇ ಶಿಕ್ಷಕರು ಮಕ್ಕಳನ್ನು ಶಾಲೆಯಿಂದ ಹೊರಗೆ ಕರೆತಂದು ನಿಲ್ಲಿಸಿಕೊಂಡರಲ್ಲದೇ, ಮಕ್ಕಳ ಪ್ರತಿ ಪೋಷಕರಿಗೂ ಕರೆ ಮಾಡಿ ವಿಷಯ ತಿಳಿಸಿ, ಮಕ್ಕಳನ್ನು ಕರೆದೊಯ್ಯುವಂತೆ ಆತಂಕದಿಂದಲೇ ● 6ನೇ ಪುಟಕ್ಕೆ

ಜಾನುವಾರುಗಳ ಮೇವಿಗೆ ಆರು ತಿಂಗಳು ಅಡ್ಡಿಯಿಲ್ಲ

● ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಸ್ಪಷ್ಟನೆ ● ನಂತರವೂ ಸಮಸ್ಯೆಯಾಗದಂತೆ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚನೆ ● ಕಚೇರಿಗಳಲ್ಲೇ ಕೂರದೇ ಹಳ್ಳಿಗಳಿಗೆ ಹೋಗಿ ಪಶುಗಳ ರೋಗ ನಿವಾರಣೆಗೆ ಮುಂದಾಗಿ ● ಯಂತ್ರಗಳ ಕಟಾವಿನಿಂದ ಮೇವು ಹಾಳಾಗುವುದ ತಡೆಯಲೆತ್ನಿಸಿ



ಮೈಸೂರು, ಡಿ.1(ಎಸ್‌ಬಿಡಿ)–ಮುಂದಿನ ಆರು ತಿಂಗಳವರೆಗೆ ಜಾನುವಾರುಗಳಿಗೆ ಮೇವಿನ ಕೊರತೆಯಾಗದು. ನಂತರವೂ ಸಮಸ್ಯೆಯಾಗದಂತೆ ಅಧಿಕಾರಿಗಳು ಮುಂಜಾಗ್ರತಾ ಕ್ರಮ ವಹಿಸಬೇಕು ಎಂದು ಪಶು ಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಸೂಚನೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯ್ತಿಯ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಶುಕ್ರವಾರ ಮೈಸೂರು ವಿಭಾಗದ ಎಂಟು ಜಿಲ್ಲೆಗಳಲ್ಲಿನ ಇಲಾಖಾ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಮೇವು ಲಭ್ಯತೆ ಬಗ್ಗೆ ಮಾಹಿತಿ ಪಡೆದು, ವಾಸ್ತವದ ನೆಲಗಟ್ಟಿನಲ್ಲಿ ಸೂಕ್ತ ಕ್ರಮಕ್ಕೆ ಸೂಚಿಸಿದರು. ಸದ್ಯ ಪರಿಸ್ಥಿತಿ ಅವಲೋಕಿಸಿದರೆ ಮುಂದಿನ ಆರು ತಿಂಗಳವರೆಗೆ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗುವುದಿಲ್ಲ. ನೀರಿನ ಲಭ್ಯತೆ ಇರುವ ರೈತರಿಗೆ ಮೇವಿನ ಬೀಜದ ಕಿರು ● 6ನೇ ಪುಟಕ್ಕೆ

ಸಚಿವರ ತವರಲ್ಲೇ ವೈದ್ಯರ ಕೊರತೆ

ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ಅವರ ತವರು ಕ್ಷೇತ್ರ ಪಿರಿಯಾಪಟ್ಟಣದಲ್ಲೇ ಪಶು ವೈದ್ಯರ ಕೊರತೆ ಇರುವುದು ಸಭೆಯಲ್ಲಿ ಬಯಲಾಯಿತು. ವಿಭಾಗದ ಎಲ್ಲಾ ಜಿಲ್ಲೆಗಳಲ್ಲೂ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಇರುವುದಾಗಿ ಅಧಿ ಕಾರಿಗಳು ತಿಳಿಸಿದರು. ಮೈಸೂರು ಜಿಲ್ಲೆಯಲ್ಲಿ 16 ಸೇರಿ ವಿಭಾಗದಲ್ಲಿ ಸುಮಾರು 70 ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳಿದ್ದು, ಪಿರಿಯಾಪಟ್ಟಣ ತಾಲೂಕಿನಲ್ಲಿರುವ ಎರಡರಲ್ಲಿ ಒಂದಕ್ಕೆ ಪಶು ವೈದ್ಯರಿಲ್ಲ ಎಂಬುದು ಸಚಿವರಿಗೆ ಮನವರಿಕೆಯಾಯಿತು. ಈ ಬಗ್ಗೆ ಸಚಿವರು ಪ್ರತಿಕ್ರಿಯಿಸಿ, ಸಂಚಾರ ಚಿಕಿತ್ಸಾ ಘಟಕ ವಾಹನಗಳಿಗೆ ವೈದ್ಯರು ಹಾಗೂ ಪಾಲಿ ಕ್ಲಿನಿಕ್‌ಗಳಲ್ಲಿ ತಜ್ಞ ವೈದ್ಯರನ್ನು ನೇಮಕ ಮಾಡಬೇಕು. ಅಗತ್ಯವಿರುವ ಎಲ್ಲಾ ಹುದ್ದೆಗಳನ್ನೂ ಭರ್ತಿ ಮಾಡಲು ಸದ್ಯದ ಪರಿಸ್ಥಿತಿಯಲ್ಲಿ ಆಗುವುದಿಲ್ಲ. ಹಾಗಾಗಿ ಆದ್ಯತೆ ಮೇರೆಗೆ ನೇಮಕ ಮಾಡಿಕೊಂಡು, ಸೂಕ್ತ ಸೇವೆ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಹಾಸನ ಲೋಕಸಭಾ ಕ್ಷೇತ್ರದಿಂದ ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಸ್ಪರ್ಧೆ



ಹಾಸನ, ಡಿ.1(ಜಿಎ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹಾಸನ ಕ್ಷೇತ್ರದಿಂದ ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಅವರೇ ಸ್ಪರ್ಧಿಸಲಿದ್ದಾರೆ ಎಂದು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠರಾದ ಹೆಚ್.ಡಿ. ದೇವೇಗೌಡ ಘೋಷಣೆ ಮಾಡಿದ್ದಾರೆ.ಈ ಮೂಲಕ ಹಾಸನ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಸಂಬಂಧ ಕೇಳಿ ಬರುತ್ತಿದ್ದ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

ಹೊಳೆನರಸೀಪುರ ತಾಲೂಕಿನ ಕಟ್ಟೆ ಬೆಳಗುಲಿ ಶ್ರೀರಾಮದೇವರ ಕಟ್ಟೆಯಲ್ಲಿ ಶುಕ್ರವಾರ ನಡೆದ ಜೆಡಿಎಸ್ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್– ಬಿಜೆಪಿ ಒಟ್ಟಾಗಿ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಲು ತೀರ್ಮಾನ ಮಾಡಿದ್ದೇವೆ. ಪ್ರಜ್ವಲ್ ರೇವಣ್ಣ ಅವರೇ ಮರು ಸ್ಪರ್ಧೆ ಮಾಡಲಿದ್ದಾರೆ ಎಂದರು. ದೇಶದ ದೊಡ್ಡ ವ್ಯಕ್ತಿಯಾಗಿ ಬೆಳೆದಿರುವ ಮೋದಿ ಅವರೊಂದಿಗೆ ಜೆಡಿಎಸ್ ಸೇರಿದ್ದು, ಅಸೂಯೆ, ಟೀಕೆ ಮಾಡದೇ ಬಿಜೆಪಿ ಜೊತೆ ಸೇರಿ ಒಟ್ಟಾಗಿ ಕೆಲಸ ಮಾಡೋಣ. ಹಾಸನದ ಹಾಲಿ ಸಂಸದರನ್ನು ಗೆಲ್ಲಿಸಲು ಶ್ರಮಿಸೋಣ ಎಂದು ಕರೆ ನೀಡಿದರು.



ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಸೀಟು ಹಂಚಿಕೆಯ ಕುರಿತು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿ.ಎಸ್. ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಬಿ.ವೈ.ವಿಜಯೇಂದ್ರ, ಆರ್.ಅಶೋಕ್ ಕುಳಿತು ತೀರ್ಮಾನ ಮಾಡಲಿದ್ದಾರೆ. ಹಾಸನ ಕ್ಷೇತ್ರದ ಬಗ್ಗೆ ಯಾವುದೇ ಗೊಂದಲವಿಲ್ಲ. ಹಾಲಿ ಜೆಡಿಎಸ್ ಸಂಸದರಿದ್ದು, ● 6ನೇ ಪುಟಕ್ಕೆ

ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ದ ವಿದ್ಯಾರ್ಥಿನಿಯರೊಂದಿಗೆ ಮುಖ್ಯ ಶಿಕ್ಷಕ ಅನುಚಿತ ವರ್ತನೆ

● ಹೆಚ್.ಡಿ.ಕೋಟೆ ಬೀಚನಹಳ್ಳಿ ಶಾಲೆಯ ಮುಖ್ಯ ಶಿಕ್ಷಕ, ಗುಮಾಸ್ತನಿಗೆ ಪೋಷಕರಿಂದ ಗೂಸಾ!
● ಶಾಲೆಗೆ ಮುಖ್ಯ ಶಿಕ್ಷಕ ಅನಧಿಕೃತ ಗೈರು; ಅಟೆಂಡರ್ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನ

ಬೀಚನಹಳ್ಳಿ, ಡಿ.1(ಮಂಜು)–ಮಕ್ಕಳ ಭವಿಷ್ಯ ಬೆಳಗಬೇಕಾದ ಶಿಕ್ಷಕರೇ ಅವರ ಬಾಳಲ್ಲಿ ಕಂಟಕವಾಗಿ ಪರಿಣಮಿಸುತ್ತಿದ್ದಾರೆ. ಇದಕ್ಕೆ ತಾಜಾ ನಿದರ್ಶನವಿದು. ಮುಖ್ಯ ಶಿಕ್ಷಕ, ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ದಿದ್ದ ಅಮಾಯಕ ವಿದ್ಯಾರ್ಥಿನಿಯರ ಜೊತೆ ಅಸಭ್ಯವಾಗಿ ವರ್ತಿಸಿದ್ದಾನೆ. ಅದಕ್ಕೆ ತಕ್ಕ ಪಾಠವೆಂಬಂತೆ ಪೋಷಕರಿಂದ ಚೆನ್ನಾಗಿ ಗೂಸಾ ತಿಂದಿದ್ದಾನೆ. ಈ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್‌ಗೆ ಪೋಷಕರು ಧರ್ಮದೇಟು ನೀಡಿದ್ದಾರೆ.

ಘಟನೆಯ ನಂತರ ಮುಖ್ಯ ಶಿಕ್ಷಕ ನಾಗಣ್ಣ, ಇಲಾಖೆಯ ಗಮನಕ್ಕೆ ತಾರದೆ ಅನಧಿಕೃತವಾಗಿ ಗೈರಾಗಿದ್ದರೆ, ಅಟೆಂಡರ್ ರಮೇಶ್ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ ಹೆಚ್.ಡಿ.ಕೋಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.



ಮುಖ್ಯ ಶಿಕ್ಷಕ ನಾಗಣ್ಣ

ಬೀಚನಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ 8, 9 ಮತ್ತು 10ನೇ ತರಗತಿಯ ಸುಮಾರು 30 ಹೆಣ್ಣು ಮಕ್ಕಳು ಮತ್ತು 20 ಗಂಡು ಮಕ್ಕಳು ಸೇರಿ ಒಟ್ಟು 50 ವಿದ್ಯಾರ್ಥಿಗಳನ್ನು ನ.20ರಂದು ಬಸ್‌ನಲ್ಲಿ ಮುರುಡೇಶ್ವರ, ಗೋಕರ್ಣ, ಯಾಣ ಮತ್ತು ಜೋಗ್ ಜಲಪಾತ ಇನ್ನಿತರ ಪ್ರವಾಸಿ ತಾಣಗಳಿಗೆ ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ದಿದ್ದರು. ಪ್ರವಾಸದಲ್ಲಿ ಮುಖ್ಯ ಶಿಕ್ಷಕ ನಾಗಣ್ಣ, ಶಿಕ್ಷಕರಾದ ಚನ್ನನಾಯಕ, ರಘು, ವಾತ್ಸಲ್ಯ ಮತ್ತು ಕೋಕಿಲಾ ಅವರು ಉಸ್ತುವಾರಿ ವಹಿಸಿದ್ದು, ಸಹಾಯಕ್ಕಾಗಿ ಅಟೆಂಡರ್ ರಮೇಶ್‌ನನ್ನು ಕರೆದೊಯ್ಯಲಾಗಿತ್ತು. ಬಸ್ಸಿನಲ್ಲೇ ಪಾನಮತ್ತನಾಗಿದ್ದ ಮುಖ್ಯ ಶಿಕ್ಷಕ, ಮಾರ್ಗದುದ್ದಕ್ಕೂ ಮಕ್ಕಳೊಂದಿಗೆ ಅನುಚಿತವಾಗಿ ವರ್ತಿಸಿದ್ದಾನೆ. ವಿದ್ಯಾರ್ಥಿಗಳು ಮುರುಡೇಶ್ವರ ತಲುಪಿ, ಅಲ್ಲಿ ಸಮುದ್ರ ತೀರ(ಬೀಚ್)ದಲ್ಲಿ ನೀರಿನಲ್ಲಿ ಆಟವಾಡುವಾಗ, ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್, ಮಕ್ಕಳನ್ನು ತಬ್ಬಿಕೊಳ್ಳುವುದು, ಅವರೊಂದಿಗೆ ಅನುಚಿತವಾಗಿ ವರ್ತಿಸುವುದು ಮತ್ತು ಸಮುದ್ರ ಅಲೆಯ ನೀರನ್ನು ಅವರ ಮೈಮೇಲೆ ಎರಚಿ ಅಸಭ್ಯವಾಗಿ ವರ್ತಿ ಸುವುದು ಮಾಡಿದ್ದಾರೆ ಎನ್ನಲಾಗಿದೆ. ಮುಖ್ಯ ಶಿಕ್ಷಕ ಮತ್ತು ಅಟೆಂಡರ್‌ನ ಈ ಹೇಸಿಗೆ ವರ್ತನೆಯಿಂದ ಬೇಸತ್ತ ಮಕ್ಕಳು ಎಲ್ಲವನ್ನೂ ಸಹಿಸಿಕೊಂಡಿದ್ದಾರೆ.

ಪ್ರವಾಸ ಮುಗಿಸಿ ಊರಿಗೆ ಮರಳುವಾಗ ವಿದ್ಯಾರ್ಥಿನಿಯರು, ಜೊತೆಯಲ್ಲಿ ಬಂದಿದ್ದ ಇತರ ಶಿಕ್ಷಕರಿಗೆ, ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್ ತಮ್ಮೊಂದಿಗೆ ● 6ನೇ ಪುಟಕ್ಕೆ

ಅಟೆಂಡರ್ ಅಮಾನತು, ಮುಖ್ಯ ಶಿಕ್ಷಕನಿಗೆ ನೋಟಿಸ್


ಮೈಸೂರು, ಡಿ.1–ಪ್ರಕರಣಕ್ಕೆ ಸಂಬಂಧಿಸಿದಂತೆ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಅಟೆಂಡರ್ ರಮೇಶ್‌ನನ್ನು ಅಮಾನತುಗೊಳಿಸಲಾಗಿದ್ದು, ವಿವರಣೆ ಕೇಳಿ ಮುಖ್ಯ ಶಿಕ್ಷಕ ನಾಗಣ್ಣನಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಡಿಡಿಪಿಐ ಹೆಚ್.ಕೆ.ಪಾಂಡು ತಿಳಿಸಿದ್ದಾರೆ. ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಶೈಕ್ಷಣಿಕ ಪ್ರವಾಸದ ವೇಳೆ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್ ಅವರು ವಿದ್ಯಾರ್ಥಿನಿಯರೊಂದಿಗೆ ಅನುಚಿತವಾಗಿ ವರ್ತಿಸಿದ ಬಗ್ಗೆ ಬಿಇಓ ವರದಿ ನೀಡಿದ್ದರು ಎಂದರು. ವಿದ್ಯಾರ್ಥಿನಿಯರು, ಶಾಲಾ ಶಿಕ್ಷಕರು ಮತ್ತು ಪೋಷಕರುಗಳ ಹೇಳಿಕೆಯಿಂದ ಇವರಿಬ್ಬರು ಅನುಚಿತವಾಗಿ ವರ್ತಿಸಿರುವ ಬಗ್ಗೆ ಮಾಹಿತಿಗಳು ದೊರೆತಿದ್ದು, ● 10ನೇ ಪುಟಕ್ಕೆ



ಅಟೆಂಡರ್ ರಮೇಶ

ವಿಷಕಾರಿ ಚುಚ್ಚುಮದ್ದು ಚುಚ್ಚಿಕೊಂಡು ಕಾರಿನಲ್ಲೇ ಆಯುರ್ವೇದ ವೈದ್ಯ ಆತ್ಮಹತ್ಯೆ

● ಮೂಲತಃ ಪಾಂಡವಪುರ ತಾಲೂಕು ಶಿವಳ್ಳಿ ಗ್ರಾಮದ ಡಾ.ಸತೀಶ್ ಹೊರ ಗುತ್ತಿಗೆ ವೈದ್ಯರಾಗಿದ್ದರು ● ಕುಶಾಲನಗರ ಬಳಿ ಬೆಂಗಳೂರು–ಬಂಟ್ವಾಳ ಹೆದ್ದಾರಿಯಲ್ಲಿ ಕಾರಿನಲ್ಲಿ ಶವ ಪತ್ತೆ



ಕುಶಾಲನಗರ, ಡಿ.1–ಮಂಡ್ಯ ಮೂಲದ ಆಯುರ್ವೇದ ವೈದ್ಯರೊಬ್ಬರು ಕಾರಿನಲ್ಲೇ ಕುಳಿತು ವಿಷಕಾರಿ ಚುಚ್ಚುಮದ್ದು ಚುಚ್ಚಿಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಬೆಂಗಳೂರು–ಬಂಟ್ವಾಳ ರಾಷ್ಟ್ರೀಯ ಹೆದ್ದಾರಿಯ ಆನೆಕಾಡು ಬಳಿ ಶುಕ್ರವಾರ ನಡೆದಿದೆ.

ಮಂಡ್ಯ ಜಿಲ್ಲೆಯ ಪಾಂಡವಪುರ ಸಮೀಪದ ಶಿವಳ್ಳಿ ಗ್ರಾಮದಲ್ಲಿ ವೆಂಕಟೇಶ್ವರ ಕ್ಲಿನಿಕ್ ಹೆಸರಿನಲ್ಲಿ ಆಯುರ್ವೇದ ಚಿಕಿತ್ಸಾಲಯ ಹೊಂದಿದ್ದ ಡಾ. ಸತೀಶ್(47) ಆತ್ಮಹತ್ಯೆಗೆ ಶರಣಾದವರಾಗಿದ್ದು, ಇವರು ಪಿರಿಯಾಪಟ್ಟಣ ಮತ್ತು ಕೊಣನೂರು ಸರ್ಕಾರಿ ಆಯುರ್ವೇದ ಆಸ್ಪತ್ರೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು. ಶುಕ್ರವಾರ ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಆನೆಕಾಡು ಬಳಿ ರಾಷ್ಟ್ರೀಯ ಹೆದ್ದಾರಿಯ ರಸ್ತೆ ಅಂಚಿನಲ್ಲಿ ಸ್ವಿಫ್ಟ್ ಕಾರಿನ (ಕೆಎ 11–ಪಿ 1379) ಡ್ರೈವಿಂಗ್ ಸೀಟ್‌ನಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿರುವುದನ್ನು ಗಮನಿಸಿದ ಸಾರ್ವಜನಿಕರು ಗ್ರಾಮಾಂತರ ಠಾಣೆಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ಸ್ಥಳಕ್ಕೆ ಧಾವಿಸಿದ ಪೊಲೀಸ್ ಇನ್ಸ್‌ಪೆಕ್ಟರ್ ರಮೇಶ್ ಹಾಗೂ ಸಿಬ್ಬಂದಿ ಪರಿಶೀಲಿಸಿದಾಗ, ಡಾ. ಸತೀಶ್ ಅವರು ತಮ್ಮ ಕೈಗೆ ಚುಚ್ಚುಮದ್ದು ಚುಚ್ಚಿಕೊಂಡ ಮಾರ್ಕ್‌ಗಳು ಕಂಡುಬಂದಿವೆ. ಅಲ್ಲದೇ, ಕಾರಿನಲ್ಲಿ ಸಿರೀಂಜ್ ಮತ್ತು ಔಷಧಿ ಬಾಟಲ್ ಕೂಡ ದೊರೆತಿದೆ. ಜೇಬಿನಲ್ಲಿದ್ದ ಗುರುತಿನ ಚೀಟಿ ಹಾಗೂ ಡ್ರೈವಿಂಗ್ ಲೈಸೆನ್ಸ್ ಮೂಲಕ ಡಾ.ಸತೀಶ್ ಅವರ ಗುರುತು ಪತ್ತೆ ಹಚ್ಚಿದ ಪೊಲೀಸರು, ಕೊಣನೂರು ಮತ್ತು ಪಿರಿಯಾಪಟ್ಟಣ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಸಿಬ್ಬಂದಿಗಳನ್ನು ಸ್ಥಳಕ್ಕೆ ಕರೆಯಿಸಿ ಮೃತಪಟ್ಟವರು ಡಾ.ಸತೀಶ್ ಎಂಬುದನ್ನು ಖಚಿತಪಡಿಸಿಕೊಂಡಿದ್ದಾರೆ.


ಕೈನಲ್ಲಿ ಸ್ವತಃ ಚುಚ್ಚುಮದ್ದು ಹಾಕಿಕೊಂಡ ಗುರುತು ಹಾಗೂ ಕಾರಿನಲ್ಲಿ ಸಿರೀಂಜ್ ಮತ್ತು ಔಷಧಿಗಳು ದೊರೆತಿರುವುದು ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಕಂಡುಬಂದರೂ ಮರಣೋತ್ತರ ಪರೀಕ್ಷೆ ವರದಿ ಬಂದ ನಂತರವೇ ಅದು ಖಚಿತಪಡಬೇಕಾಗಿರುವುದರಿಂದ ಪೊಲೀಸರು ಸಂಶಯಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ಬುಧವಾರ ಮತ್ತು ಶನಿವಾರ ಕೊಣನೂರು ಸರ್ಕಾರಿ ಆಯುರ್ವೇದ ಆಸ್ಪತ್ರೆಗೆ ಹೋಗುತ್ತಿದ್ದ ಡಾ. ಸತೀಶ್, ಉಳಿದ ದಿನಗಳಲ್ಲಿ ಪಿರಿಯಾಪಟ್ಟಣ ಆಸ್ಪತ್ರೆಗೆ ● 10ನೇ ಪುಟಕ್ಕೆ

ಮೈಸೂರಿನ ಸುಚಿತ್ರಾ ಹೆಗಡೆ ಪ್ರತಿಷ್ಠಿತ ಅಮ್ಮ ಪ್ರಶಸ್ತಿಗೆ ಭಾಜನ



ಗುಲಬುರ್ಗದ ಸೇಡಂ ಪಟ್ಟಣದ ಐತಿಹಾಸಿಕ ಶ್ರೀ ಪಂಚಲಿಂಗೇಶ್ವರ ದೇವಾಲಯದ ಶಾಂಭವಿ ರಂಗಮಂಟಪದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಮಾತೋಶ್ರೀ ಮಹಾದೇವಮ್ಮ ನಾಗಪ್ಪ ಮುನ್ನೂರ್ ಪ್ರತಿಷ್ಠಾನವು ಕೊಡಮಾಡುವ 23ನೇ ವರ್ಷದ ರಾಜ್ಯ ಮಟ್ಟದ 'ಅಮ್ಮ ಪ್ರಶಸ್ತಿ'ಯನ್ನು ಮೈಸೂರಿನ ಸುಚಿತ್ರಾ ಹೆಗಡೆ ತಮ್ಮ 'ಜಗವ ಸುತ್ತುವ ಮಾಯೆ' ಪ್ರವಾಸ ಕಥನಕ್ಕಾಗಿ ಸ್ವೀಕರಿಸಿದರು. ಸಮಾರಂಭದಲ್ಲಿ ಖ್ಯಾತ ಸಂಸ್ಕೃತಿ ಚಿಂತಕ ಸಿದ್ದರಾಮಯ್ಯ, ಅಮ್ಮ ಪ್ರಶಸ್ತಿ ಸಂಚಾಲಕಿ ರತ್ನಕಲಾ ಮಹಿಪಾಲ ರೆಡ್ಡಿ ಇತರರು ಉಪಸ್ಥಿತರಿದ್ದರು.

'ಬೆಳಗಿನೊಳಗು ಮಹಾದೇವಿಯಕ್ಕ' ಕೃತಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ



ಮೈಸೂರು, ಡಿ.1–ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯು 2022ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಗೆ ಡಾ.ಎಚ್.ಎಸ್.ಅನುಪಮಾ ಅವರ 'ಬೆಳಗಿನೊಳಗು ಮಹಾದೇವಿಯಕ್ಕ' ಕೃತಿ ಆಯ್ಕೆಯಾಗಿದೆ.

ಡಾ. ಅನುಪಮಾರವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯವರು. ವೃತ್ತಿಯಲ್ಲಿ ವೈದ್ಯರು. ಇವರ ಸಾಹಿತ್ಯ ಹಾಗೂ ಸಮಾಜ ಸೇವೆಗೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ಸಂದಿವೆ. ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ಸಾಹಿತ್ಯ, ಧರ್ಮ, ಕಲೆ, ಸಂಸ್ಕೃತಿ ಕುರಿತಂತೆ ಪ್ರಕಟವಾಗುವ ಉತ್ತಮ ಕೃತಿಗೆ ಪ್ರತಿ ವರ್ಷವೂ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ನೀಡಲಾಗುತ್ತಿದೆ. 1983ರಲ್ಲಿ ಪ್ರಾರಂಭವಾದ ಈ ಪ್ರಶಸ್ತಿಯನ್ನು ಇದುವರೆಗೆ 34 ಕೃತಿಗಳಿಗೆ ನೀಡಲಾಗಿದೆ. ಪುರಸ್ಕೃತರಿಗೆ ಪ್ರಶಸ್ತಿ ಫಲಕ, ಸ್ವಸ್ತಿವಾಚನ, ಫಲತಾಂಬೂಲ ಹಾಗೂ 25,000 ರೂ.ಗಳ ಗೌರವಧನವನ್ನು ನೀಡಿ ಗೌರವಿಸಲಾಗುವುದು.



ಮೈಸೂರಿನ ಸುಬ್ರಮಣ್ಯ ನಗರ ಬಡಾವಣೆಯ ನಿವಾಸಿಗಳಿಂದ 68ನೇ ಸುವರ್ಣ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಇದೇ ವೇಳೆ ಭಾಷಾ ವಿಜ್ಞಾನಿ ಡಾ. ಅವರೆಕಾಡು ವಿಜಯಕುಮಾರ್ ಅವರನ್ನು ಸನ್ಮಾನಿಸಲಾಯಿತು. ಬಡಾವಣೆಯ ಹಿರಿಯ ನಿವಾಸಿಗಳಾದ ಕೆಂಪೇಗೌಡ, ನಾರಾಯಣಸ್ವಾಮಿ, ಕೃಷ್ಣೇಗೌಡ, ಬಾಲಸುಬ್ರಮಣ್ಯ, ಶ್ರೀನಿವಾಸ್, ಡಾ.ಸುಮಿತ್ರ ಹಾಗೂ ಇತರರು ಭಾಗವಹಿಸಿದ್ದರು.

ನಾಳೆ ವಿಶ್ವ ವಿಶೇಷಚೇತನರ ದಿನಾಚರಣೆ: ವಿವಿಧ ಸಾಧಕರಿಗೆ ಪ್ರಶಸ್ತಿ ಪ್ರದಾನ

ಮೈಸೂರು, ಡಿ.1–ಕರ್ನಾಟಕ ರಾಜ್ಯೋತ್ಸವ ಸುವರ್ಣ ಸಂಭ್ರಮ, ವಿಶ್ವ ವಿಶೇಷ ಚೇತನರ ದಿನಾಚರಣೆ ಸಂದರ್ಭದಲ್ಲಿ ಮೈಸೂರಿನ ಅಭಿರುಚಿ ಬಳಗದ ವತಿಯಿಂದ ವಿವಿಧ ಕ್ಷೇತ್ರಗಳ ಸಾಧಕರಿಗೆ ರಾಜ್ಯ ಮಟ್ಟದ ಪ್ರಶಸ್ತಿ ವಿತರಣೆ, ಕಲಾ ಪ್ರದರ್ಶನ ಹಾಗೂ ಅನುಭವಗಳ ಹಂಚಿಕೆ ಕಾರ್ಯಕ್ರಮವನ್ನು ಡಿ.3ರಂದು ಬೆಳಗ್ಗೆ 10.30ಕ್ಕೆ ನಮನ ಕಲಾಮಂಟಪದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಮೇಲುಕೋಟೆ ವೆಂಗೀ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಸುಮಾ ರಾಜ್‌ಕುಮಾರ್ ಭಾಗವಹಿಸುವರು. ಸುಮತಿ ಸುಬ್ರಹ್ಮಣ್ಯ ಅಧ್ಯಕ್ಷತೆ ವಹಿಸುವರು. ಅಭಿರುಚಿ ಬಳಗದ ಅಧ್ಯಕ್ಷ ಎನ್.ವಿ.ರಮೇಶ್ ಅವರು, ತಮ್ಮ 73ನೇ ವರ್ಷದ ಜನ್ಮದಿನದ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡುವರು.

ಅಭಿರುಚಿ ನಾಟಕ ರತ್ನ ಪ್ರಶಸ್ತಿ: ಎಸ್.ವಿ. ಶಾಂತಕುಮಾರ್ ಪಲ್ಲಗಟ್ಟೆ, ಶಿವಕುಮಾರ್ ಅಕ್ಕಿ, ಹೆಚ್.ಕೆ. ಶೇಖರಪ್ಪ, ಸಾವಿತ್ರಿ ರಿತ್ತಿ, ಜಿ ಎಸ್.ಎಲ್. ರಂಜನ್.

ಅಭಿರುಚಿ ಸಂಗೀತ ಮತ್ತು ನೃತ್ಯ ರತ್ನ ಪ್ರಶಸ್ತಿ: ಸಿ.ಎಸ್.ದೇವೇಂದ್ರ, ಎನ್.ಶಾಂತ ಕುಮಾರಿ. ಅಭಿರುಚಿ ಶಿಕ್ಷಣ ರತ್ನ ಪ್ರಶಸ್ತಿ ಪಡೆದವರು ಹೆಚ್.ಎಸ್. ನಿಜಗುಣಯ್ಯ ತಿಪಟೂರು, ಭಾಸ್ಕರ್ ಕೆ.ಆರ್. ನಗರ.

ಅಭಿರುಚಿ ಸಾಹಿತ್ಯ ರತ್ನ ಪ್ರಶಸ್ತಿ: ಯಶೋಧ ರಾಮಕೃಷ್ಣ, ಡಾ.ಟಿ. ತ್ಯಾಗರಾಜು, ದಿನಮಣಿ ಹೇಮರಾಜ್, ಮೀನಾಕ್ಷಿ (ಕೆಎಸ್‌ಆರ್‌ಟಿಸಿ) ಮೈ.ನ. ಲೋಕೇಶ್.

ಅಭಿರುಚಿ ವಿಜ್ಞಾನ ರತ್ನ ಪ್ರಶಸ್ತಿ : ವಿ. ವಿನೋದ್ ಕುಮಾರ್

ಅಭಿರುಚಿ ಮಾಧ್ಯಮ ರತ್ನ ಪ್ರಶಸ್ತಿ: ಸುಬ್ರಹ್ಮಣ್ಯ ನಾಡಿಗೇರ್ ಹಾಗೂ ಡಾ. ಡಿ.ಫ್ರಾನ್ಸಿಸ್ ಕ್ಷೇವಿಯರ್.

ಅಭಿರುಚಿ ಯುವ ರತ್ನ ಪ್ರಶಸ್ತಿ: ಡಿ.ಎನ್. ವಸಂತಕುಮಾರ್, ಅನಿಲ್‌ರಾಜ್ ಹಾಗೂ ಎಂ.ಸಿ.ಸೌಂದರ್ಯ, ರತ್ನ ಚಂದ್ರಶೇಖರ್ ಅವರು ಅಭಿರುಚಿ ಮಹಿಳಾ ರತ್ನ ಪ್ರಶಸ್ತಿ, ಅಭಿರುಚಿ ಸಮಾಜ ಸೇವಾ ರತ್ನ ಪ್ರಶಸ್ತಿಗೆ ರಾಮಕೃಷ್ಣ, ಅಮೀನಾ ಬೇಗಂ ಹಾಗೂ ಅಲಮೇಲಮ್ಮ ಆಯ್ಕೆಯಾಗಿದ್ದಾರೆ. ಸಂಜೆ 4 ಗಂಟೆಗೆ ಕವಿಗೋಷ್ಠಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರಿನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಂಘದ ಕಚೇರಿಯಲ್ಲಿ ಶ್ರೀ ಭಕ್ತ ಕನಕದಾಸರ 536ನೇ ಜಯಂತಿ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷ ಜಯನಗರ ಮಹೇಶ್, ಉಪಾಧ್ಯಕ್ಷ ಸುರೇಶ್ ಕುಮಾರ್ ಎಂ.ಎಸ್, ಕಾರ್ಯದರ್ಶಿ ರವಿಕುಮಾರ್, ಜಂಟಿ ಕಾರ್ಯದರ್ಶಿ ಪಳನಿ, ನಿರ್ದೇಶಕರಾದ ಚಂದ್ರೇಗೌಡ, ರುದ್ರಸ್ವಾಮಿ, ಸಂತೋಷ್ ಕುಮಾರ್ ಮತ್ತು ಸದಸ್ಯರಾದ ಕುಮಾರ್ ಉಪಸ್ಥಿತರಿದ್ದರು.

ಮಮತಾ ಶ್ರೀಧರರ ನೆನಪಿನ ಅಲೆಗಳು ಕೃತಿ ಲೋಕಾರ್ಪಣೆ



ಮೈಸೂರು, ಡಿ.1(ಬಿಎಲ್‌ಯು)– ಕವಯತ್ರಿ ಮಮತಾ ಶ್ರೀಧರ್ ವಿರಚಿತ 'ನೆನಪಿನ ಅಲೆಗಳು' ಕೃತಿ ಇಂದು ಲೋಕಾರ್ಪಣೆಗೊಂಡಿತು.

ವಿಜಯನಗರದ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ.ಸತೀಶ್ ಜಿ.ಹೊಸಮನೆ ಕೃತಿ ಬಿಡುಗಡೆ ಮಾಡಿದರು. ನೆನಪಿನ ಅಲೆಗಳು ಕೃತಿ ಬಗ್ಗೆ ಮಾತನಾಡಿದ ಪಂಪ ಪ್ರಶಸ್ತಿ ಪುರಸ್ಕೃತ ಡಾ.ಸಿ.ಪಿ.ಕೃಷ್ಣಕುಮಾರ್, ಕನ್ನಡ ಕಾವ್ಯ ಕ್ಷೇತ್ರಕ್ಕೆ ಹೊಸ ತಾರೆ ಪ್ರವೇಶವಾಗಿದೆ ಎಂದು ಹೇಳಿದರು.

ಒಟ್ಟು 76 ಪದ್ಯ ಪೋಣಿಸಿರುವ ಈ ಕೃತಿಯಲ್ಲಿ ಹೆಸರೇ ಹೇಳುವಂತೆ ನೆನಪಿನ ಬುತ್ತಿ ಇದೆ. ಪ್ರಸ್ತುತ ಸಂಗತಿಗಳನ್ನು ಉಲ್ಲೇಖಿಸಿರುವ ಮಮತಾ ಶ್ರೀಧರ್, ಗಹನವಾದ ಹಲವು ವಿಚಾರಗಳನ್ನು ದಾಖಲಿಸಿದ್ದಾರೆ ಎಂದರು.

ಪ್ರತಿಯೊಬ್ಬ ಕವಿ ಬೇರೆ ಯಾವುದೇ ಉದ್ದೇಶ ಇಟ್ಟುಕೊಳ್ಳದೆ ಕಾವ್ಯಗಳನ್ನು ಆತ್ಮ ಸಂತೋಷಕ್ಕೆ ಬರೆಯಬೇಕು ಎಂದು ಡಾ.ಸಿ.ಪಿ.ಕೃಷ್ಣಕುಮಾರ್ ಸಲಹೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅರಸು ಮಂಡಳಿ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗರಾಜೇ ಅರಸ್, ಕವಯತ್ರಿ ಮಮತಾ ಶ್ರೀಧರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪೈಪ್ ಒಡೆದು ಉದ್ಭವಿಸಿದ ದಿಢೀರ್ ಕಾರಂಜಿ

ಬನ್ನಿಮಂಟಪದಲ್ಲಿ ಲಕ್ಷಾಂತರ ಲೀಟರ್ ನೀರು ಪೋಲು

ಮೈಸೂರು, ಡಿ.1(ಬಿಎಲ್‌ಯು)– ಮೈಸೂರಿನ ಬನ್ನಿಮಂಟಪದ ಜೋಡಿ ತೆಂಗಿನ ಮರ ಸ್ಮಶಾನದ ಬಳಿ ಭಾರೀ ಗಾತ್ರದ ಪೈಪ್ ಒಡೆದು ದಿಢೀರ್ ಕಾರಂಜಿ ಉದ್ಭವಿಸಿದ್ದು, ಲಕ್ಷಾಂತರ ಲೀಟರ್ ನೀರು ಪೋಲಾಗುತ್ತಿದ್ದರೂ ನಗರ ಪಾಲಿಕೆಯವರು ಇತ್ತ ತಲೆ ಹಾಕಿಲ್ಲ.

ಕುಡಿಯುವ ನೀರಿಗೆ ಹಾಹಾಕಾರ ಪಡುತ್ತಿರುವ ಪರಿಸ್ಥಿತಿಯಲ್ಲಿ ಹನಿ ನೀರೂ ಅಮೃತವಿದ್ದಂತೆ ಎಂಬ ಮಾತು ಅಕ್ಷರಶಃ ಸತ್ಯ. ಉಳ್ಳವರು ಒಂದು ಲೀಟರ್ ನೀರಿಗೆ 20 ರೂಪಾಯಿ ಕೊಟ್ಟು ಅಂಗಡಿಗಳಲ್ಲಿ ಬಾಟಲ್ ನೀರು ಖರೀದಿಸಿ ಕುಡಿಯುತ್ತಾರೆ. ಆದರೆ ಜನಸಾಮಾನ್ಯರು ವಾಟರ್ ವರ್ಕ್ಸ್‌ನವರು ಪೂರೈಸಿದಾಗ ಸಂಗ್ರಹಿಸಿ ಬಳಸುವ ಅನಿವಾರ್ಯತೆ.

ಆದರೆ ನಗರದ ಬನ್ನಿಮಂಟಪದ ಜೋಡಿ ತೆಂಗಿನ ಮರ ಸ್ಮಶಾನದ ಬಳಿ ಬಾರೀ ಗಾತ್ರದ ಪೈಪ್ ಒಡೆದಿದೆ. ಪೈಪ್ ನಿಂದ ಕಾರಂಜಿಯಂತೆ ನೀರು ಚಿಮ್ಮುತ್ತಿದೆ.



ಪೈಪ್ ಒಡೆದು ನಾಲ್ಕೈದು ದಿನಗಳಾದರೂ ನಗರ ಪಾಲಿಕೆಯವರು ಇದನ್ನು ಗಮನಿಸಿಲ್ಲ. ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಸಿಬ್ಬಂದಿ ವಾಲ್ವ್ ನಿರ್ವಹಣೆಗಾಗಿ ಇದೇ ರಸ್ತೆಯಲ್ಲಿ ಪ್ರತಿ ದಿನ ಓಡಾಡುತ್ತಾರೆ. ಆದರೆ ಕಾರಂಜಿಯಂತೆ ನೀರು ಚಿಮ್ಮಿ ಲಕ್ಷಾಂತರ ಲೀಟರ್ ನೀರು ಪೋಲಾಗುತ್ತಿದ್ದರೂ ಇತ್ತ ಗಮನ ಹರಿಸಿಲ್ಲ. ಕುಡಿಯುವ ನೀರು ವ್ಯರ್ಥ ಮಾಡದಂತೆ ಅರಿವು ಮೂಡಿಸಲು ಸ್ತ್ರೀ ಶಕ್ತಿ ಸಂಘಗಳಿಗೆ ನಗರ ಪಾಲಿಕೆಯ ಅಧಿಕಾರಿಗಳು ಕಳೆದ 15 ದಿನದ ಹಿಂದೆ ಕಾರ್ಯಾಗಾರ ಆಯೋಜಿಸಿದ್ದರು. ಕುಡಿಯುವ ನೀರಿನ ಮಹತ್ವ ಸಾರುವಂತೆ ಸ್ತ್ರೀ ಶಕ್ತಿ ಸಂಘಗಳ ಮುಖ್ಯಸ್ಥರಿಗೆ ಮನವರಿಕೆ ಮಾಡಿದ್ದರು. ಆದರೆ ತಮ್ಮ ವ್ಯಾಪ್ತಿಗೊಳಪಡುವ ನೀರು ಸರಬರಾಜಿನ ಪೈಪ್‌ನಲ್ಲೇ ಲಕ್ಷಾಂತರ ಲೀಟರ್ ನೀರು ಪೋಲಾಗುತ್ತಿದ್ದರೂ ನಗರ ಪಾಲಿಕೆಯವರು ಈಗ ಕಣ್ಮುಚ್ಚಿ ಕುಳಿತಿದ್ದಾರೆ.



ನಾಳೆ ಚಾಮುಂಡಿಬೆಟ್ಟ ನಂದಿಗೆ ಮಹಾಭಿಷೇಕ

ಮೈಸೂರು, ಡಿ.1(ಜಿಎ)–ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ನಿಂದ ಡಿ.3ರಂದು ಬೆಳಿಗ್ಗೆ 8ಕ್ಕೆ ಚಾಮುಂಡಿ ಬೆಟ್ಟದ ನಂದಿಗೆ 18ನೇ ವರ್ಷದ ಮಹಾಭಿಷೇಕ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಎನ್.ಗೋವಿಂದ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಂದಿಗೆ 32 ರೀತಿಯ ಅಭಿಷೇಕ ಮಾಡಲಾಗುತ್ತಿದ್ದು, ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಹೊಸಮಠದ ಚಿದಾನಂದ ಸ್ವಾಮೀಜಿ, ಆದಿಚುಂಚನಗಿರಿ ಮಠದ ಸೋಮನಾಥ ಸ್ವಾಮೀಜಿ, ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಸ್.ಎಸ್.ಬನ್ನೂರಮಠ ಭಾಗವಹಿಸಲಿದ್ದಾರೆ ಎಂದರು. ಈ ಮಹಾ ಅಭಿಷೇಕಕ್ಕೆ ವಿವಿಧ ಸಂಘ–ಸಂಸ್ಥೆಗಳು ಕೈಜೋಡಿಸಿದ್ದು, 2.5 ಲಕ್ಷ ರೂ. ವೆಚ್ಚ ತಗುಲಲ್ಲಿದೆ. ಈ ಬಾರಿ ಸುಮಾರು 5 ಸಾವಿರಕ್ಕೂ ಅಧಿಕ ಭಕ್ತಾಧಿಗಳು ಭಾಗವಹಿಸುವ ನಿರೀಕ್ಷೆ ಇದ್ದು, ಅದಕ್ಕಾಗಿ ಪ್ರಸಾದ ವ್ಯವಸ್ಥೆಯನ್ನೂ ಮಾಡಲಾಗಿದೆ. ನಂದಿ ಬಳಿಗೆ ಆಗಮಿಸಲು ತಾವರೆಕಟ್ಟೆ ಮತ್ತು ಉತನಹಳ್ಳಿ ಎರಡು ಮಾರ್ಗಗಳು ಲಭ್ಯವಿದ್ದು, ಹೆಚ್ಚು ಜನ ಭಾಗವಹಿಸಿ



ಎಂದು ಮನವಿ ಮಾಡಿದರು. ಈ ವೇಳೆ ಟ್ರಸ್ಟಿ ಶಂಕರ್ ಮಾತನಾಡಿ, ನಂದಿಗೆ ಮೊದಲು ತಿಂಗಳಿಗೆ ಒಮ್ಮೆ ಎಣ್ಣೆಯ ಅಭಿಷೇಕ ನಡೆಸಲಾಗುತ್ತಿತ್ತು. ಆದರೆ, ಸ್ವಚ್ಛಗೊಳಿಸಿದ ನಂತರ ಯಾರಿಗೂ ಅವಕಾಶ ನೀಡದ ಪರಿಣಾಮ ನಂದಿಯ ಕೆಲವು ಭಾಗಗಳಲ್ಲಿ ಚಕ್ಕೆ ರೀತಿ ಉದುರುತ್ತಿದೆ. ಆದ್ದರಿಂದ ಜಿಲ್ಲಾಡಳಿತ ನಂದಿಗೆ ಎಣ್ಣೆ ಹಚ್ಚಲು ಟ್ರಸ್ಟ್‌ಗೆ ಅನುಮತಿ ನೀಡಬೇಕು. ಎಣ್ಣೆ ಇಲ್ಲದೇ ನಂದಿಯ ಸೌಂದರ್ಯ ಹಾಳಾಗಿದ್ದು, ಪ್ರಾಕೃತಿಕ ಸಮಸ್ಯೆಗೂ ತುತ್ತಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಪ್ರಕಾಶನ್, ಖಜಾಂಚಿ ಸುಂದರ್, ಅಭಿಷೇಕ ನಿರ್ವಹಣಾಧಿಕಾರಿ ಶಿವಕುಮಾರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.12.2023 ಶನಿವಾರ, ಮಳೆ ನಕ್ಷತ್ರ: ಅನುರಾಧ, 20.11.2023 ರಿಂದ 02.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ, ಕೃಷ್ಣ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ – ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಭಾಗವಹಿಸುವವರು ಮೈಸೂರಿನ ಚೇತನಾ ಮಹಿಳಾ ಸಮಾಜದ ಡಾ.ಜಯಶ್ರೀ ಬೆಂಗೇರಿ, 10.00 ಪಿ.ಗುರುಪ್ರಸಾದ್–ಸ್ಯಾಕ್ಸೋಫೋನ್ ವಾದನ

ಮಧ್ಯಾಹ್ನ : 12.30 ದೇವರನಾಮ, 12.45 ಜನಪದ ಸಂಗೀತ, 1.30 ಪ್ರಗತಿಪಥ, 1.20 ಭಾವಗೀತೆ, 3.30 ಮಕ್ಕಳ ಮಂಟಪ, 4.30 ನೆನಪಿನಂಗಳ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ– ಬಾನುಲಿ ಸರಣಿ, 8.00 ಯುವವಾಣಿ, 9.30 ಅಂಗವಿಕಲತೆಯ ಲಕ್ಷಣ ಮತ್ತು ಪ್ರಮಾಣಗಳೂ ಕುರಿತು ಡಾ. ಜಯಶ್ರೀ ಶಾನಬಾಳ ಅವರೊಡನೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ಸುಭಿಕ್ಷಾ ರಂಗರಾಜನ್ – ಹಾಡುಗಾರಿಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ಗಂಟೆವರೆಗೆ

■ **ಭಾರತೀಯ ಸ್ಟೇಟ್ ಬ್ಯಾಂಕ್ :** ಬೃಹತ್ ಗೃಹ ಮತ್ತು ಕಾರು ಸಾಲಗಳ ಉತ್ಸವ, ಸ್ಥಳ: ಜೆ.ಕೆ. ಮೈದಾನ, ಬೆಳಗ್ಗೆ 10 ರಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಕಲಾ ಸಂಭ್ರಮ, ಕಲೆಯೇ ಬದುಕಿನ ಭಾವಲಹರಿ, ರಾಜ್ಯ ಮಟ್ಟದ ಅಂತರ ಕಾಲೇಜುಗಳ ಚರ್ಚಾ ಸ್ಪರ್ಧೆ ಹಾಗೂ ಭಾವಗೀತೆ ಗಾಯನ ಸ್ಪರ್ಧೆ, ಉದ್ಘಾಟನೆ : ಸಾಹಿತಿ ಡಾ. ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲರಾಮಣ್ಣವರ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ. ನಾಗರಾಜು, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್. ಮರೀಗೌಡ, ಸ್ಥಳ:ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘ :** ಅಲ್ಯೂಮ್ನಿ ಮೀಟ್, ಅತಿಥಿಗಳು: ಡಾ. ಸಂಜಯ್, ಶ್ರೀಮತಿ ಅರ್ಚನಾ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಹೋಟೆಲ್ ರಿಯೋ ಮೆರಿಡೀಯನ್ ಬೆಳಗ್ಗೆ 10ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಶ್ರೀ ಮರಡಿಲಿಂಗೇಶ್ವರ ಪ್ರಕಾಶನ, ಅಮೃತೇಶ್ವರ ಪ್ರಕಾಶನ :** ಡಾ. ಸುಮಿತ್ರ ಅವರ ಮಳವಳ್ಳಿಯ ಇತಿಹಾಸ ಮತ್ತು ಸಂಸ್ಕೃತಿ ಸರ್ ಎಂ. ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆಗಳು ಕೃತಿಗಳ ಲೋಕಾರ್ಪಣೆ, ಕೃತಿಗಳ ಬಿಡುಗಡೆ : ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಸಚಿವ ಪ್ರೊ. ಕೆ.ಎಲ್.ಎನ್. ಮೂರ್ತಿ, ಕೃತಿ ಕುರಿತು ಮಾತನಾಡುವವರು : ಪ್ರಾಧ್ಯಾಪಕ ಪ್ರೊ. ವೈ.ಎಚ್. ನಾಯಕವಾಡಿ, ಕನ್ನಡ ಪ್ರಭ ಕಾರ್ಯನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನಕುಮಾರ್, ಆಶಯ ನುಡಿ : ಹಿರಿಯ ಸಾಹಿತಿ ಮ.ಸಿ. ನಾರಾಯಣ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಕೆ. ಕೆಂಪಯ್ಯ, ಶ್ರೀಮತಿ ಡಿ. ಚಂದ್ರಮ್ಮ, ಪ್ರಕಾಶಕ ಹೆಚ್.ಆರ್. ಮಂಜೇಗೌಡ, ಶ್ರೀಮತಿ ಐ.ಎನ್. ತ್ರಿವೇಣಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ :** ವಿಶ್ವ ಏಡ್ಸ್ ದಿನ, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಗೌರವ ಉಪಸ್ಥಿತರು : ಪಶು ಸಂಗೋಪನಾ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ: ಅಮೃತ ಮಹೋತ್ಸವ ಭವನ, ಜೆ.ಕೆ. ಮೈದಾನ, ಬೆಳಗ್ಗೆ 10.30ಕ್ಕೆ.

■ **ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ :** 2024ರ ಕ್ಯಾಲೆಂಡರ್, ಡೈರಿ ಬಿಡುಗಡೆ ಮತ್ತು ಪತ್ರಿಕೆ ವೆಬ್ ಆವೃತ್ತಿ ಲೋಕಾರ್ಪಣೆ ಕಾರ್ಯಕ್ರಮ, ಅಧ್ಯಕ್ಷತೆ : ನಿವೃತ್ತ ಪೊಲೀಸ್ ಮಹಾನಿರೀಕ್ಷಕ ಡಿ.ಎನ್. ಮುನಿಕೃಷ್ಣ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ಮಾಜಿ ಸಚಿವ ಎ. ಮಂಜು, ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, ಅಭಿನಂದಿತರು: ಸ್ಟಾರ್ ಆಫ್ ಮೈಸೂರ್ ಮತ್ತು ಮೈಸೂರು ಮಿತ್ರ ಸಂಸ್ಥಾಪಕ ಸಂಪಾದಕರು ಮತ್ತು ಮೈಸೂರು ವಿವಿ ಗೌರವ ಡಾಕ್ಟರೇಟ್ ಪುರಸ್ಕೃತರಾದ ಡಾ. ಕೆ.ಬಿ. ಗಣಪತಿ, ಲಾ ಗೈಡ್ ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆ: ನಿವೃತ್ತ ಜಿಲ್ಲಾ ನ್ಯಾಯಾಧೀಶ ಸಿ.ಜಿ. ಹುನಗುಂದ, ಲಾ ಗೈಡ್ ವೆಬ್ ಆವೃತ್ತಿ ಲೋಕಾರ್ಪಣೆ: ಸೀನಿಯರ್ ಡೈರೆಕ್ಟರ್ ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ ಕೆ. ವೆಂಕಟೇಶಮೂರ್ತಿ, ಅತಿಥಿಗಳು: ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಉಪಸ್ಥಿತರು: ಶ್ರೀಮತಿ ಶೈಲಜಾ ಧರ್ಮೇಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಮೆಟ್ರೋಪೋಲ್ ಹೋಟೆಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಬೆಂಗಳೂರು, ವಿದ್ಯಾ ವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್ :** ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ, ಕೇಶವಾನಂದ ಭಾರತಿ ತೀರ್ಪು, ಸುವರ್ಣ ಮಹೋತ್ಸವ ಹಾಗೂ ಮೌಲ್ಯಮಾಪನ, ಸಂವಿಧಾನಿಕ ನ್ಯಾಯಶಾಸ್ತ್ರದ ಮೇಲೆ ಆದ ಪ್ರಭಾವ, ಪರಿಣಾಮ ಮತ್ತು ಮಹತ್ವ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಸ್.ಆರ್. ಬನ್ನೂರು ಮಠ್, ಆಶಯ ನುಡಿ : ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ಸಾನ್ನಿಧ್ಯ: ಶ್ರೀ ಸಚ್ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ : ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ನಿರ್ದೇಶಕ ಕೆ. ದ್ವಾರಕನಾಥ್ ಬಾಬು, ಉಪಸ್ಥಿತರು: ವಿವಿಇಟಿ ಅಧ್ಯಕ್ಷ ಕೆ.ವಾಸು, ಕಾರ್ಯದರ್ಶಿ ಕವೀಶ್‌ಗೌಡ, ಸ್ಥಳ: ವಿದ್ಯಾ ವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ವಿದ್ಯಾವರ್ಧಕ ಕಾನೂನು ಕಾಲೇಜು ಪ್ರಾಂಶುಪಾಲರಾದ ಡಾ.ದೀಪಾ ಅವರಿಂದ ಭಾರತದ ಸಂವಿಧಾನ: ತಾತ್ವಿಕ ತಳಹದಿ ಕುರಿತು ಉಪನ್ಯಾಸ, ಅಧ್ಯಕ್ಷತೆ : ತತ್ವಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಡಾ.ಎಂ. ಡ್ಯಾನಿಯಲ್, ಸ್ಥಳ: ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ :** ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಮತ್ತು ಗಣಿತ ಸಂವಾದ ಕಾರ್ಯಕ್ರಮ, ಉಪಸ್ಥಿತರು : ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ. ಪಿ. ವೆಂಕಟರಾಮಯ್ಯ, ಪ್ರೊ. ಶಶಿಕಾಂತ್, ಡಾ. ಭಾಗ್ಯಲಕ್ಷ್ಮಿ, ಡಾ. ಎಸ್.ಎನ್. ಹೆಗ್ಡೆ, ಪ್ರೊ. ಎಸ್.ಎನ್. ಪ್ರಸಾದ್, ಡಾ. ಎಂ.ಎಸ್. ಚಂದ್ರಶೇಖರ, ಸ್ಥಳ: ಮಾನಸಗಂಗೋತ್ರಿ ವಿಜ್ಞಾನ ಭವನ, ಬೆಳಗ್ಗೆ 10.30 ರಿಂದ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ವಚನ ಗಾಯನ–ವಾಚನ–ವ್ಯಾಖ್ಯಾನ, ಉದ್ಘಾಟನೆ : ಡಾ. ಸಿ.ಪಿ. ಲಾವಣ್ಯ, ಬಹುಮಾನ ವಿತರಣೆ : ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಎ.ಆರ್. ಕಾಂತರಾಜು, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು.ಸದಾನಂದಯ್ಯ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಸಭಾಂಗಣ, ವಿಜಯನಗರ 2ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀಮತಿ ಸುಶೀಲಾಬಾಯಿ ಶ್ರೀ ನಾಗೇಶರಾವ್ ಎಜುಕೇಷನಲ್ ಮತ್ತು ಚಾರಿಟೆಬಲ್ ಟ್ರಸ್ಟ್, ವನಿತಾ ಸದನ :** ಪ್ರಾಥಮಿಕ ವಿಭಾಗದ ಸ್ಮಾರ್ಟ್ ತರಗತಿ ಉದ್ಘಾಟನಾ ಕಾರ್ಯಕ್ರಮ, ಉಪಸ್ಥಿತರು : ಶ್ರೀಮತಿ ನಾಗರತ್ನ, ಸೀತಾರಾಮ್, ಯಶಸ್ವಿನಿ ಜಗದೀಶ್, ಕುಮುದಮ್ಮ, ಬಿ.ಆರ್. ರವಿ, ಎನ್. ಭಾರತಿ, ಸ್ಥಳ: ವನಿತಾ ಸದನ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಕಾರ್ಯಕಾರಿ ಸಮಿತಿ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಸಂಘದ ಆವರಣ, ಮಧ್ಯಾಹ್ನ 12.30ಕ್ಕೆ.

■ **ಶ್ರೀ ಸಿದ್ದಪ್ಪಾಜಿ ದೇವಸ್ಥಾನ :** ಶ್ರೀ ಮಹಾಗಣಪತಿ ಶ್ರೀ ಸಿದ್ದಪ್ಪಾಜಿ ಶ್ರೀ ಸುಬ್ರಹ್ಮಣ್ಯಸ್ವಾಮಿ 13ನೇ ವರ್ಷದ ಕುಂಭಾಭಿಷೇಕ ಮಹೋತ್ಸವ, ಕುಂಭಾಭಿಷೇಕ ಅಲಂಕಾರ, ಮಹಾಮಂಗಳಾರತಿ, ಮ. 12.30ಕ್ಕೆ ತೀರ್ಥಪ್ರಸಾದ ವಿನಿಯೋಗ, ಸಾನ್ನಿಧ್ಯ : ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಸಂಸದ ಪ್ರತಾಪ್ ಸಿಂಹ, ಶಾಸಕ ಕೆ.ಹರೀಶ್‌ಗೌಡ, ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯರಾದ ಎಂ. ಶಿವಕುಮಾರ್, ಶ್ರೀಮತಿ ಲಕ್ಷ್ಮಿ ಮಾದೇಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಆರ್. ಲಿಂಗಪ್ಪ, ಪಾಲಿಕೆ ಸದಸ್ಯ ಗೋಪಿ, ನಗರ ಪಾಲಿಕೆ ಮಾಜಿ ಸದಸ್ಯರಾದ ಕೆ.ಎಂ. ಶಂಕರ್, ಕೆಂಪಣ್ಣ, ಚನ್ನಪ್ಪ, ನಿಂಗಣ್ಣ, ಎಸ್. ಬಾಲು, ಸ್ಥಳ: ಸಿದ್ದಪ್ಪಾಜಿ ದೇವಸ್ಥಾನ, ಕೆ.ಜಿ. ಕೊಪ್ಪಲು.

■ **ಅಂಗಳ ಸಾಹಿತ್ಯ ಬಳಗ, ಮಾನಸಗಂಗೋತ್ರಿ, ಲಡಾಯಿ ಪ್ರಕಾಶನ, ಗದಗ:** ಡಾ.ಎಚ್.ಎಸ್. ಅನುಪಮಾ ಅವರ ಜನಸೇವಾಸಕ್ತೆ ಯಶೋಧರ ದಾಸಪ್ಪ ಗಡಿ ದಾಟಿದ ಹೆಣ್ಣುಗಳ ಕಥನ, ಪ್ಲಾಸ್ಟಿಕ್ ಪರಿಸರ ಕೃತಿಗಳ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ: ಚಿಂತಕ ಜಿ.ಎಸ್.ಜಯದೇವ, ಮುಖ್ಯ ಅತಿಥಿಗಳು: ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಪುಸ್ತಕಗಳ ಕುರಿತು: ಹಿರಿಯ ಪತ್ರಕರ್ತರಾದ ದಿನೇಶ್ ಅಮೀನ್ ಮಟ್ಟು, ಎಸ್.ರಶ್ಮಿ, ಅಧ್ಯಕ್ಷತೆ: ಪ್ರೊ.ಆರ್.ಇಂದಿರಾ, ಉಪಸ್ಥಿತರು: ಬಸವರಾಜ ಸೂಳಿಬಾವಿ, ಡಾ.ಎಚ್.ಎಸ್. ಅನುಪಮಾ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ :** 68ನೇ ಕನ್ನಡ ರಾಜ್ಯೋತ್ಸವ, ಕನ್ನಡ ಹಬ್ಬ– ಗಾಯನೋತ್ಸವ, ಅಭಿನಂದನಾ ಸಮಾರಂಭ, ಉದ್ಘಾಟನೆ : ಕನ್ನಡ ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಶೇಷ ಆಹ್ವಾನಿತರು : ಶಾಸಕ ಸಿ.ಎನ್. ಮಂಜೇಗೌಡ, ಅಭಿನಂದಿತರು : ಪ್ರೊ. ಸಿ. ನಾಗಣ್ಣ, ಡಾ. ಬಿ.ಆರ್. ಚಂದ್ರಶೇಖರ್, ಅಭಿನಂದಿಸುವವರು : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಪ್ರಾಸ್ತಾವಿಕ ನುಡಿ : ಡಾ. ಈ.ಸಿ. ನಿಂಗರಾಜೇಗೌಡ, ಮುಖ್ಯ ಅತಿಥಿಗಳು : ಡಾ. ವೈ.ಡಿ. ರಾಜಣ್ಣ, ಡಾ. ರಘುರಾಂ ವಾಜಪೇಯಿ, ಮಹಾಸಭಾ ರಾಜ್ಯಾಧ್ಯಕ್ಷ ಎನ್. ಬೆಟ್ಟೇಗೌಡ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಂಜೆ 5.30 ರಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ ಅಂಗವಾಗಿ 28ನೇ ಸಂಗೀತ ಸಮ್ಮೇಳನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮೇಳನಾಧ್ಯಕ್ಷರು : ಮೃದಂಗ ವಾದಕ ವಿದ್ವಾನ್ ಎ.ವಿ. ಆನಂದ್, ಉದ್ಘಾಟನೆ : ಬೆಂಗಳೂರು ವಿಶ್ವವಿದ್ಯಾಲಯ (ಉತ್ತರ) ಕುಲಪತಿ ನಿರಂಜನ ವಾನಳ್ಳಿ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಗೋ. ಮಧುಸೂದನ್, ಸಂಜೆ 6.30ಕ್ಕೆ ಹೇರಂಬ ಮತ್ತು ಹೇಮಂತ ಅವರಿಂದ ದ್ವಂದ್ವ ಕೊಳಲು ವಾದನ, ವೈಭವ್ ರಮಣಿ–ವಯೋಲಿನ್, ಅರ್ಜುನ್ ಕುಮಾರ್–ಮೃದಂಗ, ಜಿ.ಎಸ್. ರಾಮಾನುಜನ್–ಘಟಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು ಆವರಣ, ಸರಸ್ವತಿಪುರಂ.

■ **ಯುವನಾಟ್ಯ ಶಾಲೆ, ಹೂಟಗಳ್ಳಿ :** 4ನೇ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಹಿರಿಯ ಭರತನಾಟ್ಯ ಕಲಾವಿದೆ ವಿದುಷಿ ಪಂಕಜಾ ರಾಮಕೃಷ್ಣಯ್ಯ, ಹಿರಿಯ ಕರ್ನಾಟಕ ಸಂಗೀತ ಗಾಯಕ ವಿದುಷಿ ಸಿ.ಎಸ್. ಲಕ್ಷ್ಮಿ, ವಿಷಯಾಧಾರಿತ ನೃತ್ಯ ಪ್ರದರ್ಶನ, ಯುವ ನಾಟ್ಯ ಶಾಲೆ ವಿದ್ಯಾರ್ಥಿಗಳಿಂದ ರಾಮಾಯಣ ದರ್ಶನಂ ನೃತ್ಯ ಪ್ರದರ್ಶನ, ನಟುವಾಂಗ–ಡಾ. ವಿದುಷಿ ಆನ್ ಕ್ಯಾಥರೀನ್ ಆರ್ಚರ್, ಗಾಯನ– ವಿದುಸಿ ಸಿ.ಎಸ್. ಲಕ್ಷ್ಮಿ, ಮೃದಂಗ–ವಿದ್ವಾನ್ ಎಂ.ಜೆ. ಕಿರಣ್ ಕುಮಾರ್, ಪಿಟೀಲು–ವಿದ್ವಾನ್ ಎಂ.ಎನ್. ಮಧುಸೂದನ್, ರಿದಮ್ ಪ್ಯಾಡ್–ವಿದ್ವಾನ್ ಸಿ.ಆರ್. ರಾಘವೇಂದ್ರ ಪ್ರಸಾದ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಕರ್ಮಯೋಗ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

140 ವರ್ಷ ಪೂರೈಸಿರುವ ಸ್ಮರಣೆಗಾಗಿ ಮೈಸೂರು ರೈಲು ನಿಲ್ದಾಣ ಮಹೋತ್ಸವ



ಮೈಸೂರು, ಡಿ. 1(ಆರ್‌ಕೆ)– 140 ವರ್ಷ ಪೂರೈಸಿರುವ ನೆನಪಿಗಾಗಿ ಇಂದು ಮೈಸೂರಲ್ಲಿ ರೈಲು ನಿಲ್ದಾಣ ಮಹೋತ್ಸವ ಆಚರಿಸಲಾಯಿತು.

ರೈಲು ನಿಲ್ದಾಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ನೈರುತ್ಯ ರೈಲ್ವೇ ಮೈಸೂರು ವಿಭಾಗೀಯ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಪದೇ ಪದೆ ಮರುಕಳಿಸುತ್ತಿದ್ದ ಕ್ಷಾಮಗಳಿಂದ ಜನರನ್ನು ರಕ್ಷಿಸಲೆಂದು ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಅಂದಿನ ಮೈಸೂರು ಸಾಮ್ರಾಜ್ಯದ ಆಡಳಿತಗಾರರು ರೈಲ್ವೇ ವ್ಯವಸ್ಥೆಯನ್ನು ಸ್ಥಾಪಿಸಿದ್ದನ್ನು ಸ್ಮರಿಸಿದರು.

ಮೈಸೂರು ರೈಲು ನಿಲ್ದಾಣವು ಐತಿಹಾಸಿಕ ಹಿನ್ನೆಲೆ ಹೊಂದಿದ್ದು, ಪ್ರಯಾಣಿಕರ ಅನುಕೂಲಕ್ಕಾಗಿ ಮೂಲ ಸೌಲಭ್ಯ ಒದಗಿಸಲಾಗುತ್ತಿದೆ. ಈಗ ವಿಶ್ವ ದರ್ಜೆಯ ನಿಲ್ದಾಣವನ್ನಾಗಿ ಮಾಡಲು ರೈಲ್ವೇ ಇಲಾಖೆಯು ಮುಂದಾಗಿದೆ ಎಂದು ನುಡಿದರು. ಮೈಸೂರು ರೈಲು ನಿಲ್ದಾಣದ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

1881ರ ಡಿಸೆಂಬರ್ 1ರಂದು ಮೈಸೂರು ಸಂಸ್ಥಾನವು ರೈಲು ನಿಲ್ದಾಣದ ಕಟ್ಟಡ ನಿರ್ಮಿಸಿ ಔಪಚಾರಿಕವಾಗಿ ಸೌಲಭ್ಯವನ್ನು ಒದಗಿಸಿತು. 86 ಮೈಲಿಗಳ ಮೀಟರ್ ಗೇಜ್ ರೈಲು ಮಾರ್ಗವನ್ನು ಕ್ಷಾಮ ಪರಿಹಾರಕ್ಕಾಗಿ ನಿರ್ಮಿಸಲಾಯಿತು. ದೂರದ ಗ್ರಾಮಗಳಿಗೆ ಆಹಾರ, ಧಾನ್ಯ ಸಾಗಿಸಿ ಪೂರೈಸುವುದು ಪ್ರಾಥಮಿಕ ಉದ್ದೇಶವಾಗಿತ್ತು. ರೈಲು ನಿಲ್ದಾಣದ ಸ್ಥಾಪನೆ ಇತಿಹಾಸ, ಪಾರಂಪರಿಕ ಕಟ್ಟಡ ಬಳಸುತ್ತಿರುವ ಉಪಕರಣಗಳು, ರೈಲು ಹಳಿಗಳು, ಸಾಗಿ ಬಂದ ದಾರಿ, ಅಭಿವೃದ್ಧಿ ಪಥದ ಬಗ್ಗೆ ಛಾಯಾಚಿತ್ರಗಳನ್ನು ಪ್ರದರ್ಶಿಸಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

ಕರ್ತವ್ಯನಿರತ ಪೊಲೀಸರು ಕಡ್ಡಾಯವಾಗಿ ಬಾಡಿ ವೋರ್ನ್ ಕ್ಯಾಮರಾ ಧರಿಸಬೇಕು

● ಪಾರದರ್ಶಕತೆ ಮೆರೆಯಲು, ಭ್ರಷ್ಟಾಚಾರ ಆರೋಪದಿಂದ ಮುಕ್ತರಾಗಿರಲು ಸಹಕಾರಿ; ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೂಚನೆ ● ಮೈಸೂರು ನಗರಕ್ಕೆ ಮಂಜೂರಾದ 30ರ ಪೈಕಿ 11 ಕ್ಯಾಮರಾ ಬಳಕೆ, ಜಿಲ್ಲಾ ಪೊಲೀಸ್ ಘಟಕದಲ್ಲಿ 54 ಕಾರ್ಯನಿರತ, ಬಹುತೇಕ ಸಂಚಾರ ಪೊಲೀಸರಿಗೆ ಉಪಯೋಗಕಾರಿ



ಸಂಚಾರ ಸಬ್ ಇನ್ಸ್‌ಪೆಕ್ಟರ್ ಲೇಪಾಕ್ಷ ಬಾಡಿ ವೋರ್ನ್ ಕ್ಯಾಮರಾದೊಂದಿಗೆ ಕರ್ತವ್ಯ ನಿರ್ವಹಿಸುತ್ತಿರುವುದು.

ಮೈಸೂರು, ಡಿ. 1(ಆರ್‌ಕೆ)–ಕರ್ತವ್ಯನಿರತ ಎಲ್ಲಾ ಪೊಲೀಸರೂ ದೇಹದಲ್ಲಿ ಕ್ಯಾಮರಾ ಧರಿಸುವಂತೆ (ಬಾಡಿ ವೋರ್ನ್ ಕ್ಯಾಮರಾ–ಬಿಡಬ್ಲ್ಯೂಸಿ) ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೂಚನೆ ನೀಡಿದ್ದಾರೆ. ಅಕ್ರಮ ಚಟುವಟಿಕೆಗಳು, ಭ್ರಷ್ಟಾಚಾರ, ಕಾನೂನು ಬಾಹಿರ ಕೃತ್ಯಗಳು ಪೊಲೀಸರಿಂದ ನಡೆಯುತ್ತವೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಕರ್ತವ್ಯದಲ್ಲಿದ್ದಾಗ ಎಲ್ಲರೂ ಕ್ಯಾಮರಾ ಧರಿಸಿ ಎಂದು ಅವರು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸುತ್ತೋಲೆ ಹೊರಡಿಸುವ ಮೂಲಕ ನಿರ್ದೇಶನ ನೀಡಿದ್ದಾರೆ.

ಗುಂಪು ಘರ್ಷಣೆ, ಜನಸಂದಣಿ, ವಿವಾದಾತ್ಮಕ ಘಟನೆಗಳು, ವಾಹನ ತಪಾಸಣೆಯಂತಹ ಸಂದರ್ಭಗಳಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸುವಾಗ ಎದುರಿನಲ್ಲಿರುವವರ ವರ್ತನೆ ಹಾಗೂ ಪೊಲೀಸರ ಪ್ರತಿಕ್ರಿಯೆಯನ್ನು ದಾಖಲಿಸುವುದರಿಂದ ಆ ಸ್ಥಳದಲ್ಲಿ ವಾಸ್ತವ, ಚಿತ್ರಣ ಈ ಕ್ಯಾಮರಾದಿಂದ ತಿಳಿಯುತ್ತದೆ ಎಂಬ ಕಾರಣಕ್ಕೆ ರಾಜ್ಯ ಪೊಲೀಸ್ ಮುಖ್ಯಸ್ಥ ಅಲೋಕ್ ಮೋಹನ್ ನಿರ್ಧಾರಕ್ಕೆ ಬಂದಿದ್ದಾರೆ.

ಪೊಲೀಸರು ಕರ್ತವ್ಯ ನಿರ್ವಹಿಸುವಾಗ ಉಂಟಾದ ಘರ್ಷಣೆಯಲ್ಲಿ ಕೆಲವೊಮ್ಮೆ ಜನರು ತಿರುಗಿ ಬಿದ್ದು ಅವಾಚ್ಯ ಶಬ್ದಗಳಿಂದ ನಿಂದಿಸಿ, ಪೊಲೀಸರ ಮೇಲೆ ಹಲ್ಲೆ ನಡೆಸುವ ಪ್ರಸಂಗಗಳೂ ನಡೆಯುತ್ತವೆ. ಕೆಲವು ಸಂದರ್ಭಗಳಲ್ಲಿ ಪೊಲೀಸರೂ ಸಹ ಅಧಿಕಾರ ಬಳಸಿಕೊಂಡು, ದುರ್ವರ್ತನೆ ತೋರುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಅಂತಹ ಅಹಿತಕರ ಘಟನೆಗಳನ್ನು ನಿಯಂತ್ರಿಸಲು ಇಂತಹ ಕ್ಯಾಮರಾಗಳನ್ನು ಕರ್ತವ್ಯನಿರತ ಪೊಲೀಸರು ಧರಿಸಬೇಕೆಂದು ಪೊಲೀಸ್ ಮಹಾನಿರ್ದೇಶಕರು ಸೂಚನೆ ನೀಡಿದ್ದಾರೆ.

ಕೆಲ ಅಧಿಕಾರಿಗಳು, ಸಿಬ್ಬಂದಿ, ಪ್ರಕರಣಗಳಲ್ಲಿ ಹಣಕ್ಕೆ ಡಿಮ್ಯಾಂಡ್ ಮಾಡುತ್ತಿದ್ದಾರೆ, ವೈಯಕ್ತಿಕ ಲಾಭಕ್ಕಾಗಿ ಅಮಾಯಕರಿಗೆ ತೊಂದರೆ ಉಂಟು ಮಾಡುತ್ತಾರೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಅವುಗಳಿಂದ ಮುಕ್ತವಾಗಲು ಎಲ್ಲಾ ಪೊಲೀಸರು ಕ್ಯಾಮರಾ ಬಳಸಬೇಕು. ಎಷ್ಟೋ ಸಂದರ್ಭ ಪೊಲೀಸರು ಪ್ರತ್ಯಕ್ಷರಾದಾಗ ಎಚ್ಚರಗೊಳ್ಳುತ್ತಾರೆ.


> ಕರ್ತವ್ಯನಿರತ ಎಲ್ಲಾ ಪೊಲೀಸರೂ ದೇಹದಲ್ಲಿ ಕ್ಯಾಮರಾ ಧರಿಸಬೇಕೆಂಬ ಪೊಲೀಸ್ ಮಹಾನಿರ್ದೇಶಕರ ಸುತ್ತೋಲೆ ನಮಗೆ ತಲುಪಿಲ್ಲ. ಒಂದು ವೇಳೆ ಆ ರೀತಿಯ ಆದೇಶ ಬಂದರೆ ಪೊಲೀಸ್ ಇಲಾಖೆ ಮುಖ್ಯಸ್ಥರ ನಿರ್ದೇಶನವನ್ನು ನಾವು ಪಾಲಿಸಬೇಕಾಗುತ್ತದೆ. ಈ ಹಿಂದೆ ಮೈಸೂರು ನಗರಕ್ಕೆ 30 ಕ್ಯಾಮರಾಗಳನ್ನು ಮಂಜೂರು ಮಾಡಲಾಗಿತ್ತು. ಆ ಪೈಕಿ 11 ಕ್ಯಾಮರಾಗಳನ್ನು ಬಳಸಲಾಗುತ್ತಿದೆ. ಹೊಸ ಆದೇಶದ ಪ್ರಕಾರ ಹೆಚ್ಚು ಕ್ಯಾಮರಾಗಳು ಬೇಕಾಗುತ್ತದೆ. ಅತೀ ಗಂಭೀರ ಪರಿಸ್ಥಿತಿಗಳಲ್ಲಿ ಅಗತ್ಯವಿದ್ದಾಗ ಈಗ ಅವುಗಳನ್ನು ಧರಿಸಿ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.
>
> 
>
> –ಬಿ.ರಮೇಶ್, ಮೈಸೂರು ನಗರ ಪೊಲೀಸ್ ಆಯುಕ್ತ

ಅದರಲ್ಲೂ ಕ್ಯಾಮರಾ ಹೊಂದಿದ ಪೊಲೀಸರೊಂದಿಗೆ ಅನುಚಿತವಾಗಿ ವರ್ತಿಸಲು ಹಿಂಜರಿಯುತ್ತಾರೆ ಎಂಬುದು ಇದರ ಮುಖ್ಯ ಉದ್ದೇಶವಾಗಿದೆ.

ದೇಹದಲ್ಲಿ ಕ್ಯಾಮರಾ ಧರಿಸಿದ್ದರೆ ಪೊಲೀಸರು ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ, ಏನು ಮಾತನಾಡುತ್ತಿದ್ದಾರೆ ಎಂಬ ಆಡಿಯೋ–ವಿಡಿಯೋ ಮೂಲಕ ತಿಳಿಯುವುದರಿಂದ ಪೊಲೀಸರ ನಡವಳಿಕೆ, ಕಾರ್ಯವೈಖರಿ, ವರ್ತನೆ ಎಲ್ಲವೂ ತಿಳಿಯುತ್ತದೆ. ಇದರಿಂದಲೂ ಪೊಲೀಸರ ದುರ್ವರ್ತನೆ, ಜೊತೆಗೆ ಸಾರ್ವಜನಿಕರ ಅಟ್ಟಹಾಸಕ್ಕೂ ಕಡಿವಾಣ ಹಾಕಿದಂತಾಗುತ್ತದೆ. ಮೈಸೂರು ನಗರದಲ್ಲಿ ಕಳೆದ 8 ವರ್ಷಗಳ ಹಿಂದೆ 2015ರಲ್ಲಿ ಗುಂಪು–ಘರ್ಷಣೆ, ಸಂಚಾರ ಪೊಲೀಸರ ಕಾರ್ಯಾಚರಣೆ ವೇಳೆ ಉಂಟಾಗುವ ವಿವಾದಗಳನ್ನು ನಿಯಂತ್ರಿಸುವ ಸಲುವಾಗಿ ಅಂದಿನ ಪೊಲೀಸ್ ಆಯುಕ್ತ ಬಿ. ದಯಾನಂದ ಪ್ರಥಮ ಬಾರಿ ದೇಹದಲ್ಲಿ ಧರಿಸುವಂತಹ ಕ್ಯಾಮರಾಗಳನ್ನು ಸಬ್ ಇನ್ಸ್‌ಪೆಕ್ಟರ್ ಮೇಲ್ಪಟ್ಟ ಅಧಿಕಾರಿಗಳಿಗೆ ನೀಡಿದ್ದರು.

30 ಕ್ಯಾಮರಾಗಳನ್ನು ಮೈಸೂರು ನಗರಕ್ಕೆ ಮಂಜೂರು ಮಾಡಲಾಗಿತ್ತು. ಅವುಗಳನ್ನು ಹೆಚ್ಚಾಗಿ ಸಂಚಾರ ಠಾಣೆ ಪೊಲೀಸರು ಬಳಸುತ್ತಿದ್ದರು. ಈಗ ಬೆಂಗಳೂರು ನಗರ ಪೊಲೀಸ್ ಆಯುಕ್ತರೂ ಆಗಿರುವ ದಯಾನಂದ ತಾವು ಸದಾ ಇಂತಹ ಕ್ಯಾಮರಾ ಧರಿಸಿಯೇ ಕರ್ತವ್ಯ ನಿರ್ವಹಿಸುತ್ತಿರುವುದು ಗಮನಾರ್ಹ. ಪ್ರಸ್ತುತ ಮೈಸೂರು ನಗರದಲ್ಲಿ 30ರ ಪೈಕಿ ಕೇವಲ 11, ಜಿಲ್ಲಾ ಪೊಲೀಸ್ ಘಟಕದಲ್ಲಿ 54 ಕ್ಯಾಮರಾಗಳನ್ನು ಬಳಸಲಾಗುತ್ತಿದೆ. ಅವುಗಳು ಸೆರೆಹಿಡಿಯುವ ದೃಶ್ಯಾವಳಿ ಹಾಗೂ ರೆಕಾರ್ಡ್ ಮಾಡುವ ಆಡಿಯೋ ಸಂಭಾಷಣೆಯನ್ನು ಎರಡೂ ಘಟಕಗಳ ಪೊಲೀಸ್ ಕಂಟ್ರೋಲ್ ರೂಂನ ಕಮಾಂಡ್ ಸೆಂಟರ್‌ಗಳಲ್ಲಿ ವೀಕ್ಷಿಸುವ ವ್ಯವಸ್ಥೆ ಇದೆ. ಇದೀಗ ರಾಜ್ಯ ಪೊಲೀಸ್ ಮುಖ್ಯಸ್ಥರ ಸುತ್ತೋಲೆಯನ್ವಯ ಪ್ರತಿಯೊಬ್ಬ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ದೇಹದಲ್ಲಿ ಧರಿಸುವ ಕ್ಯಾಮರಾಗಳನ್ನು ಧರಿಸಿಯೇ ಕರ್ತವ್ಯ ನಿರ್ವಹಿಸಬೇಕಾಗಿದೆ.

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿ ಪ್ರಕಟ



ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಶುಕ್ರವಾರ ಪ್ರಕಟಿಸಿದೆ.

ಇಂದು ಪರೀಕ್ಷಾ ಮಂಡಳಿಯ ವೆಬ್‌ಸೈಟ್‌ನಲ್ಲಿ ತಾತ್ಕಾಲಿಕ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದ್ದು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ಡಿಸೆಂಬರ್ 1 ರಿಂದ ಡಿಸೆಂಬರ್ 15ರವರೆಗೆ ಕಾಲಾವಕಾಶ ನೀಡಲಾಗಿದೆ. ತಾತ್ಕಾಲಿಕ ವೇಳಾಪಟ್ಟಿ ಪ್ರಕಟ ಪ್ರಕಾರ, ಮಾರ್ಚ್ 25ರಿಂದ ಏಪ್ರಿಲ್ 6ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನಡೆಯಲಿದ್ದು, ಮಾರ್ಚ್ 2, 2024ರಿಂದ ಮಾರ್ಚ್ 22, 2024ರವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿವೆ.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ: ಮಾರ್ಚ್ 25 ರಂದು ಪ್ರಥಮ ಭಾಷೆ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಇಂಗ್ಲಿಷ್ (ಎಸ್‌ಸಿಇಆರ್ ಟಿ), ಸಂಸ್ಕೃತ, ಮಾರ್ಚ್ 27ರಂದು ಸಮಾಜ ವಿಜ್ಞಾನ, ಮಾರ್ಚ್ 30 ರಂದು ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ/ಕರ್ನಾಟಕ ಸಂಗೀತ, ಎಪ್ರಿಲ್ 2 ರಂದು ಗಣಿತ, ಸಮಾಜ ಶಾಸ್ತ್ರ, ಎಪ್ರಿಲ್ 3 ರಂದು ಎಲಿಮೆಂಟ್ಸ್ ಆಫ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ – IV, ಎಲಿಮೆಂಟ್ಸ್ ಆಫ್ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್–2, ಎಲಿಮೆಂಟ್ಸ್ ಆಫ್ ಮೆಕ್ಯಾನಿಕಲ್ ಇಂಜಿನಿಯರಿಂಗ್–IV, ಇಂಜಿನಿಯರಿಂಗ್ ಗ್ರಾಫಿಕ್ಸ್– 2, ಎಲಿಮೆಂಟ್ಸ್ ಆಫ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್–IV ಪರೀಕ್ಷೆಗಳು ನಡೆಯಲಿವೆ, ಏಪ್ರಿಲ್ 4ರಂದು ತೃತೀಯ ಭಾಷೆ ಹಿಂದಿ (NCERT), ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳಾದ (ಮಾಹಿತಿ ತಂತ್ರಜ್ಞಾನ, ರಿಟೇಲ್, ಅಟೋಮೊಬೈಲ್, ಹೆಲ್ತ್ ಕೇರ್, ಬ್ಯೂಟಿ ಅಂಡ್ ವೆಲ್‌ನೆಸ್, ಅಪರೆಲ್ಸ್ ಮೇಡ್ ಅಪ್ಸ್ & ಹೋಮ್ ಫರ್ನಿಶಿಂಗ್ ಎಲೆಕ್ಟ್ರಾನಿಕ್ಸ್ & ಹಾರ್ಡ್‌ವೇರ್) ಪರೀಕ್ಷೆಗಳು ನಡೆಯಲಿವೆ, ಏಪ್ರಿಲ್ 6ಕ್ಕೆ ದ್ವಿತೀಯ ಭಾಷೆ(ಇಂಗ್ಲಿಷ್, ಕನ್ನಡ) ಪರೀಕ್ಷೆಗಳು ನಡೆಯಲಿವೆ.

ದ್ವಿತೀಯ ಪಿಯುಸಿ ವೇಳಾ ಪಟ್ಟಿ: ಮಾರ್ಚ್ 2 ರಂದು ಕನ್ನಡ, ಅರೇಬಿಕ್, ಮಾರ್ಚ್ 4ರಂದು ಇತಿಹಾಸ, ಭೌತಶಾಸ್ತ್ರ, ಮಾರ್ಚ್ 5 ರಂದು ಮಾಹಿತಿ ತಂತ್ರಜ್ಞಾನ, ರಿಟೈಲ್, ಅಟೋಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಅಂಡ್ ವೆಲ್ನೆಸ್, ಮಾರ್ಚ್ 6 ರಂದು ಸಮಾಜಶಾಸ್ತ್ರ, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ವಿಜ್ಞಾನ ಪರೀಕ್ಷೆಗಳು ನಡೆಯಲಿವೆ ಮಾರ್ಚ್ 7 ರಂದು ಹಿಂದಿ, ಮಾರ್ಚ್ 9 ರಂದು ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಮಾರ್ಚ್ 11 ರಂದು ಇಂಗ್ಲೀಷ್, ಮಾರ್ಚ್ 12 ರಂದು ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಾರ್ಚ್ 13ರಂದು ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ (Business Studies), ಮಾರ್ಚ್ 14ಕ್ಕೆ ಗಣಿತ, ಶಿಕ್ಷಣಶಾಸ್ತ್ರ ಪರೀಕ್ಷೆ, ಮಾರ್ಚ್ 16 ರಂದು ಭೌಗೋಳ ಶಾಸ್ತ್ರ, ಜೀವ ಶಾಸ್ತ್ರ, ಮಾರ್ಚ್ 18 ರಂದು ಹಿಂದೂಸ್ತಾನಿ ಸಂಗೀತ, ಸೈಕಾಲಜಿ, ಕೆಮಿಸ್ಟ್ರಿ, ಮೂಲ ಗಣಿತ, ಮಾರ್ಚ್ 20 ಐಚ್ಛಿಕ ಕನ್ನಡ, ಅಕೌಂಟನ್ಸಿ, ಭೂವಿಜ್ಞಾನ (Geology), ಗೃಹ ವಿಜ್ಞಾನ, ಮಾರ್ಚ್ 22ಕ್ಕೆ ಅರ್ಥಶಾಸ್ತ್ರ ಪರೀಕ್ಷೆ ನಡೆಯಲಿದೆ.

10, 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ CBSE ಯಾವುದೇ ಡಿವಿಷನ್, ಡಿಸ್ಟಿಂಕ್ಷನ್ ನೀಡುವುದಿಲ್ಲ

ನವದೆಹಲಿ: ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ಯಾವುದೇ ಡಿವಿಷನ್ ಅಥವಾ ಡಿಸ್ಟಿಂಕ್ಷನ್ ನೀಡುವುದಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ. ಯಾವುದೇ ಒಟ್ಟಾರೆ ವಿಭಾಗ, ಡಿಸ್ಟಿಂಗ್ಷನ್ ಅಥವಾ ಅಂಕಗಳ ಒಟ್ಟು ಮೊತ್ತವನ್ನು ನೀಡಲಾಗುವುದಿಲ್ಲ. ಅಲ್ಲದೆ, ಅಭ್ಯರ್ಥಿಯು ಐದಕ್ಕಿಂತ ಹೆಚ್ಚು ವಿಷಯಗಳನ್ನು ತೆಗೆದುಕೊಂಡಿದ್ದರೆ, ಅದರಲ್ಲಿ ಅತ್ಯುತ್ತಮ ಐದು ವಿಷಯಗಳನ್ನು ನಿರ್ಧರಿಸುವ ಅಧಿಕಾರವನ್ನು ಆಯಾ ಸಂಸ್ಥೆ ಅಥವಾ ಉದ್ಯೋಗದಾತರಿಗೆ ನೀಡಲಾಗಿದೆ ಎಂದು CBSE ಪರೀಕ್ಷಾ ನಿಯಂತ್ರಕ ಸಂಯಮ್ ಭಾರದ್ವಾಜ್ ಅವರು ಹೇಳಿದ್ದಾರೆ. ಮಂಡಳಿಯು ಶೇಕಡಾವಾರು ಅಂಕಗಳನ್ನು ಲೆಕ್ಕ ಹಾಕುವುದಿಲ್ಲ, ಘೋಷಿಸುವುದಿಲ್ಲ ಅಥವಾ ತಿಳಿಸುವುದಿಲ್ಲ ಎಂದು ಭಾರದ್ವಾಜ್ ಹೇಳಿದ್ದಾರೆ.

ಉನ್ನತ ಶಿಕ್ಷಣ ಅಥವಾ ಉದ್ಯೋಗದಲ್ಲಿ ಶೇಕಡಾವಾರು ಅಂಕಗಳ ಅಗತ್ಯವಿದ್ದರೆ, ಆಯಾ ಶಿಕ್ಷಣ ಸಂಸ್ಥೆ ಅಥವಾ ಉದ್ಯೋಗದಾತರು ಲೆಕ್ಕಹಾಕಬಹುದು ಎಂದು ಅವರು ತಿಳಿಸಿದ್ದಾರೆ. ಈ ಹಿಂದೆ, ಅನಾರೋಗ್ಯಕರ ಸ್ಪರ್ಧೆಯನ್ನು ತಪ್ಪಿಸಲು ಅಃಖಇ ಮೆರಿಟ್ ಪಟ್ಟಿಗಳನ್ನು ಪ್ರಕಟಿಸುವ ವ್ಯವಸ್ಥೆಯನ್ನು ಸಹ ತೆಗೆದುಹಾಕಿದೆ.

ಮೈಸೂರಲ್ಲಿ ಇಂದು 'ಗ್ರಾವೆಲ್ ಫೆಸ್ಟ್' ಕಾರ್ ರೇಸ್

ಮೈಸೂರು, ಡಿ. 1(ಆರ್‌ಕೆ)– ಆಟೋಮೋಟಿವ್ ಸ್ಪೋರ್ಟ್ಸ್ ಕ್ಲಬ್ ಆಫ್ ಮೈಸೂರ್ (ಅಸ್ಕಾಮ್) ಸಂಸ್ಥೆಯು ನಾಳೆ (ಡಿ. 2) ಮೈಸೂರಿನ ಲಲಿತ ಮಹಲ್ ಪ್ಯಾಲೆಸ್ ಮೈದಾನದಲ್ಲಿ 'ಗ್ರಾವೆಲ್ ಫೆಸ್ಟ್–2023' ಕಾರ್ ರೇಸ್ ಆಯೋಜಿಸಿದೆ.

ಶನಿವಾರ ಮಧ್ಯಾಹ್ನ 3.30 ಗಂಟೆಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಲಲಿತ ಮಹಲ್ ಪ್ಯಾಲೆಸ್ ಹೋಟೆಲ್ ಮುಂದೆ ಮೈಸೂರು ಗ್ರಾವೆಲ್ ಫೆಸ್ಟ್ ಕಾರ್ ರೇಸ್‌ಗೆ ಚಾಲನೆ ನೀಡುವರು. ದೇಶದ ವಿವಿಧ ಭಾಗಗಳ ಉತ್ಕೃಷ್ಟ ಚಾಲಕರು ರೇಸ್‌ನಲ್ಲಿ ಭಾಗವಹಿಸುವರು. ಆ ಪೈಕಿ ಭಾರತದ ಅತೀ ವೇಗದ ಮಹಿಳಾ ಚಾಲಕಿ ಪ್ರಗತಿಗೌಡ, ಡೆನ್ ತಿಮ್ಮಯ್ಯ, ಹರಿಕೃಷ್ಣ ವಾಡಿಯ, ಚೇತನ ಶಿವರಾಂ, ಧ್ರುವ ಚಂದ್ರಶೇಖರ್, ಯೂನಸ್ ಇಲಿಯಾಸ್, ನಿಖಿತ ಟಾಕಲೆ ಅವರುಗಳೂ ರೇಸ್‌ನಲ್ಲಿ ಸ್ಪರ್ಧಿಸುವರು.

ವಿಜೇತರು ಮೈಸೂರು ಗ್ರಾವೆಲ್ ಕಿಂಗ್–2023 ಕಿರೀಟವನ್ನು 2 ಲಕ್ಷ ರೂ. ನಗದು ಬಹುಮಾನದೊಂದಿಗೆ ಅಲಂಕರಿಸಲಿದ್ದಾರೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಅರುಣ್ ಅರಸ್ (7760314123) ಅವರನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕೋಶಾಧ್ಯಕ್ಷ ವರುಣಾ ಮಹೇಶ್ ಅವರು ಶತಾಯುಷಿ ಭೀಮಣ್ಣ ಕಂಡ್ರೆ ಅವರನ್ನು ಬೀದರ್‌ನಲ್ಲಿ ಭೇಟಿ ಮಾಡಿ ಆಶೀರ್ವಾದ ಪಡೆದರು. ಈ ವೇಳೆ ವನ್ಯಜೀವಿ ಮಂಡಳಿ ಸದಸ್ಯ ಮಲ್ಲೇಶ್ ಇದ್ದರು.

ಮಧ್ಯಪ್ರದೇಶ, ರಾಜಸ್ತಾನದ ಕಾಂಗ್ರೆಸ್ ಅಭ್ಯರ್ಥಿಗಳ ರಕ್ಷಣೆ ಉಸ್ತುವಾರಿಯನ್ನು ವರಿಷ್ಠರು ನನಗೆ ನೀಡಿಲ್ಲ

● ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟನೆ
● ಸ್ಥಳೀಯವಾಗಿಯೇ ನಾನಾ ವ್ಯವಸ್ಥೆ ಮಾಡಿಕೊಂಡಿದ್ದಾರೆ

ಬೆಂಗಳೂರು, ಡಿ.1(ಕೆಎಂಶಿ)–ಮಧ್ಯ ಪ್ರದೇಶ ಹಾಗೂ ರಾಜಸ್ತಾನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಪಕ್ಷದ ಅಭ್ಯರ್ಥಿಗಳನ್ನು ಕರೆತಂದು, ಅವರನ್ನು ರಕ್ಷಣೆ ಮಾಡುವ ಉಸ್ತುವಾರಿಯನ್ನು ಪಕ್ಷದ ವರಿಷ್ಠರು ನನಗೆ ನೀಡಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಂಚರಾಜ್ಯಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಎಲ್ಲೆಡೆ ಗೆಲ್ಲುವ ವಿಶ್ವಾಸ ನನಗಿದೆ. ಚುನಾವಣೆಯಲ್ಲಿ ಆಯ್ಕೆಗೊಂಡ ಶಾಸಕರು ಎಲ್ಲೂ ಹೋಗುವುದಿಲ್ಲ, ಅವರನ್ನು ರಕ್ಷಣೆ ಮಾಡುವ ಅಗತ್ಯವಿಲ್ಲ. ಕೆಲವು ಮಾಧ್ಯಮಗಳಲ್ಲಿ ಇಂತಹ ಸುದ್ದಿ ನೋಡಿದ್ದೇನೆ. ತೆಲಂಗಾಣ ಸೇರಿದಂತೆ ಕೆಲವು ಕಡೆ ನಮ್ಮ ಅಭ್ಯರ್ಥಿಗಳನ್ನು ಬೇರೆ ಪಕ್ಷದವರು ಸಂಪರ್ಕಿಸುತ್ತಿದ್ದಾರೆ ಎಂಬ ಮಾಹಿತಿ ಇದೆ ಎಂದರು.

ರಾತ್ರಿಯಿಡೀ ಕಾದಿದ್ದರೂ ಚಳ್ಳೆಹಣ್ಣು ತಿನ್ನಿಸಿ ಕಾಲ್ಕಿತ್ತ ಹುಲಿರಾಯ

● ಹತ್ಯೆ ಮಾಡಿದ್ದ ಜಾನುವಾರು ಮಾಂಸ ಭಕ್ಷಣೆಗೆ ಬಂದು ವಾಪಸ್ಸಾದ ಹುಲಿ
● ಕಳೆದ ರಾತ್ರಿ 8.11ಕ್ಕೆ ಬೋನ್ ಬಳಿ ಬಂದು ವಾಪಸ್ಸಾದ ದೃಶ್ಯ ಸೆರೆ
● ಬ್ಯಾತಹಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ, ಸಿಂಧುವಳ್ಳಿ ಬಳಿ ಮುಂದುವರೆದ ಕಾರ್ಯಾಚರಣೆ



ಕಳೆದ ರಾತ್ರಿ ಕ್ಯಾಮರಾ ಟ್ರ್ಯಾಪ್‌ನಲ್ಲಿ ಸೆರೆಸಿಕ್ಕ ಹುಲಿ ಚಿತ್ರ

ಮೈಸೂರು, ಡಿ.1(ಎಂಟಿವೈ)– ಕಾಡಿನಿಂದ ವಲಸೆ ಬಂದು ಬೀತಿಯನ್ನುಂಟು ಮಾಡಿರುವ ಹುಲಿ ಕಾರ್ಯಾಚರಣೆ ಮುಂದುವರೆದಿದ್ದು, ಕಳೆದ ರಾತ್ರಿ ಬೋನಿನ ಬಳಿ ಬಂದ ಹುಲಿ ಅರಣ್ಯ ಸಿಬ್ಬಂದಿಗಳಿಗೆ ಚಳ್ಳೆಹಣ್ಣು ತಿನ್ನಿಸಿ ದಿನವಿಡೀ ಕಣ್ಮರೆಯಾಗಿದೆ.

ಮೈಸೂರು ತಾಲೂಕಿನ ದೊಡ್ಡಕಾನ್ಯ ಬಳಿ ಹತ್ಯೆ ಮಾಡಿದ್ದ ಜಾನುವಾರು ಕಳೇಬರ ದೊಡ್ಡ ಬೋನ್‌ನಲ್ಲಿಟ್ಟು ಸೆರೆ ಹಿಡಿಯಲು ಅರಣ್ಯ ಇಲಾಖೆ ರಾತ್ರಿಯಿಡೀ ಕಾರ್ಯಾಚರಣೆ ಮುಂದುವರೆಸಿತ್ತು. ರಾತ್ರಿ 8.11 ನಿಮಿಷಕ್ಕೆ ಜಾನುವಾರು ಮೃತದೇಹ ಭಕ್ಷಿಸಲು ಬೋನಿನ ಬಳಿ ಬಂದ ಹುಲಿ, ತಕ್ಷಣವೆ ಎಚ್ಚೆತ್ತುಕೊಂಡು ಬೋನ್‌ವೊಳಗೆ ನುಸುಳದೆ ಕಾಲ್ಕಿತ್ತಿದೆ. ಜಾನುವಾರು ಮೃತದೇಹವಿದ್ದ ಬೋನ್ ಸಮೀಪವೇ ಮತ್ತೊಂದು ಬೋನ್‌ನಲ್ಲಿ ಅರವಳಿಕೆ ಚುಚ್ಚುಮದ್ದಿನೊಂದಿಗೆ ಕಾಯುತ್ತಿದ್ದ ಪಶುವೈದ್ಯರಿಗೂ ಸಿಗದೆ ಹುಲಿ ಪರಾರಿಯಾಗಿದೆ. ಹುಲಿಯನ್ನು ಸುರಕ್ಷಿತವಾಗಿ ಸೆರೆ ಹಿಡಿಯಲು ಪಣತೊಟ್ಟಿರುವ ಅರಣ್ಯ ಇಲಾಖೆ ಕಳೆದ 3–4 ದಿನಗಳಿಂದಲೂ ಕಾರ್ಯಾಚರಣೆ ಮುಂದುವರೆಸಿದೆ. ರಾತ್ರಿ ಬಂದು ಹೋದ ಹುಲಿ ಮತ್ತೆ ಬರಬಹುದೆಂದು ಕಾಯುತ್ತಿದ್ದ ಅರಣ್ಯ ಸಿಬ್ಬಂದಿಗಳಿಗೆ ಚಳ್ಳೆಹಣ್ಣು ತಿನ್ನಿಸಿದೆ. ರಾತ್ರಿ ಹಿಂದಿರುಗಿದ ಹುಲಿ ವಿವಿಧೆಡೆ ಅಳವಡಿಸಿರುವ ಕ್ಯಾಮರಾ ಟ್ರ್ಯಾಪ್‌ನಲ್ಲಿ ಎಲ್ಲಿಯೂ ಸೆರೆ ಸಿಕ್ಕಿಲ್ಲ. ಇದರಿಂದ ಅರಣ್ಯ ಸಿಬ್ಬಂದಿಗಳು ಹುಲಿ ಜಾಡು ಪತ್ತೆಗೆ ಚಿಂತೆಗೀಡಾಗಿದ್ದರು. ಅಲ್ಲದೆ, ತಾಲೂಕಿನ ಬ್ಯಾತಹಳ್ಳಿ, ಸಿಂಧುವಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜಮೀನಿನಲ್ಲಿ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲಾಗಿದೆ. ಸ್ಥಳದಲ್ಲಿ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್ ಡಾ. ಬಸವರಾಜು, ಎಸಿಎಫ್ ಲಕ್ಷ್ಮೀಕಾಂತ್ ಸೇರಿದಂತೆ ಇನ್ನಿತರರು ಬೀಡು ಬಿಟ್ಟಿದ್ದಾರೆ.

ವದಂತಿ ಹಬ್ಬಿಸಬೇಡಿ, ಹುಲಿ ಸೆರೆಗೆ ಸಹಕರಿಸಿ

ಕಳೆದ 5–6 ದಿನಗಳಿಂದಲೂ ಗ್ರಾಮಗಳಲ್ಲಿ ಓಡಾಡುತ್ತಿದ್ದರೂ ಜನರ ಮೇಲೆ ದಾಳಿ ಮಾಡದೇ ಕೇವಲ ಜಾನುವಾರುಗಳನ್ನಷ್ಟೇ ಬಲಿ ಪಡೆಯುತ್ತಿರುವ ಹುಲಿಯಿಂದ ಆಗಬಹುದಾದ ಮಾನವ ಪ್ರಾಣ ಹಾನಿ ತಡೆಗಟ್ಟಲು ಅರಣ್ಯ ಇಲಾಖೆ ಶಕ್ತಿಮೀರಿ ಪ್ರಯತ್ನಿಸಿದ್ದರೂ, ಕೆಲವರು ಹಬ್ಬಿಸುತ್ತಿರುವ ವದಂತಿ ಹಾಗೂ ಸುಳ್ಳು ಮಾಹಿತಿ ಅರಣ್ಯ ಸಿಬ್ಬಂದಿಗಳನ್ನು ದೃತಿಗೆಡಿಸುತ್ತಿದೆ. ಇಂದು ದೊಡ್ಡಕಾನ್ಯ ಬಳಿ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ತೊಡಗಿದ್ದ ಅರಣ್ಯ ಸಿಬ್ಬಂದಿಗಳಿಗೆ 17 ಸೆಕೆಂಡ್ ಇರುವ ವಿಡಿಯೋವೊಂದನ್ನು ಸ್ಥಳೀಯರು ವೈರಲ್ ಮಾಡಿ ರಾತ್ರಿ 7.45ರಲ್ಲಿ ಬೀರ ಫ್ಯಾಕ್ಟರಿ ರಸ್ತೆಯಲ್ಲಿ ಹುಲಿ ಕಾಣಿಸಿಕೊಂಡಿದೆ ಎಂದು ವೈರಲ್ ಮಾಡಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿದ ಅರಣ್ಯ ಸಿಬ್ಬಂದಿ, ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಹುಲಿ ಹೆಜ್ಜೆ ಗುರುತು ಪತ್ತೆಯಾಗಿಲ್ಲ. ಅಲ್ಲದೆ, ಆ ರಸ್ತೆಯ ಹಲವೆಡೆ ಅಳವಡಿಸಿರುವ ಕ್ಯಾಮರಾ ಟ್ರ್ಯಾಪ್‌ನಲ್ಲೂ ಹುಲಿ ದೃಶ್ಯ ಸೆರೆಯಾಗಿಲ್ಲ. ಇದರಿಂದ ವಿಡಿಯೋ ವೈರಲ್ ಸುಳ್ಳು ಸುದ್ದಿಯಾಗಿದೆ ಎಂದು ಅರಣ್ಯ ಸಿಬ್ಬಂದಿಗಳು ಖಚಿತಪಡಿಸಿಕೊಂಡು ಮತ್ತೆ ದೊಡ್ಡಕಾನ್ಯ ಬಳಿ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಿದರು.

ಉಳ್ಳವರಿಗೊಂದು, ಉಳ್ಳದವರಿಗೊಂದು ಕಾನೂನು!

ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆ ಹಿಂಪಡೆಯುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಮಾಜಿ ಸಚಿವ, ಬಿಜೆಪಿ ಮುಖಂಡ ಸಿ.ಟಿ.ರವಿ ತೀಕ್ಷ್ಣ ಪ್ರತಿಕ್ರಿಯೆ

ಮೈಸೂರು, ಡಿ.1(ಎಂಕೆ)–ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮೇಲಿನ ಸಿಬಿಐ ತನಿಖೆ ಪ್ರಕರಣವನ್ನು ವಾಪಸ್ ತೆಗೆದುಕೊಂಡ ರಾಜ್ಯ ಕಾಂಗ್ರೆಸ್ ಸರ್ಕಾರ ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡುವ ಮೂಲಕ ಸಂವಿಧಾನಕ್ಕೆ ಅಪಚಾರ ಮಾಡಿದೆ. ಅಲ್ಲದೆ ಇದನ್ನು ಸಮರ್ಥಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜಕೀಯ ಇತಿಹಾಸದಲ್ಲಿ ಇದೊಂದು ಕರಾಳ ಅಧ್ಯಾಯ ಎಂದು ಮಾಜಿ ಸಚಿವ ಸಿ.ಟಿ.ರವಿ ವಾಗ್ದಾಳಿ ನಡೆಸಿದರು.

ಶುಕ್ರವಾರ ನಗರ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆ ಪ್ರಕರಣವನ್ನು ವಾಪಸ್ ತೆಗೆದುಕೊಂಡಿರುವುದಲ್ಲದೆ ಅದನ್ನು ಸಮರ್ಥಿಸಿಕೊಳ್ಳುವುದು ಸರಿಯಲ್ಲ. ಇದು ಸಂವಿಧಾನಕ್ಕೆ ಮಾಡಿರುವ ಅಪಚಾರ. ಬಲಾಢ್ಯರ ವಿರುದ್ಧ ಇರುವ ತನಿಖೆ ಪ್ರಕರಣಗಳನ್ನು ವಾಪಸ್ ಪಡೆಯುತ್ತಲಿದ್ದರೆ ಕಾನೂನು ಏಕೆ ಬೇಕು? ಇದೇ ರೀತಿ ಮುಂದುವರೆದರೆ ಉಳ್ಳವರಿಗೊಂದು ಕಾನೂನು, ಉಳ್ಳದವರಿಗೊಂದು ಕಾನೂನು ಎಂದಾಗುತ್ತದೆ. ಅಲ್ಲದೆ ಇದನ್ನು ಸ್ವತಃ ಸಿಎಂ ಸಿದ್ದರಾಮಯ್ಯ ಅವರೇ ಸಮರ್ಥಿಸಿಕೊಳ್ಳುತ್ತಿರುವುದು ದುರದೃಷ್ಟಕರ ಎಂದು ಕಿಡಿಕಾರಿದರು.



ಸಾಮಾಜಿಕ ಕ್ಷೋಭೆ: ಕಾಂತರಾಜ್ ವರದಿ ಕುರಿತು ಮಾತನಾಡಿದ ಅವರು, ಜಾತಿ ಹೆಸರಿನಲ್ಲಿ ಸಾಮಾಜಿಕ ಕ್ಷೋಭೆ ಸೃಷ್ಟಿಸುವ ಕೆಲಸವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಮಾಡಲು ಹೊರಟಿದೆ. ನಮಗಿರುವ ಮಾಹಿತಿ ಪ್ರಕಾರ ಸುಮಾರು 1 ಕೋಟಿಗೂ ಅಧಿಕ ಜನರ ಸಮೀಕ್ಷೆಯೇ ನಡೆದಿಲ್ಲ. ಅದಕ್ಕಾಗಿಯೇ ಸದಸ್ಯ ಕಾರ್ಯದರ್ಶಿ ವರದಿಗೆ ಸಹಿ ಹಾಕಲಿಲ್ಲವಾ.. ಎಂಬ ಅನುಮಾನ ಮೂಡಿದೆ. ಜಾತಿ ಜನಗಣತಿ ಜಾರಿ ವಿಚಾರದಲ್ಲಿ ಕಾಂಗ್ರೆಸ್ ನಡೆ ಸಂಶಯ ಹುಟ್ಟುಹಾಕುತ್ತಿದೆ ಎಂದು ದೂರಿದರು. ಹಿಂದುಳಿದ, ಬಡವರ ಹಾಗೂ ಆರ್ಥಿಕ ಸಂಕಷ್ಟದಲ್ಲಿರುವವರಿಗೆ ಸಾಮಾಜಿಕ ನ್ಯಾಯ ಕೊಡಿಸುವ ಉದ್ದೇಶವಿದ್ದರೆ ಸಮೀಕ್ಷೆ ನಡೆಸಿ, ಹೊಸ ಯೋಜನೆಗಳನ್ನು ಕೈಗೊಳ್ಳಬೇಕಿತ್ತು. ಹಿಂದೂ ಎಂದರೆ ಬಿಜೆಪಿಗೆ ಮತ ಹಾಕಿಬಿಡುತ್ತಾರೆ ಎಂಬ ಭಯ ಹಾಗೂ ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಜಾತಿಗಳನ್ನು ಕಲಕಿ ಮತ ಎಂಬ ಮೀನನ್ನು ಹಿಡಿಯುವ ಕೆಲಸವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದರು.

> ಬೆಂಗಳೂರು ಶಾಲೆಗಳಿಗೆ ಬೆದರಿಕೆ ಕರೆ ವಿಚಾರವಾಗಿ ಸಮಗ್ರ ತನಿಖೆ ಆಗಬೇಕು. ಸರ್ಕಾರ ಈ ಘಟನೆಯನ್ನು ಲಘುವಾಗಿ ಪರಿಗಣಿಸಬಾರದು. ಅಗತ್ಯವಿದ್ದರೆ ಕೇಂದ್ರದ ಸಹಾಯ ಪಡೆದು ಬೆದರಿಕೆ ಹಾಕಿದವರನ್ನು ಮಟ್ಟ ಹಾಕಬೇಕು.
>
> – ಸಿ.ಟಿ.ರವಿ, ಮಾಜಿ ಸಚಿವ

ಎನ್‌ಇಪಿ ಜಾರಿಯಾಗಲಿ: ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಬದಲು ರಾಜ್ಯ ಶಿಕ್ಷಣ ನೀತಿ(ಎಸ್‌ಇಪಿ) ಜಾರಿಗೆ ಮುಂದಾಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಬಡವರು, ಹಿಂದುಳಿದ ಹಾಗೂ ದಲಿತರ ಮಕ್ಕಳಿಗೆ ಶಿಕ್ಷಣ ಸಿಗಬಾರದೆಂಬ ಸಂಚು ರೂಪಿಸಿದೆ. ಎನ್‌ಇಪಿ ಪ್ರೋತ್ಸಾಹಿಸಿ ಕೋಟಿ ಸಹಿ ಸಂಗ್ರಹ ಅಭಿಯಾನ ಪ್ರಾರಂಭವಾಗಿದ್ದು, ಸಹಿ ಸಂಗ್ರಹ ಮಾಡಿ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ನೀಡುತ್ತೇವೆ. ಎಸ್‌ಇಪಿಯಿಂದ ದಲಿತ, ಹಿಂದುಳಿದ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ತೊಂದರೆ ಆಗಲಿದೆ ಎಂದು ಹೇಳಿದರು.

ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸಲು ಹೊರ ರಾಜ್ಯದವರನ್ನೊಳಗೊಂಡ ಸಮಿತಿ ರಚನೆ ಮಾಡಲಾಗಿದೆ. ಸಮಿತಿಯಲ್ಲಿ ಮಹಾರಾಷ್ಟ್ರ ಸುಖದೇವ್ ಥೋರಟ್ ಅಧ್ಯಕ್ಷರಾಗಿದ್ದು, ಸಂಜಯ್ ಕೌಲ್, ಸುಧಾಂಶು ಭೂಷಣ್, ಯೋಗೇಂದ್ರ ಯಾದವ್ ಸೋಮನ್ ವಾಂಗ್ ಚುಕ್ ಹೀಗೆ ಎಲ್ಲರೂ ಹೊರ ರಾಜ್ಯದವರು. ಎಸ್‌ಇಪಿ ರೂಪಿಸಲು ನಮ್ಮ ರಾಜ್ಯದವರಿಗೆ ಶಕ್ತಿ ಇಲ್ಲ ಎಂಬುದನ್ನು ರಾಜ್ಯ ಸರ್ಕಾರ ಭಾವಿಸಿದಂತಿದೆ ಎಂದು ವ್ಯಂಗ್ಯವಾಡಿದರಲ್ಲದೆ ಡಿ.ಕೆ.ಶಿವಕುಮಾರ್, ಡಾ.ಪರಮೇಶ್ವರ್, ಎಂ.ಬಿ.ಪಾಟೀಲ್ ಅವರ ಶಾಲೆಗಳಲ್ಲಿ ಬಡವರ ಮಕ್ಕಳಿಗೆ ಅಡ್ಮಿಷನ್ ಸಿಗುತ್ತಾ...? ನಿಮ್ಮ ರಾಜಕೀಯ ತೆವಲಿಗಾಗಿ ಮಕ್ಕಳಿಗೆ ಮೋಸ ಮಾಡಬೇಡಿ. ಆಧುನಿಕ ತಂತ್ರಜ್ಞಾನ, ಕೌಶಲ್ಯಾಧಾರಿತ ಶಿಕ್ಷಣವನ್ನೊಳಗೊಂಡ ಎನ್‌ಇಪಿ ಶಿಕ್ಷಣ ನೀಡಿ ಎಂದು ಆಗ್ರಹಿಸಿದರಲ್ಲದೆ ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಬರ, ಎನ್‌ಇಪಿ ಜಾರಿ ಕುರಿತು ಬಿಜೆಪಿ ಚರ್ಚಿಸಲಿದೆ ಎಂದರು.

ಜನಾದೇಶಕ್ಕೆ ತಲೆ ಭಾಗುತ್ತೇವೆ: ಪಂಚ ರಾಜ್ಯಗಳ ಚುನಾವಣೆ ಕುರಿತು ಮಾತನಾಡಿದ ಅವರು, ಕಳೆದ ಐದು ವರ್ಷದ ಹಿಂದಿನ ಚುನಾವಣಾ ಫಲಿತಾಂಶಕ್ಕಿಂತಲೂ ಈ ಬಾರೀ ಬಿಜೆಪಿಗೆ ಹೆಚ್ಚಿನ ಸ್ಥಾನ ಬರುವ ನಿರೀಕ್ಷೆ ಇದೆ. ಅಲ್ಲದೆ ನಾವು ಜನಾದೇಶಕ್ಕೆ ತಲೆ ಬಾಗುತ್ತೇವೆ. ಕಾಂಗ್ರೆಸ್‌ನಂತೆ ಸೋತರೆ ಇವಿಎಂ ಮೀಷನ್ ದುರ್ಬಳಕೆ, ಗೆದ್ದರೆ ಮೋದಿ ವಿರುದ್ಧ ಜನಾದೇಶ ಎನ್ನುವುದಿಲ್ಲ. ಉಚಿತ ಕೊಡುಗೆಗಳಿಂದ ಅಧಿಕಾರಕ್ಕೆ ಬಂದಿದ್ದೇವೆ ಎಂಬುದನ್ನು ಒಪ್ಪಿಕೊಂಡಿರುವ ಕಾಂಗ್ರೆಸ್, 50–60 ವರ್ಷ ಆಳ್ವಿಕೆ ನಡೆಸಿದರೂ ಜನರನ್ನು ಸ್ವಾವಲಂಬಿಗಳನ್ನಾಗಿ ಮಾಡಿಲ್ಲ ಎಂಬುದನ್ನು ಸಹ ಒಪ್ಪಿಕೊಂಡಂತಾಗಿದೆ ಎಂದು ಕುಟುಕಿದರು. ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾಧ್ಯಕ್ಷ ಮಂಗಳ ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮುಖಂಡರಾದ ಮೋಹನ್, ಹೇಮಂತ್ ಕುಮಾರ್ ಗೌಡ, ಗಿರಿಧರ್, ಯೋಗಾನಂದ, ಕೇಬಲ್ ಮಹೇಶ್, ಮಹೇಶ್ ರಾಜೇ ಅರಸ್ ಮತ್ತಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : "ನಿನ್ನ ತಾಯಿಯನ್ನು ಜೊತೆಯಲ್ಲಿ ಕರೆದುಕೊಂಡು ಬರಬೇಡ ಅಂತ ತಂತಿ ಕೊಟ್ಟಿದ್ದೆನಲ್ಲ, ಮತ್ತೆ ಯಾಕೆ ಕರೆದುಕೊಂಡು ಬಂದೆ?"

ಹೆಂಡತಿ : "ಹೌದು, ನೀವೇನೋ ತಂತಿ ಕೊಟ್ರಿ, ಅದೇನು ಸಮಾಚಾರ ಅಂತ ತಿಳಿಯೋಕೆ ಬಂದಿದ್ದಾರೆ ನಮ್ಮ ತಾಯಿ!"

ಮೈಸೂರು ಮಿತ್ರ
ಶನಿವಾರ, 2 ಡಿಸೆಂಬರ್ 2023
ಸತ್ಯೇನೋತ್ಪದ್ಯತೇ ಧರ್ಮಃ!! ನಹಿ ಸತ್ಯಾತ್ಪರೋ ಧರ್ಮಃ!
(ಧರ್ಮವು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಚಿನ್ನ ಮತ್ತು ಬೆಳ್ಳಿ ಮಾತ್ರವೇ ನಾಣ್ಯಗಳಲ್ಲ. ಗುಣವೂ ನಾಣ್ಯವೇ. ಜಗತ್ತಿನೆಲ್ಲೆಡೆ ಚಲಾವಣೆಯಾಗುವ ನಾಣ್ಯವದು –ಸಾಫೋಕ್ಲಸ್

ವೇದ ಸುಳ್ಳಾದರೂ { ಆರಂಭದ ಬಡ ಕಷ್ಟ
ಗಾದೆ ಸುಳ್ಳಾಗದು { ಅಧಿಕಾರದ ತುದಿ ಕಷ್ಟ

ನಿಮ್ಮ ಪತ್ರಗಳು

ಕುಮಾರ ಸ್ವಾಮಿಯವರ ಹಗಲು ಕನಸು

ಮಾನ್ಯರೆ,

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಲಿವೆ ಎಂದು ಮಡಿಕೇರಿಯಲ್ಲಿ ತಿಳಿಸಿರುವ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹಗಲು ಕನಸು ಕಾಣುತ್ತಿರುವ ಹಾಗೆ ಕಾಣಿಸುತ್ತಿದೆ. ಇದು ಅವರ ಅತಿಯಾದ ಆತ್ಮ ವಿಶ್ವಾಸವೋ ಅಥವಾ ಒಣ ಜಂಬದ ಮಾತುಗಳೋ ಎಂಬುದನ್ನು ಅವರೇ ಸ್ಪಷ್ಟಪಡಿಸಬೇಕು.

ಜಾತ್ಯಾತೀತ ಜನತಾ ದಳ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಗೆದ್ದಿರುವ ಸ್ಥಾನ ಕೇವಲ 19. ಇನ್ನು ಭಾರತೀಯ ಜನತಾ ಪಕ್ಷ ಗೆದ್ದಿರುವುದು 65 ಸ್ಥಾನ ಮಾತ್ರ. ಕಾಂಗ್ರೆಸ್ 135 ಸ್ಥಾನಗಳನ್ನು ಗಳಿಸಿ, ಪೂರ್ಣ ಬಹುಮತದಿಂದ ಸರ್ಕಾರ ರಚಿಸಿದೆ. ವಾಸ್ತವ ಸ್ಥಿತಿ ಹೀಗಿರುವಾಗ, ಆಡಳಿತಾರೂಢ ಪಕ್ಷಕ್ಕೆ ಒಂದೇ ಒಂದು ಸ್ಥಾನ ಸಿಗಲಾರದೆಂಬ ಕುಮಾರಸ್ವಾಮಿಯವರ ಭವಿಷ್ಯವನ್ನು ನಂಬಲು ರಾಜ್ಯದ ಜನತೆ ಮೂಢರಲ್ಲ. ಇಂತಹ ಕ್ಷುಲಕ ಹೇಳಿಕೆಗಳನ್ನು ನೀಡುವ ಮೂಲಕ ಕುಮಾರ ಸ್ವಾಮಿಯವರು ಅಪಹಾಸ್ಯಕ್ಕೆ ಈಡಾಗುವುದು ಬೇಡ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕಲ್ಯಾಣಿ ಶುಚಿಗೊಳಿಸಿ ತಡೆಗೋಡೆ ನಿರ್ಮಿಸಿ



ಮಾನ್ಯರೆ,

ಮೈಸೂರಿನ ಸರಸ್ವತಿಪುರಂನಲ್ಲಿರುವ ಔಷಧ ಗಿಡಮೂಲಿಕೆಗಳ ಸಸ್ಯತೋಟ 'ಚಂದ್ರವನ'ದ ಪಕ್ಕದಲ್ಲಿಯೇ ಒಂದು ಕಲ್ಯಾಣಿ ಇದೆ. ಈ ಕಲ್ಯಾಣಿಗೆ ಯಾವುದೇ ತಡೆಗೋಡೆ ಇಲ್ಲ. ರಸ್ತೆಯೂ ಪೂರ ಹಾಳಾಗಿದೆ. ಆದ ಕಾರಣ ರಸ್ತೆಯಲ್ಲಿನ ತ್ಯಾಜ್ಯ ಹಾಗೂ ಆಸುಪಾಸಿನಲ್ಲೇ ಇರುವ ಮ್ಯಾನ್ ಹೋಲ್‌ಗಳ ಕಲುಷಿತ ನೀರು ಮಳೆ ಬಂದಾಗ ಉಕ್ಕಿ ಹರಿದು ಕಲ್ಯಾಣಿ ಸೇರುತ್ತಿದೆ. ಪಕ್ಕದಲ್ಲಿಯೇ ಶನೇಶ್ವರಸ್ವಾಮಿ ದೇವಸ್ಥಾನ ಹಾಗೂ ಮೈಸೂರು ವಿವಿ ಈಜುಕೊಳವಿದೆ. ಈ ಮಾರ್ಗವಾಗಿ ಪ್ರತಿನಿತ್ಯ ನೂರಾರು ಮಂದಿ ಓಡಾಡುತ್ತಿರುತ್ತಾರೆ. ಹೀಗಾಗಿ, ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ. ಇವೆಲ್ಲದರ ಜೊತೆಗೆ ಪೂಜಾ ಕೈಂಕರ್ಯಕ್ಕೆ ಉಪಯೋಗಿಸಿದ ತ್ಯಾಜ್ಯಗಳನ್ನು ಜನಗಳು ಕಲ್ಯಾಣಿಗೆ ತಂದು ಸುರಿಯುತ್ತಾರೆ. ಈ ಕಾರಣಗಳಿಂದ ಅಲ್ಲಿನ ವಾತಾವರಣವೇ ಅನೈರ್ಮಲ್ಯಗೊಂಡು ಗಬ್ಬು ನಾರುತ್ತಿದೆ. ಸಂಬಂಧಪಟ್ಟವರು ಇನ್ನಾದರೂ ಎಚ್ಚೆತ್ತು ಕಲ್ಯಾಣಿಯನ್ನು ಶುಚಿಗೊಳಿಸುವುದರ ಜೊತೆಗೆ ರಸ್ತೆ ದುರಸ್ಥಿಗೊಳಿಸಿ, ತಡೆಗೋಡೆ ನಿರ್ಮಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಒಂದೇ ದಿನ ಎರಡೆರಡು ಸ್ಪರ್ಧಾತ್ಮಕ ಪರೀಕ್ಷೆಯಿಂದ ವಿದ್ಯಾರ್ಥಿಗಳಿಗೆ ಗೊಂದಲ

ಮಾನ್ಯರೆ,

ಕರ್ನಾಟಕದಲ್ಲಿ ಒಂದೇ ದಿನ ಎರಡು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಿಗದಿ ಮಾಡಿರುವುದರಿಂದ ಅಸಂಖ್ಯಾತ ಅಭ್ಯರ್ಥಿಗಳು ಯಾವುದಾದರೂ ಒಂದು ಪರೀಕ್ಷೆಯಿಂದ ವಂಚಿತರಾಗಬೇಕಿದೆ. ಒಂದೇ ದಿನ ಎರಡೂ ಪರೀಕ್ಷೆಗಳು ನಡೆಯುವುದರಿಂದ ಯಾವ ಪರೀಕ್ಷೆಗೆ ಹಾಜರಾಗಬೇಕೆಂಬ ಗೊಂದಲದಲ್ಲಿ ಅಭ್ಯರ್ಥಿಗಳಿರುತ್ತಾರೆ. ಯುವಪೀಳಿಗೆ ಯಾವುದಾದರೊಂದು ಸರ್ಕಾರಿ ಹುದ್ದೆ ಪಡೆಯಬೇಕೆಂಬ ಗುರಿಯಿಂದ ಹಲವು ಹುದ್ದೆಗಳಿಗೆ ಅರ್ಜಿ ಸಲ್ಲಿಸಿ, ಪರೀಕ್ಷೆ ಪಾಸು ಮಾಡಬೇಕೆಂದು ತಯಾರಿ ನಡೆಸುತ್ತಿರುತ್ತಾರೆ. ಒಂದೇ ದಿನ ಎರಡೆರಡು ಪರೀಕ್ಷೆ ನಡೆಸಲು ದಿನಾಂಕ ನಿಗದಿ ಮಾಡಿದರೆ, ಅಭ್ಯರ್ಥಿಗಳಿಗೆ ಯಾವ ಪರೀಕ್ಷೆಗೆ ಹಾಜರಾಗಬೇಕೆಂಬ ಗೊಂದಲ ಉಂಟಾಗುತ್ತದೆ ಮತ್ತು ಆ ಗೊಂದಲದಿಂದ ಓದಿ, ಮನನ ಮಾಡಿಕೊಂಡ ವಿಷಯಗಳು ಮರೆಯುವ ಆತಂಕವೂ ಇರುತ್ತದೆ. ನೇಮಕಾತಿ ಪ್ರಾಧಿಕಾರಗಳ ನಡುವೆ ಸಮನ್ವಯದ ಕೊರತೆಯಿಂದ ಈ ರೀತಿಯ ಸಮಸ್ಯೆಗಳು ಎದುರಾಗಲಿದೆ. ಹೀಗಾಗಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ದಿನಾಂಕ ನಿಗದಿ ಮಾಡುವ ನಿಟ್ಟಿನಲ್ಲಿ ಅಖಿಲ ಭಾರತ ಮಟ್ಟದ ಏಕೀಕೃತ ವ್ಯವಸ್ಥೆಯೊಂದನ್ನು ಜಾರಿಗೊಳಿಸಬೇಕಾದ ಅಗತ್ಯ ತುರ್ತಾಗಿ ಇದೆ. ಇಲ್ಲವಾದಲ್ಲಿ ಹಲವು ವರ್ಷಗಳಿಂದ ಕಷ್ಟಪಟ್ಟು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ಅಭ್ಯರ್ಥಿಗಳ ಶ್ರಮ ವ್ಯರ್ಥವಾಗುತ್ತದೆ. ಈ ಸಂಬಂಧ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾರ್ಗೋಪಾಯಗಳನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು. ಈಗಾಗಲೇ ಪರೀಕ್ಷಾ ಹಗರಣ, ಪರೀಕ್ಷಾ ಅಕ್ರಮ ನಡೆದು, ಒಳ್ಳೆಯ ದಾರಿಯಲ್ಲಿ ತಯಾರಿ ನಡೆಸುವ ಅಭ್ಯರ್ಥಿಗಳ ಮಾನಸಿಕ ಸ್ಥೈರ್ಯ ಕುಗ್ಗಿ ಹೋಗಿದೆ. ಹೀಗಿರುವಾಗ ಒಂದೇ ದಿನ ಎರಡು ಪರೀಕ್ಷೆ ಸಮಸ್ಯೆ ಅಭ್ಯರ್ಥಿಗಳನ್ನು ಮತ್ತಷ್ಟು ಸಮಸ್ಯೆಗಳಿಗೆ ತಳ್ಳುತ್ತದೆ.

–ಪ್ರಸಾದ್ ಜಿ.ಎಂ, ಮೈಸೂರು

ವಿದ್ಯು(ದ್ವ)ಚ್ಚೋರ!

ಮಾನ್ಯರೆ,

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ 'ವಿದ್ಯುತ್ ಕಳ್ಳ' ರಂತೆ! 9ನೇಯ ಶತಮಾನದ 'ವಡ್ಡಾರಾಧನೆ' ಗ್ರಂಥದಲ್ಲೇ 'ವಿದ್ಯುಚ್ಚೋರನ ಕತೆ' ಬರುತ್ತದೆ. ಈ ಕಾಲದಲ್ಲಿ 'ವಿದ್ಯುಚ್ಚೋರ' (ವಿದ್ಯುತ್+ಚೋರ)ದಂತೆ, ಬಹುಮಂದಿ, 'ವಿದ್ವಚ್ಚೋರ' (ವಿದ್ವತ್+ಚೋರ) ರೂ. ಇದ್ದಾರೆ ! ಎಲ್ಲಿ ತಾನೆ ಇಲ್ಲ ಚೌರ್ಯ! (ಅದು 64 ಕಲೆಗಳಲ್ಲಿ ಒಂದಲ್ಲವೆ?

ಆಚಾರ: ಎಲ್ಲಿದೆ ದೇಶದಲ್ಲಿ ಸದಾಚಾರ? ಎತ್ತ ನೋಡಿದರೂ ಕೆಟ್ಟ ಸಮಾಚಾರ! (ಒಳಿತು: ಒಮ್ಮೊಮ್ಮೆ ಕೇವಲ 'ಕಾಟಾಚಾರ')

– ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಭಾರತೀಯ ನೌಕಾಪಡೆಗೆ ಈಗ ಆಧುನೀಕರಣ ಯೋಗ



"ವಿಮಾನ ವಾಹಕ INS ವಿಕ್ರಮಾದಿತ್ಯ 44500 ಟನ್ ತೂಕವಿರುವ, ಗಾತ್ರದಲ್ಲಿ ವಿಕ್ರಾಂತ್‌ಗಿಂತ ಬೃಹತ್ ಆಗಿದೆ. 284 ಮೀಟರ್ ಉದ್ದ 60 ಮೀಟರ್ ಅಗಲವಿದ್ದು, ಮೂರು ಫುಟ್‌ಬಾಲ್ ಮೈದಾನಗಳಷ್ಟು ವಿಸ್ತೀರ್ಣವಿದೆ. 7000 ನಾಟಿಕಲ್ ಮೈಲುಗಳಷ್ಟು ವ್ಯಾಪ್ತಿಯಲ್ಲಿ ಕಾರ್ಯಾಚರಿಸುವ ಸಾಮರ್ಥ್ಯವಿರುವ ಈ ಯುದ್ಧ ನೌಕೆ 45 ದಿನಗಳ 30 ನಾಟ್ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ. 20 ಅಂತಸ್ತಿನಷ್ಟು ಎತ್ತರವಿದ್ದು, 22 ಡೆಕ್‌ಗಳನ್ನು ಹೊಂದಿದ್ದು, ಇದರಲ್ಲೂ 1600ರಷ್ಟು ಸಿಬ್ಬಂದಿಗಳಿರಲು ಅವಕಾಶವಿದೆ. ಈ ನೌಕೆಯಲ್ಲಿ 36 ಯುದ್ಧ ವಿಮಾನಗಳನ್ನು ಕೊಂಡೊಯ್ಯುವ ಅವಕಾಶವಿದೆ.

1971ರ ಭಾರತ–ಪಾಕ್ ಯುದ್ಧದಲ್ಲಿ ಭಾರತೀಯ ಸೇನೆಯ ಅಪ್ರತಿಮ ಪರಾಕ್ರಮದೆದುರು ಪಾಕ್ ಸೇನೆ ಸೋತು ಶರಣಾಯಿತು. ಈ ವಿಜಯದಲ್ಲಿ ಭೂ ಸೇನೆ, ವಾಯು ಪಡೆಯಷ್ಟೇ ಭಾರತೀಯ ನೌಕಾ ಪಡೆಯು ಮಹತ್ವದ ಪಾತ್ರ ನಿರ್ವಹಿಸಿತು. ಅಸೀಮ ಸಾಹಸ, ಅದ್ಭುತ ಕಾರ್ಯತಂತ್ರ ಅಪ್ರತಿಮ ಮಿಂಚಿನ ಕಾರ್ಯಾಚರಣೆಯಿಂದ ನೌಕಾ ಪಡೆಯು ಪಾಕಿಸ್ತಾನದ ಜೀವಾಳವಾಗಿದ್ದ ಕರಾಚಿ ಬಂದರನ್ನು ಸುತ್ತುವರಿದು ಬಹುತೇಕ ನಾಶಪಡಿಸಿತು. ಇದರಿಂದ ಯುದ್ಧಕ್ಕೆ ಬೇಕಾದ ಇಂಧನ, ಶಸ್ತ್ರಾಸ್ತ್ರಗಳು, ಇನ್ನಿತರ ಸರಕುಗಳ ಪೂರೈಕೆ ಸ್ಥಗಿತಗೊಂಡಿತು. ಪಾಕ್ ಸೇನೆ ಭಾರತದೆದುರು ಮಂಡಿಯೂರಿತು. ಆದರೆ ಆನಂತರ ಬಂದ ಸರಕಾರಗಳು ಭಾರತ ರಕ್ಷಣಾ ಪಡೆಗಳನ್ನು, ವ್ಯವಸ್ಥೆಗಳನ್ನು ಆಧುನೀಕರಣಗೊಳಿಸುವತ್ತ, ಸರ್ವ ಸನ್ನದ್ಧಗೊಳಿಸುವತ್ತ ಗಮನಹರಿಸಲಿಲ್ಲ. ವಿಶೇಷವಾಗಿ ದೇಶದ ನೌಕಾಪಡೆಯು ತೀವ್ರ ನಿರ್ಲಕ್ಷ್ಯಕ್ಕೆ ಒಳಗಾಯಿತು. ನೌಕಾಪಡೆಯು ಅತ್ಯಾಧುನಿಕ ಯುದ್ಧ ವಿಮಾನ ವಾಹಕ, ನೌಕೆಗಳು, ಜಲಾಂತರ್ಗಾಮಿಗಳು ಸಾಗರ ಕ್ಷೇತ್ರದಲ್ಲಿ ಹೋರಾಡುವ ಯುದ್ಧ ವಿಮಾನಗಳು, ಹೆಲಿಕಾಪ್ಟರ್‌ಗಳ ತೀವ್ರ ಕೊರತೆಯಿಂದ ಹೋರಾಟದ ಸಾಮರ್ಥ್ಯ ಕಳೆದುಕೊಂಡಿತ್ತು.

ಈ ರೀತಿ ಹಿಂದಿನ ಸರಕಾರಗಳ ಅವಧಿಯಲ್ಲಿ ಕಡೆಗಣಿಸಲ್ಪಟ್ಟಿದ್ದ ಭಾರತದ ರಕ್ಷಣಾ ಕ್ಷೇತ್ರಕ್ಕೆ 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೋದಿ ಸರಕಾರವು ಹೊಸ ಶಕ್ತಿ, ಚೈತನ್ಯ ನೀಡಲಾರಂಭಿಸಿತು. ಭಾರತದ ರಕ್ಷಣಾ ಕ್ಷೇತ್ರವಿಂದು ಪಾರಿವಾಳದಂತೆ ಅಪಾಯದೆದುರು ಕಣ್ಮುಚ್ಚುವ ಬದಲು ರಣಹದ್ದಿನಂತೆ ಪ್ರತ್ಯಾಕ್ರಮಣ ಮಾಡುವಷ್ಟು ಬಲಿಷ್ಠವಾಗುತ್ತಿದೆ. ಭೂ ಸೇನೆ, ವಾಯು ಪಡೆಯೊಂದಿಗೆ ನೌಕಾ ಪಡೆಯ ಮಹತ್ವವನ್ನು ಅರಿತ ಸರಕಾರವು ಇದನ್ನು ಆಧುನೀಕರಣಗೊಳಿಸುವತ್ತ ತೀವ್ರ ಗಮನಹರಿಸಿದೆ.

7500 ಕಿ.ಮೀ. ಉದ್ದವಿರುವ ವಿಶಾಲ ಕಡಲ ತೀರದ ರಕ್ಷಣೆ ಹಾಗೂ ಸಾಗರ ಸಂಪತ್ತನ್ನು ರಕ್ಷಿಸುವ ಗುರುತರ ಹೊಣೆಗಾರಿಕೆ ಭಾರತೀಯ ನೌಕಾಪಡೆಗಿದೆ. ಹಿಂದೂ ಮಹಾಸಾಗರದಲ್ಲಿ ಚೀನಾ ತನ್ನ ನೌಕಾ ಪಡೆಯ ಸಾಮರ್ಥ್ಯವನ್ನು ನಿರಂತರವಾಗಿ ವೃದ್ಧಿಸುತ್ತಿದ್ದು, ಭಾರತಕ್ಕೆ ಅಪಾಯದ ಸೂಚನೆ ನೀಡಿದೆ. ಬಂಗ್ಲಾ, ನೇಪಾಳ, ಶ್ರೀಲಂಕಾ ಮ್ಯಾನ್ಮಾರ್, ಮಾಲ್ದೀವ್ಸ್ ಮೊದಲಾದ ದೇಶಗಳಿಗೆ ಆರ್ಥಿಕ ವಿಕಾಸದ ಹೆಸರಿನಲ್ಲಿ ಚೀನಾ ತನ್ನ ಸಾಲದ ಬಲೆಯಲ್ಲಿ ಈ ದೇಶಗಳನ್ನು ಸಿಲುಕಿಸಿದೆ. ಈ ರೀತಿ ಚೀನಾ ತನ್ನ ಮುತ್ತಿನ ಹಾರ ಯೋಜನೆಯಡಿ ಇವುಗಳನ್ನು ಭಾರತ ವಿರೋಧಿಗಳನ್ನಾಗಿ ಪರಿವರ್ತಿಸಿ ಭಾರತವನ್ನು ಹಿಂದೂ ಮಹಾಸಾಗರದಲ್ಲಿ ಏಕಾಂಗಿಗೊಳಿಸಿ ಆರ್ಥಿಕ ಹೊಡೆತ ನೀಡುವ ಯತ್ನದಲ್ಲಿದೆ.

ಚೀನಿ ಸಾಲದ ಬಲೆಯ ಪರಿಣಾಮಗಳು: ಪಾಕ್ ಆರಂಭದಿಂದಲೂ ಭಾರತದ ಶತ್ರುದೇಶವಾಗಿದೆ. ನೇಪಾಳದಲ್ಲಿ ಪ್ರಧಾನಿ ಪುಷ್ಪಕಮಲ್ ದಹಲ್ (ಪ್ರಚಂಡ)ರ ಕಮ್ಯೂನಿಸ್ಟ್ ಸರಕಾರವೂ ಭಾರತದ ಪರವಾಗಿಲ್ಲ. ಮ್ಯಾನ್ಮಾರ್‌ನ ಮಿಲಿಟರಿ ಜುಂಟಾ ಭಾರತವನ್ನು ವಿರೋಧಿಸುತ್ತಿದೆ. ದ್ವೀಪ ರಾಷ್ಟ್ರವಾಗಿರುವ ಶ್ರೀಲಂಕಾವನ್ನು ರಕ್ಷಣಾ ಕ್ಷೇತ್ರದಲ್ಲಿ ಆದ್ಯತೆಯ ಪಾಲುದಾರನೆಂದು ಭಾರತ ಪರಿಗಣಿಸಿದೆ. ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದಾಗ ಭಾರತವು ಎಲ್ಲಾ ರೀತಿಯ ನೆರವು ನೀಡಿತು. ಆದರೆ ಭಾರತ ನೀಡಿರುವ ನೆರವನ್ನು ಶ್ರೀಲಂಕಾ ಕೃತಜ್ಞತೆಯಿಂದ ಸ್ಮರಿಸುತ್ತಾ ಚೀನಾದೊಂದಿಗೆ ಸೇರಿ ಭಾರತಕ್ಕೆ ಅಪಾಯಕಾರಿಯಾಗುವಂತಹ ದ್ವಂದ್ವ ನೀತಿ ಅನುಸರಿಸುತ್ತಿದೆ. ಭಾರತದ ಭದ್ರತೆ ಹಾಗೂ ಉಪಖಂಡದ ಶಾಂತಿಗೆ ಅಪಾಯಕಾರಿ ಎಂಬ ಅರಿವಿದ್ದರೂ ಶ್ರೀಲಂಕಾವು ತನ್ನ ಹಂಬನ್ ತೋಟ ಬಂದರಿನಲ್ಲಿ ಚೀನಾದ ಯುದ್ಧ ನೌಕೆ, ವೈಜ್ಞಾನಿಕ ಸಂಶೋಧನಾ ಹಾಗೂ ಬೇಹುಗಾರಿಕಾ ನೌಕೆಗಳಿಗೆ ತಂಗಲು ಅವಕಾಶ ನೀಡಿತು. ಭಾರತದ ತೀವ್ರ ಪ್ರತಿಭಟನೆಗೂ ಶ್ರೀಲಂಕಾ ಸರಕಾರ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಕಳೆದ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಮಾಲ್ದೀವ್ಸ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಮೊಹಮ್ಮದ್ ಮುಯಿಜು ಕೂಡ ಭಾರತ ವಿರೋಧಿ ನಿಲುವನ್ನು ಹೊಂದಿದ್ದಾರೆ. ಚೀನಾದಿಂದ ಹೆಚ್ಚು ಸಾಲ ತಂದಿರುವ ಮಾಲ್ದೀವ್ಸ್‌ನ ನೂತನ ಅಧ್ಯಕ್ಷ ಮುಯಿಜು ಅವರು ಚೀನಾ ಪರ ಒಲವುಳ್ಳ ನಾಯಕರೆಂದು ಗುರುತಿಸಿಕೊಂಡಿದ್ದಾರೆ. ಮಾಲ್ದೀವ್ಸ್‌ನ ರೆಡಾರ್ ಹಾಗೂ ಕಾವಲು ಯುದ್ಧ ವಿಮಾನಗಳನ್ನು ನಿರ್ವಹಿಸುತ್ತಿರುವ ಎಪ್ಪತ್ತರಷ್ಟು ಭಾರತೀಯ ಸೈನಿಕರು ಸ್ವದೇಶಕ್ಕೆ ಹೋಗಬೇಕೆಂದು ಮುಯಿಜು ಹೇಳಿದ್ದಾರೆ. ಆದರೆ ಭಾರತದಂತೆ ಮಾಲ್ದೀವ್ಸ್‌ನಲ್ಲಿರುವ ಚೀನಿ ಸೈನಿಕರನ್ನು ವಾಪಸು ಕಳಿಸುವ ಬಗ್ಗೆ ಮುಯಿಜು ಯಾವುದೇ ಮಾಹಿತಿ ನೀಡದೆ ತಾನು ಚೀನಾ ಪರವೆಂದು ಮುಯಿಜು ಸಾಬೀತುಪಡಿಸಿದ್ದಾರೆ. ಈ ರಾಜಕೀಯ ಹಿನ್ನೆಲೆಯಲ್ಲಿ ಭಾರತ ತನ್ನ ನೌಕಾಪಡೆಯನ್ನು ಇನ್ನೂ ಅತ್ಯಾಧುನಿಕಗೊಳಿಸುವ ಪ್ರಕ್ರಿಯೆ ಆರಂಭಿಸಿದೆ.

ವಿಮಾನ ವಾಹಕ ಯುದ್ಧ ನೌಕೆಗಳು: ಪ್ರಸ್ತುತ ಭಾರತದ ಬಳಿ ಎರಡು ವಿಮಾನ ವಾಹಕ ಯುದ್ಧ ನೌಕೆಗಳಿವೆ. ಸಂಪೂರ್ಣ ಸ್ವದೇಶದಲ್ಲೇ ನಿರ್ಮಾಣವಾಗಿರುವ ಯುದ್ಧ ನೌಕೆ ಎಂಬ ಹೆಗ್ಗಳಿಕೆ ಹೊಂದಿರುವ ಐಎನ್‌ಎಸ್ ವಿಕ್ರಾಂತ್‌ನ್ನು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಕೊಚ್ಚಿಯ ನೌಕಾ ನೆಲೆಯಲ್ಲಿ ಪ್ರಧಾನಿ ಮೋದಿಯವರು ರಾಷ್ಟ್ರಕ್ಕೆ ಸಮರ್ಪಿಸಿದ್ದರು. ನೂರಕ್ಕೂ ಹೆಚ್ಚು MSMEಗಳು ನಿರ್ಮಿಸಿದ ಯಂತ್ರೋಪಕರಣಗಳನ್ನು ಬಳಸಿ ಸಾರ್ವಜನಿಕ ವಲಯದ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ ಈ ನೌಕೆಯನ್ನು ನಿರ್ಮಿಸಿತ್ತು. 23,000 ಕೋಟಿ ರೂ. ವೆಚ್ಚದ ಈ ಯುದ್ಧ ನೌಕೆಯು ಹಲವಾರು ವಿಶೇಷತೆಗಳನ್ನು ಹೊಂದಿದ್ದು, ಭಾರತೀಯ ನೌಕಾ ಪಡೆಗೆ ಭಾರೀ ಶಕ್ತಿ ನೀಡಿದೆ. ವಿಕ್ರಾಂತ್ ನಿರ್ಮಾಣವು ಭಾರತವನ್ನು ವಿಮಾನ ವಾಹಕ ನೌಕೆಗಳನ್ನು ನಿರ್ಮಿಸುವ ವಿಶ್ವದ ಕೆಲವೇ ದೇಶಗಳಾದ ಅಮೇರಿಕಾ, ರಷ್ಯಾ, ಚೀನಾ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಗುಂಪಿಗೆ ಸೇರಿಸಿದೆ. 262 ಮೀಟರ್ ಉದ್ದ 62 ಮೀಟರ್ ಅಗಲ ಹಾಗೂ 43,000 ಟನ್ ತೂಕವುಳ್ಳ INS ವಿಕ್ರಾಂತ್‌ನಲ್ಲಿ ಒಟ್ಟು ಮೂವತ್ತು ಯುದ್ಧ ವಿಮಾನಗಳನ್ನು ನಿಯೋಜಿಸಲು ಅವಕಾಶವಿದ್ದು, ಏಕ ಕಾಲದಲ್ಲಿ ಹತ್ತನ್ನು ರನ್‌ವೇಯಲ್ಲಿ ಹಾಗೂ ಮಿಕ್ಕವುಗಳನ್ನು ಬೃಹತ್ ಹ್ಯಾಂಗರ್‌ನಲ್ಲಿ ನಿಯೋಜಿಸಬಹುದು. ನೌಕೆಯು 28 ನಾಟಿಕಲ್ ಗರಿಷ್ಠ ವೇಗದಲ್ಲಿ 7500 ನಾಟಿಕಲ್ ಮೈಲುಗಳಷ್ಟು ನಿರಂತರವಾಗಿ ಚಲಿಸುವ ಸಾಮರ್ಥ್ಯ ಹೊಂದಿದೆ. 250 ಟ್ಯಾಂಕರ್‌ಗಳಷ್ಟು ಇಂಧನ ಇದರಲ್ಲಿ ತುಂಬಿಸಬಹುದು. 1600 ಸಿಬ್ಬಂದಿಗಳಿಗಾಗಿ 2200 ಕೊಠಡಿಗಳು ಈ ನೌಕೆಯಲ್ಲಿದೆ. ಋಗ್ವೇದದ 'ಜಯೇಮ ಸಂಯುಧಿ ಸ್ಪೃಧಃ' ಅಂದರೆ 'ಯುದ್ಧಗಳ ಶತ್ರುಗಳೊಂದಿಗೆ ಹೋರಾಡಿ ಜಯ ಗಳಿಸೋಣ' ಎಂಬ ಅರ್ಥ ನೀಡುವ ಘೋಷ ವಾಕ್ಯವನ್ನು ಈ ನೌಕೆ ಸ್ವೀಕರಿಸಿದೆ.

ಭಾರತದ ಇನ್ನೊಂದು ವಿಮಾನ ವಾಹಕ INS ವಿಕ್ರಮಾದಿತ್ಯ 44500 ಟನ್ ತೂಕವಿರುವ, ಗಾತ್ರದಲ್ಲಿ ವಿಕ್ರಾಂತ್‌ಗಿಂತ ಬೃಹತ್ ಆಗಿದೆ. 284 ಮೀಟರ್ ಉದ್ದ 60 ಮೀಟರ್ ಅಗಲವಿದ್ದು, ಮೂರು ಫುಟ್‌ಬಾಲ್ ಮೈದಾನಗಳಷ್ಟು ವಿಸ್ತೀರ್ಣವಿದೆ. 7000 ನಾಟಿಕಲ್ ಮೈಲುಗಳಷ್ಟು ವ್ಯಾಪ್ತಿಯಲ್ಲಿ ಕಾರ್ಯಾಚರಿಸುವ ಸಾಮರ್ಥ್ಯವಿರುವ ಈ ಯುದ್ಧ ನೌಕೆ 45 ದಿನಗಳ 30 ನಾಟ್ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ. 20 ಅಂತಸ್ತಿನಷ್ಟು ಎತ್ತರವಿದ್ದು, 22 ಡೆಕ್‌ಗಳನ್ನು ಹೊಂದಿದ್ದು, ಇದರಲ್ಲೂ 1600ರಷ್ಟು ಸಿಬ್ಬಂದಿಗಳಿರಲು ಅವಕಾಶವಿದೆ. ಈ ನೌಕೆಯಲ್ಲಿ 36 ಯುದ್ಧ ವಿಮಾನಗಳನ್ನು ಕೊಂಡೊಯ್ಯುವ ಅವಕಾಶವಿದೆ. ಎರಡೂ ಯುದ್ಧ ನೌಕೆಗಳು, ನೌಕಾ ವಿನಾಶಕ ಕ್ಷಿಪಣಿಗಳು ಆಕಾಶದಿಂದ ಆಕಾಶಕ್ಕೆ ಪ್ರಯೋಗಿಸುವ ಕ್ಷಿಪಣಿಗಳು, ನಿರ್ದೇಶಿತ ರಾಕೆಟ್‌ಗಳು ಹಾಗೂ ಬಾಂಬ್‌ಗಳಿಂದ ಸನ್ನದ್ಧವಾಗಿವೆ. ಪ್ರಸ್ತುತ ಈ ಯುದ್ಧ ನೌಕೆಗಳಲ್ಲಿ ಮಿಗ್, ಹ್ಯಾರಿಯರ್, ಧ್ರುವ ಹಾಗೂ ಚೇತಕ್ ಮೊದಲಾದ ಯುದ್ಧ ವಿಮಾನ ಹಾಗೂ ಹೆಲಿಕಾಪ್ಟರ್‌ಗಳಿವೆ. ದಕ್ಷಿಣ ಏಷ್ಯಾ, ಪ್ರಶಾಂತ ಹಿಂದೂ ಮಹಾಸಾಗರದಲ್ಲಿ ಈ ವಿಮಾನ ವಾಹಕ ಯುದ್ಧ ನೌಕೆಗಳು ಚೀನಾ ತನ್ನ ಅಧಿಪತ್ಯ ಸ್ಥಾಪಿಸುವ ಯತ್ನಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲಿವೆ.

ರಾಫೆಲ್ ನೌಕಾಯುದ್ಧ ವಿಮಾನ ಹಾಗೂ ಜಲಾಂತರ್ಗಾಮಿ ಖರೀದಿ: ಶಸ್ತ್ರಾಸ್ತ್ರಗಳಿಗಾಗಿ ರಷ್ಯಾ ಮೇಲಿನ ಅವಲಂಬನೆ ಕಡಿಮೆ ಮಾಡಲು ಹಾಗೂ ಹಿಂದೂ ಮಹಾಸಾಗರದಲ್ಲಿ ಭಾರತೀಯ ನೌಕಾ ಪಡೆಯ ಶಕ್ತಿ ವರ್ಧಿಸಲು ಭಾರತ ಸರಕಾರ ತುರ್ತು ಕ್ರಮ ಕೈಗೊಂಡಿದೆ. ಫ್ರಾನ್ಸ್‌ನಿಂದ 26 ರಫೆಲ್ ಮರೈನ್ ಯುದ್ಧ ವಿಮಾನ ಹಾಗೂ ಮೂರು ಸ್ಕಾರ್ಪಿನ್ ಡೀಸೆಲ್–ಎಲೆಕ್ಟ್ರಿಕ್ ಸಬ್ ಮೆರೀನ್‌ಗಳನ್ನು ಖರೀದಿಸುವ 90 ಸಾವಿರ ಕೋಟಿ ರೂ.ನ ರಕ್ಷಣೆ ಖರೀದಿ ಒಪ್ಪಂದಕ್ಕೆ ಅಂತಿಮ ರೂಪ ನೀಡಿದೆ. ನೌಕಾ ಪಡೆಯ ಸಾಮರ್ಥ್ಯವನ್ನು ಸಿಕ್ಕಾಪಟ್ಟೆ ವರ್ಧಿಸಲಿರುವ ಈ ಒಪ್ಪಂದದಿಂದ ಚೀನಾ ಜತೆಗಿನ ಸಾಗರ ಸಂಘರ್ಷದಲ್ಲಿ ಭಾರತಕ್ಕೆ ಮೇಲುಗೈ ನೀಡಲಿದೆ. ಉದ್ದೇಶಿತ ಒಪ್ಪಂದ ಕುರಿತಂತೆ ರಕ್ಷಣಾ ಸಚಿವಾಲಯವು ಫ್ರಾನ್ಸ್‌ನ ಸಶಸ್ತ್ರ ಸಚಿವಾಲಯಕ್ಕೆ ವಿಸ್ತೃತ ಕೋರಿಕೆ ಪತ್ರವನ್ನು (LOR) ನೀಡಿದೆ. 22 ಏಕ ಆಸನದ ಯುದ್ಧ ವಿಮಾನಗಳು, ಎರಡು ಆಸನಗಳಿರುವ ನಾಲ್ಕು ತರಬೇತಿ ವಿಮಾನಗಳು, ಶಸ್ತ್ರಾಸ್ತ್ರಗಳು, ಬಿಡಿ ಭಾಗಗಳು, ತರಬೇತಿ ಸಿಬ್ಬಂದಿಗಳು ಇದರಲ್ಲಿ ಸೇರಿವೆ ಎಂದು ಮೂಲಗಳು ತಿಳಿಸಿವೆ. ವಿಮಾನ ವಾಹಕಗಳ ಮೇಲಿನ ಕಡಿಮೆ ಉದ್ದದ ರನ್‌ವೇ ಮೇಲಿಂದ ಹಾರಲು ಮತ್ತು ಇಳಿಕೆಗೆ ಅನುಕೂಲವಿರುವ ವಿನ್ಯಾಸದಲ್ಲಿ ಈ ಯುದ್ಧ ವಿಮಾನಗಳನ್ನು ನಿರ್ಮಿಸಲಾಗಿದೆ. ವಾಯು ಪಡೆಯ ವಿಮಾನಗಳಿಗಿಂತ ಭಿನ್ನವಾಗಿರುವ ಈ ರಾಫೆಲ್‌ನ ರೆಕ್ಕೆಗಳನ್ನು ಮಡಚುವಂತೆ ವಿನ್ಯಾಸ ಮಾಡಲಾಗಿದೆ. ಇದರಿಂದ ವಿಮಾನ ವಾಹಕಗಳಲ್ಲಿ ಇವುಗಳನ್ನು ಸ್ವಲ್ಪವೇ ಜಾಗದಲ್ಲಿ ನಿಲುಗಡೆ ಮಾಡಬಹುದು. ನೌಕೆ ಮೇಲೆ ಗುರುತು ಮಾಡಿರುವ ನಿರ್ದಿಷ್ಟ ಸ್ಥಳದಲ್ಲಿ ಅತ್ಯಂತ ವೇಗದಲ್ಲಿ ಬಂದು ದಿಢೀರ್ ಆಗಿ ಲ್ಯಾಂಡ್ ಆಗಲು 'ಟೇಲ್ ಹುಕ್' ವ್ಯವಸ್ಥೆ ಇದೆ. ಶತ್ರುಗಳ ಸಮುದ್ರ ರಾಡಾರ್‌ಗಳ ಕಣ್ತಪ್ಪಿಸಿ ದಾಳಿ ಮಾಡುವ ಸಾಮರ್ಥ್ಯ ಈ ವಿಮಾನಗಳಿಗಿದೆ. ಹೆಚ್ಚು ಶಸ್ತ್ರಾಸ್ತ್ರಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹಾಗೂ ಯುದ್ಧ ನೌಕೆಗಳನ್ನು ನಾಶ ಮಾಡಬಲ್ಲ ನೌಕಾ ವಿರೋಧಿ ಕ್ಷಿಪಣಿಗಳನ್ನು ಈ ವಿಮಾನ ಪ್ರಯೋಗಿಸುವ ಸಾಮರ್ಥ್ಯ ಹೊಂದಿದೆ. INS ವಿಕ್ರಮಾದಿತ್ಯ ಹಾಗೂ ವಿಕ್ರಾಂತ್‌ಗಳಲ್ಲಿ ಈ ವಿಮಾನಗಳನ್ನು ನಿಯೋಜಿಸಲಾಗುವುದು. ಸಾಗರದಾಳದಲ್ಲಿ ನೌಕಾ ಪಡೆಯ ದಾಳಿ ಸಾಮರ್ಥ್ಯ ಇನ್ನಷ್ಟು ವೃದ್ಧಿಸಲು ಮಜಗಾಂವ್ ಹಡಗು ನಿರ್ಮಾಣ ಕೇಂದ್ರವು ಫ್ರಾನ್ಸ್‌ನ ಮೆ॥ ನವಲ್ ಗ್ರೂಪ್ ಜೊತೆ ಸೇರಿ ಮೂರು ಸ್ಕಾರ್ಪಿನ್ ಡೀಸೆಲ್–ಇಲೆಕ್ಟ್ರಿಕ್ ಸಬ್ ಮೆರೀನ್‌ಗಳನ್ನು ನಿರ್ಮಿಸುವ ಬಗ್ಗೆ ಮಾತುಕತೆ ನಡೆಸುತ್ತಿದೆ. 30 ಸಾವಿರ ಕೋಟಿ ರೂ.ಗಳ ಈ ಒಪ್ಪಂದದಲ್ಲಿ ಸಬ್ ಮೆರೀನ್‌ಗಳ ಶೇ.60ರಷ್ಟು ಉಪಕರಣಗಳು ಸ್ವದೇಶಿ ಆಗಿರಬೇಕೆಂದು ಭಾರತ ಸರಕಾರ ಅಪೇಕ್ಷಿಸಿದೆ.

ಚೀನಾ–ಭಾರತ ನೌಕಾ ಪಡೆಗಳ ತುಲನೆ: ಚೀನಾ ಬಳಿ ಎಪ್ಪತ್ತು ಸಬ್ ಮೆರೀನ್‌ಗಳಿದ್ದು ಇದರಲ್ಲಿ 7 ನ್ಯೂಕ್ಲಿಯರ್ ಬ್ಯಾಲೆಸ್ಟಿಕ್ ಕ್ಷಿಪಣಿ ಸಾಮರ್ಥ್ಯದ ಹಾಗೂ 12 ನ್ಯೂಕ್ಲಿಯರ್ ದಾಳಿ ಹಾಗೂ 50ಕ್ಕೂ ಅಧಿಕ ಡೀಸೆಲ್ ಚಾಲಿತ ಸಬ್ ಮೆರೀನ್‌ಗಳಿದ್ದರೆ, ಭಾರತದ ಬಳಿ ಎಲ್ಲಾ ಮಾದರಿಯ ಒಟ್ಟು 16 ಸಬ್ ಮೆರೀನ್‌ಗಳಿದ್ದು, ಇದರಲ್ಲಿ ಕೇವಲ ಎರಡು ನ್ಯೂಕ್ಲಿಯರ್ ಸಾಮರ್ಥ್ಯ ಹೊಂದಿವೆ. ಭಾರತ ಹಾಗೂ ಚೀನಾ ಬಳಿ ಎರಡು ಹಾಗೂ ಮೂರು ವಿಮಾನ ವಾಹಕಗಳಿವೆ. ಭಾರತದ ಬಳಿ 150ರಷ್ಟು ಯುದ್ಧ ನೌಕೆಗಳಿದ್ದರೆ, ಚೀನಾ ಬಳಿ 417 ಸನ್ನದ್ಧ ಯುದ್ಧ ಹಡಗುಗಳಿವೆ. ಯುದ್ಧ ವಿಮಾನಗಳು ಭಾರತದ ಬಳಿ 300 ಇದ್ದರೆ, ಚೀನಾ ನೌಕಾ ಪಡೆ ಬಳಿ ಸುಮಾರು 710ರಷ್ಟು ಯುದ್ಧ ವಿಮಾನಗಳಿವೆ. ಈ ಅಂಕಿ–ಅಂಶಗಳಿಂದ ತಿಳಿದು ಬರುವ ಸಂಗತಿ ಏನೆಂದರೆ ಕಳೆದ 60–70ರ ದಶಕದಲ್ಲಿ ಭಾರತ ಸರಕಾರಗಳು ರಕ್ಷಣಾ ವ್ಯವಸ್ಥೆಗಳನ್ನು ಕಡೆಗಣಿಸಿದ್ದವು. ಇದರ ಪರಿಣಾಮ ಭಾರತವಿಂದು ನಾಜೂಕು ಪರಿಸ್ಥಿತಿಯಲ್ಲಿದೆ. ಉಪ ಖಂಡದಲ್ಲಿರುವ ಪರಿಸ್ಥಿತಿಯನ್ನು ಗಮನಿಸಿ ಪ್ರಧಾನಿ ಮೋದಿಯವರು ಭಾರತವನ್ನು ಬಲಿಷ್ಠ ಮಿಲಿಟರಿ ರಾಷ್ಟ್ರವನ್ನಾಗಿಸಲು ಸರ್ವ ರೀತಿಯಲ್ಲಿ ಕ್ರಿಯಾಶೀಲವಾಗಿದ್ದಾರೆ.

ಆಸೀಸ್ ವಿರುದ್ಧ ಟಿ20 ಸರಣಿ ಗೆದ್ದ ಭಾರತ



ರಾಯ್‌ಪುರ, ಡಿ.1– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಅಮೋಘ ಪ್ರದರ್ಶನ ನೀಡಿದ ಭಾರತ 4ನೇ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 20 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಇನ್ನೂ ಒಂದು ಪಂದ್ಯ ಬಾಕಿ ಇರುವಾಗಲೇ 5 ಪಂದ್ಯಗಳ ಟಿ20 ಸರಣಿಯನ್ನು 3–1 ಅಂತರದಲ್ಲಿ ವಶಪಡಿಸಿಕೊಂಡಿತು.

ಇಲ್ಲಿನ ಶಹೀದ್ ವೀರ್ ನಾರಾಯಣ್ ಸಿಂಗ್ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 9 ವಿಕೆಟ್ ನಷ್ಟಕ್ಕೆ 174 ರನ್‌ಗಳ ಸವಾಲಿನ ಮೊತ್ತ ಪೇರಿಸಿತ್ತು. ಪ್ರತಿಯಾಗಿ ಆಸ್ಟ್ರೇಲಿಯಾ 7 ವಿಕೆಟ್‌ಗೆ 154 ರನ್ ಬಾರಿಸಿ ಸೋಲು ಕಂಡಿತು. ಉಭಯ ತಂಡಗಳ ನಡುವಿನ 5ನೇ ಟಿ20 ಪಂದ್ಯ ಔಪಚಾರಿಕವಾಗಿದ್ದು, ಡಿ.3 ರಂದು ಬೆಂಗಳೂರಿನಲ್ಲಿ ನಡೆಯಲಿದೆ.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡಕ್ಕೆ ಯಶಸ್ವಿ ಜೈಸ್ವಾಲ್ ಹಾಗೂ ಋತುರಾಜ್ ಗಾಯಕ್ವಾಡ್ 50 ರನ್‌ಗಳ ಉತ್ತಮ ಆರಂಭ ನೀಡಿದರು. ಈ ವೇಳೆ 28 ಎಸೆತಗಳಲ್ಲಿ 38 ರನ್ ಬಾರಿಸಿದ್ದ ಜೈಸ್ವಾಲ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಶ್ರೇಯಸ್ ಅಯ್ಯರ್ 8 ರನ್, ನಾಯಕ ಸೂರ್ಯಕುಮಾರ್ 1 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಮತ್ತೊಂದೆಡೆ ಉತ್ತಮ ಆಟವಾಡಿದ ಋತುರಾಜ್ ಗಾಯಕ್ವಾಡ್ 32 ರನ್ ಗಳಿಸಿ ಔಟಾದರು. ಈ ವೇಳೆ ಜೊತೆಯಾದ ರಿಂಕು ಸಿಂಗ್ ಮತ್ತು ಜಿತೇಶ್ ಶರ್ಮಾ ಬಿರುಸಿನ ಬ್ಯಾಟಿಂಗ್ ಮೂಲಕ 56 ರನ್‌ಗಳ ಜೊತೆಯಾಟವಾಡಿ ತಂಡದ ಮೊತ್ತವನ್ನು ಹೆಚ್ಚಿಸಿದರು. ರಿಂಕು ಸಿಂಗ್ 29 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 46 ರನ್ ಗಳಿಸಿದರೇ, ಜಿತೇಶ್ ಶರ್ಮಾ 19 ಎಸೆತಗಳಲ್ಲಿ 3 ಸಿಕ್ಸರ್, 1 ಬೌಂಡರಿ ಒಳಗೊಂಡ 35 ರನ್ ಗಳಿಸಿ ನಿರ್ಗಮಿಸಿದರು. ಆಸ್ಟ್ರೇಲಿಯಾ ಪರ ಬೆನ್ ದ್ವಾರ್ಶುಯಿಸ್ 3, ಜೇಸನ್ ಬೆಹ್ರನ್‌ಡಾರ್ಫ್ ಮತ್ತು ತನ್ವೀರ್ ಸಂಘಾ ತಲಾ 2, ಆರೋನ್ ಹಾರ್ಡಿ 1 ವಿಕೆಟ್ ಕಬಳಿಸಿದರು.


ಭಾರತ ನೀಡಿದ 175 ರನ್‌ಗಳ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ಭಾರತೀಯ ಬೌಲರ್‌ಗಳ ಶಿಸ್ತುಬದ್ಧ ಬೌಲಿಂಗ್ ದಾಳಿಗೆ ನಲುಗಿ 20 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ 154 ರನ್‌ಗಳಿಗೆ ಗಳಿಸಿತು. ಆ ಮೂಲಕ ಸೋಲು ಒಪ್ಪಿಕೊಳ್ಳುವ ಮೂಲಕ ಟಿ20 ಸರಣಿ ಕಳೆದುಕೊಂಡಿತು.

ತಂಡದ ಪರ ಟ್ರಾವಿಸ್ ಹೆಡ್ 31, ಬೆನ್ ಮೆಕ್‌ಡೆರ್ಮೋರ್ಟ್, ಟೀಮ್ ಡೇವಿಡ್ ತಲಾ 19, ಮ್ಯಾಥ್ಯೂ ಶಾರ್ಟ್ 22, ನಾಯಕ ಮ್ಯಾಥ್ಯೂ ವೇಡ್ 36 ರನ್ ಗಳಿಸಿದರು. ಭಾರತದ ಪರ ಅಕ್ಷರ್ ಪಟೇಲ್ 3, ದೀಪಕ್ ಚಾಹರ್ 2, ರವಿ ಬಿಷ್ಣೋಯಿ, ಆವೇಶ್ ಖಾನ್ ಒಂದೊಂದು ವಿಕೆಟ್ ಕಬಳಿಸಿದರು. ಅಕ್ಷರ್ ಪಟೇಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನಾಳೆ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಈಸ್ಟ್ ಸಂತೋಷ ಕೂಟ

ಮೈಸೂರು, ಡಿ. 1– ಮೈಸೂರಿನ ವಿದ್ಯಾಶಂಕರನಗರದಲ್ಲಿರುವ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಈಸ್ಟ್ ಸಂತೋಷ ಕೂಟ ಡಿ. 3ರಂದು ಬೆಳಗ್ಗೆ 10 ಗಂಟೆಗೆ ಸಂಘದ ಆವರಣದಲ್ಲಿ ನಡೆಯಲಿದೆ. ಸಂಘದ ಅಧ್ಯಕ್ಷ ಪುಲಿಯಂಡ ಎಸ್. ದೇವಯ್ಯ ಅಧ್ಯಕ್ಷತೆ ವಹಿಸಲಿದ್ದು, ವಿರಾಜಪೇಟೆ ಶಾಸಕ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೋಂಜಾಂಡ ಎ. ಗಣಪತಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ಸಂಘದ ಹಿರಿಯ ಸದಸ್ಯರಾದ ಕುಪ್ಪಂಡ ಎಂ. ಅಚ್ಚಯ್ಯ, ಮಾನ್ಯಪಂಡ ಎ. ಮುತ್ತಣ್ಣ ಅವರನ್ನು ಸನ್ಮಾನಿಸಲಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಇತ್ತೀಚೆಗೆ ಗೌರವ ಡಾಕ್ಟರೇಟ್ ಪಡೆದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಡಾ. ಕಲ್ಯಾಟಂಡ ಬಿ. ಗಣಪತಿ ಅವರನ್ನು ವಿಶೇಷ ಸಾಧಕರಾದ ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ವಿಶೇಷ ಮಕ್ಕಳ ಶಾಲೆಯಲ್ಲಿ ಕನಕದಾಸರ ಜಯಂತಿ



ಮೈಸೂರು, ಡಿ.1– ಮೈಸೂರು ತಾಲೂಕು, ಜಯಪುರ ಹೋಬಳಿಯ ಡಿ.ಸಾಲುಂಡಿ ಗ್ರಾಮದ ಬಸವೇಶ್ವರ ನವಚೇತನ ವಿಶೇಷ ಮಕ್ಕಳ ಶಾಲೆಯಲ್ಲಿ ಕನಕ ಜಯಂತಿ ಆಚರಿಸಲಾಯಿತು.

ಇದೇ ವೇಳೆ ಸಮಾಜ ಸೇವಕ ಎಸ್. ಶ್ರೀಕಾಂತ್, ವಿಶೇಷ ಮಕ್ಕಳ ಮಧ್ಯಾಹ್ನದ ಬಿಸಿಯೂಟಕ್ಕೆ ಅಕ್ಕಿ, ಬೇಳೆ, ಸಕ್ಕರೆ ಸೇರಿದಂತೆ 10 ಸಾವಿರ ಮೌಲ್ಯದ ದಿನಸಿ ಪದಾರ್ಥಗಳನ್ನು ಶಾಲೆಗೆ ನೀಡಿದರು. ಜೊತೆಗೆ ಕನಕ ಜಯಂತಿಯ ಪ್ರಯುಕ್ತ ವಿಶೇಷ ಮಕ್ಕಳಿಗೆ ಸಿಹಿಯೂಟ ವ್ಯವಸ್ಥೆ ಮಾಡಿದರು. ಅಲ್ಲದೆ ಬೀರಪ್ಪ ಮತ್ತು ಸ್ನೇಹಿತರ ತಂಡವು ವಿಶೇಷ ಮಕ್ಕಳ ಪಾಲನೆಗಾಗಿ 25 ಸಾವಿರ ರೂ. ಆರ್ಥಿಕ ನೆರವು ನೀಡಿದರು. ಅಹಲ್ಯ ಕರಿಯಪ್ಪನವರು 2 ಸಾವಿರ ರೂ. ಆರ್ಥಿಕ ಸಹಾಯ ಮಾಡಿದರು. ನೆರವು ನೀಡಿದ ಎಸ್.ಶ್ರೀಕಾಂತ್, ಬೀರಪ್ಪ, ಕರಿಯಪ್ಪ ಅವರನ್ನು ಶಾಲೆ ವತಿಯಿಂದ ಅಭಿನಂದಿಸಲಾಯಿತು ಎಂದು ಬಸವೇಶ್ವರ ನವಚೇತನ ಟ್ರಸ್ಟ್ ವಿಶೇಷ ಮಕ್ಕಳ ಶಾಲೆಯ ಸಂಸ್ಥಾಪಕ ಅಧ್ಯಕ್ಷ ಮರಿಗೌಡ ತಿಳಿಸಿದ್ದಾರೆ.

ಈ ವೇಳೆ ಸಮಾಜ ಸೇವಕ ಡಾ. ಮಾಲೇಗೌಡ, ಅಮೀನಾ ಬೇಗಂ, ಎಂ.ಕಾಲೀಶ್, ಕಾಳೇಗೌಡ, ಸೋಮಶೇಖರ್, ತೇಜಸ್ವಿನಿ, ಸುಮಿತ್ರ, ಸನ್ನತಿ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿಕಲಚೇತನರ ಕ್ರೀಡಾಕೂಟಕ್ಕೆ ಚಾಲನೆ

ವಿಕಲಚೇತನರಿಗೆ ಅನುಕಂಪದ ಬದಲು ಆತ್ಮವಿಶ್ವಾಸ ತುಂಬಬೇಕು

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ







ಮೈಸೂರು, ಡಿ.1(ಎಂಟಿವೈ)– ಸಾಮಾನ್ಯ ಮಕ್ಕಳಿಂದ ವಿಕಲಚೇತನ ಮಕ್ಕಳನ್ನು ದೂರ ಮಾಡದೆ, ಅನುಕಂಪ ತೋರುವ ಬದಲಿಗೆ ಆತ್ಮವಿಶ್ವಾಸ ತುಂಬಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸಲಹೆ ನೀಡಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸಂಯುಕ್ತಾಶ್ರದಲ್ಲಿ ಆಯೋಜಿಸಿದ್ದ ಮೈಸೂರು ಜಿಲ್ಲೆಯ ವಿಕಲಚೇತನರ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಕಲಚೇತನ ಮಕ್ಕಳನ್ನು ನೋಡಿಕೊಳ್ಳುವುದು ಸುಲಭದ ಕೆಲಸವಲ್ಲ. ಅವರನ್ನು ನೋಡಿಕೊಳ್ಳಲು ಪ್ರೀತಿ ಹಾಗೂ ಬಹಳ ಬದ್ಧತೆ ಇರಬೇಕು. ವಿಶೇಷ ಚೇತನರ ಮಕ್ಕಳನ್ನು ನೋಡಿಕೊಳ್ಳುವ ಶಿಕ್ಷಕರ ಪಾತ್ರ ಅನನ್ಯ. ಪೋಷಕರಿಗಿಂತಲೂ ಶಿಕ್ಷಕರು ಮಮತೆಯಿಂದ ನೋಡಿಕೊಂಡು ಹೊಸ ದಾರಿ ತೋರುತ್ತಾರೆ. ಕಳೆದ 25 ವರ್ಷಗಳಿಂದ ಸರ್ಕಾರ ವಿಕಲಚೇತನ ಮಕ್ಕಳ ಕ್ರೀಡಾಕೂಟವನ್ನು ನಡೆಸಲಾಗುತ್ತಿದೆ. ಈ ಹಿಂದೆ ಕೆಲವು ಸಂಘ ಸಂಸ್ಥೆಗಳು ಇದನ್ನು ನಡೆಸುತ್ತಿದ್ದವು. ಇಂದು ವಿಕಲಚೇತನರ ಕ್ರೀಡಾಕೂಟ ನಡೆಸಲು ಸರ್ಕಾರ ಪ್ರತಿ ಜಿಲ್ಲೆಗೂ 50 ಸಾವಿರ ಪ್ರೋತ್ಸಾಹ ಧನ ನೀಡುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿರುವ ಈ ಕ್ರೀಡಾಕೂಟದಲ್ಲಿ ವಿಶೇಷಚೇತನ ಮಕ್ಕಳು ತಮ್ಮಲ್ಲಿನ ಪ್ರತಿಭೆ ಅನಾವರಣ ಮಾಡುತ್ತಿದ್ದಾರೆ. ಇಂತಹ ಮಕ್ಕಳನ್ನು ಪ್ರೀತಿಸುವ ಹಾಗೂ ಕ್ರೀಡೆಯ ಮೂಲಕ ರಂಜಿಸುವ ಉತ್ತಮ ಕೆಲಸವಾಗುತ್ತಿದೆ ಎಂದರು. ಇದೇ ಸಂದರ್ಭದಲ್ಲಿ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಮಾತನಾಡಿ, ಕ್ರೀಡೆಯಲ್ಲಿ ವಿಶೇಷ ಚೇತನ ಮಕ್ಕಳು ಭಾಗವಹಿಸುತ್ತಿರುವುದು ವಿಶೇಷದಾಯಕವಾಗಿದೆ. ವಿಶೇಷ ಚೇತನ ಮಕ್ಕಳು ಕೂಡ ಅವರಲ್ಲಿರುವ ಸಾಮರ್ಥ್ಯವನ್ನು ಸಾಬೀತು ಪಡಿಸುವ ಕೆಲಸ ಈ ಕ್ರೀಡಾ ಸ್ಪರ್ಧೆಯಲ್ಲಿ ಆಗಲಿದೆ. ಸೋಲು ಗೆಲುವಿನ ಪ್ರಶ್ನೆ ಬೇಡ. ಅವಕಾಶಗಳು ತಾನಾಗಿಯೇ ಮುಂದೆ ಬರುತ್ತವೆ. ಭಾಗವಹಿಸುವಿಕೆ ಮುಖ್ಯ ಎಂದು ತಿಳಿಸಿದರು.

ಪಥಸಂಚಲನಕ್ಕೆ ಹಸಿರುನಿಶಾನೆ ತೋರಿದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ವಿಶೇಷಚೇತನರ ಮಕ್ಕಳಿಗೆ ಅನುಕಂಪ, ಮಾನವೀಯತೆ ತೋರುವ ಜತೆಗೆ ಅವರ ಪ್ರತಿಭೆ, ಸಾಮರ್ಥ್ಯವನ್ನು ಹೊರ ತರಲು ಪ್ರೋತ್ಸಾಹ ನೀಡಬೇಕು. ಸರ್ಕಾರದ ಜತೆ ಖಾಸಗಿ ಶಿಕ್ಷಣ ಸಂಸ್ಥೆಗಳು, ಸಂಸ್ಥೆಗಳು ವಿಶೇಷ ಮಕ್ಕಳ ಬಗ್ಗೆ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ವಿಶೇಷಚೇತನರ ಮಕ್ಕಳಲ್ಲಿ ಸಾಮಾನ್ಯ ಮಕ್ಕಳಿಗಿಂತಲೂ ವಿಶೇಷ ಗುಣಗಳಿವೆ. ಕೆಲವೊಮ್ಮೆ ಅವರ ಪ್ರತಿಭೆ ನೋಡಿದರೆ ಆಶ್ಚರ್ಯ ಮತ್ತು ದಂಗಾಗುವಂತೆ ಕಾಣಿಸುತ್ತದೆ ಎಂದರು.

ಆಕರ್ಷಕ ಪಥಸಂಚಲನ: ವಿಕಲಚೇತನರ ಕ್ರೀಡಾಕೂಟದ ಅಂಗವಾಗಿ ವಿವಿಧ ತಂಡಗಳ ಮಕ್ಕಳು ಆಕರ್ಷಕ ಪಥ ಸಂಚಲನ ನಡೆಸಿದರು. ಅಂಧ ಮಕ್ಕಳ ಸರ್ಕಾರಿ ಶಾಲೆ, ಕಿವುಡ ಮಕ್ಕಳ ಸರ್ಕಾರಿ ಶಾಲೆ, ಮಾತೃ ಮಂಡಳಿ ಶಿಶು ವಿಕಾಸ ಕೇಂದ್ರ, ಕರುಣಾಮಯಿ ಫೌಂಡೇಷನ್, ಶ್ರೀರಂಗರಾವ್ ಸ್ಮಾರಕ ಅಂಧ ಮಕ್ಕಳ ವಸತಿ ಶಾಲೆ, ಅವರ್ ಲೇಡಿಮರ್ಸಿ ಕಿವುಡು ಗಂಡು ಮತ್ತು ಹೆಣ್ಣು ಮಕ್ಕಳ ವಸತಿಯುತ ಶಾಲೆ, ಸ್ನೇಹಕಿರಣ, ಜೆಎಂಜೆ ರೆಸಿಡೆನ್ಷಿಯಲ್ ಸ್ಕೂಲ್ ಫಾರ್ ದಿ ಮೆಂಟಲಿ ಚಾಲೆಂಜ್, ಸಾಯಿರಂಗ ವಿದ್ಯಾ ಸಂಸ್ಥೆ, ವಿಕಲಚೇತನ ಅಭ್ಯುದಯ ಸೇವಾ ಸಂಸ್ಥೆ, ಪುಟ್ಟೀರಮ್ಮ ಕಿವುಡ ಮಕ್ಕಳ ವಸತಿ ಶಾಲೆ, ಅರುಣೋ ದಯ ವಿಶೇಷ ಮಕ್ಕಳ ಶಾಲೆ, ಜೆಎಸ್‌ಎಸ್ ಸಹನ ಬುದ್ಧಿಮಾಂದ್ಯ ಮಕ್ಕಳ ಶಾಲೆ, ವಿಸಡಂ ಸ್ಪೆಷಲ್ ಸ್ಕೂಲ್, ಮೈತ್ರಿ ವಿದ್ಯಾಸಂಸ್ಥೆ, ಸಮರ್ಥನಂ ಟ್ರಸ್ಟ್, ಆಶಿಯಾನ ಇನ್ಸಿಟ್ಯೂಟ್ ಫಾರ್ ಸ್ಪೆಷಲ್ ಚಿಲ್ಡ್ರನ್, ರಾಷ್ಟ್ರೀಯ ಅಂಧರ ಸಂಸ್ಥೆ ಅಂಧರ ಮತ್ತು ಕಿವುಡರ ಕೈಗಾರಿಕಾ ತರಬೇತಿ ಕೇಂದ್ರ, ನಿರೀಕ್ಷೆ ವಿಶೇಷ ಶಾಲೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಅಂಧ ಹಾಗೂ ಶ್ರವಣ ದೋಷವುಳ್ಳ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರ ಮೈಸೂರು ಜಿಲ್ಲಾ ಪೇರೆಂಟ್ಸ್ ಅಸೋಸಿಯೇಷನ್ ಫಾರ್ ಎಂಪವರಿಂಗ್ ಡೆವಲಪ್‌ಮೆಂಟ್ ಡಿಸೆಬಲ್ಸ್ ತಂಡದವರು ಪಥ ಸಂಚಲನ ನಡೆಸಿ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಸವರಾಜು, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ.ವಿ.ಜ್ಯೋತಿ, ಅಂಗವಿಕಲರ ಒಕ್ಕೂಟದ ಅಧ್ಯಕ್ಷ ಶೇಖರ್ ದೀಕ್ಷಿತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಚಾಂಪಿಯನ್



ಮೈಸೂರು, ಡಿ.1(ಎಂಕೆ)– ಮೈಸೂರು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ–2023 ದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ(ಡಿಎಆರ್) ಚಾಂಪಿಯನ್ ಆಯಿತು.

ಮೈಸೂರಿನ ಜ್ಯೋತಿನಗರದಲ್ಲಿರುವ ಡಿಎಆರ್ ಮೈದಾನದಲ್ಲಿ ನಡೆದ ಮೂರು ದಿನಗಳ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಗುಂಪು ಹಾಗೂ ವೈಯಕ್ತಿಕ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿದ ಡಿಎಆರ್ ತಂಡ 75 ಅಂಕದೊಂದಿಗೆ ಸಮಗ್ರ ಪ್ರಶಸ್ತಿ ತನ್ನದಾಗಿಸಿಕೊಂಡಿತು.

ಪುರುಷರ ವಿಭಾಗದಲ್ಲಿ 100, 200, 400 ಮೀಟರ್ ಓಟ ಮತ್ತು ಉದ್ದ ಜಿಗಿತದಲ್ಲಿ ಪ್ರಥಮ ಹಾಗೂ ಎತ್ತರ ಜಿಗಿತದಲ್ಲಿ ದ್ವಿತೀಯ ಸ್ಥಾನದೊಂದಿಗೆ ಅತ್ಯುತ್ತಮ ಪ್ರದರ್ಶನ ನೀಡಿದ ಡಿಎಆರ್‌ನ ಜಿ.ಜಿ. ರಘುನಂದನ ಸರ್ವೋತ್ತಮ ಪ್ರಶಸ್ತಿ ಪಡೆದರೆ, ಮಹಿಳಾ ವಿಭಾಗದಲ್ಲಿ 100 ಮೀಟರ್ ಓಟ, ಚಕ್ರ ಎಸೆತ, ಗುಂಡು ಎಸೆತ, ಈಟಿ ಎಸೆತದಲ್ಲಿ ಪ್ರಥಮ ಮತ್ತು 200 ಮೀಟರ್ ಓಟ ಹಾಗೂ ಉದ್ದ ಜಿಗಿತದಲ್ಲಿ ದ್ವಿತೀಯ ಸ್ಥಾನ ಪಡೆದ ಬೈಲಕುಪ್ಪೆ ಪೊಲೀಸ್ ಠಾಣೆಯ ಹೆಚ್.ಎಸ್.ಅಶ್ವಿತಾ ಸರ್ವೋತ್ತಮ ಪ್ರಶಸ್ತಿಗೆ ಭಾಜನರಾದರು.

ಪುರುಷರ 4x100 ರಿಲೇ ಸ್ಪರ್ಧೆಯಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ತಂಡ ಪ್ರಥಮ, ನಂಜನಗೂಡು ವಲಯ ದ್ವಿತೀಯ, ಹುಣಸೂರು ವಲಯ ತೃತೀಯ ಸ್ಥಾನ ಪಡೆದರೆ, 4x400 ರಿಲೇಯಲ್ಲಿ ನಂಜನಗೂಡು ವಲಯ ಪ್ರಥಮ, ಜಿಲ್ಲಾ ಸಶಸ್ತ್ರ ಮೀಸಲು ಪಡೆ ದ್ವಿತೀಯ, ಮೈಸೂರು ಗ್ರಾಮಾಂತರ ತೃತೀಯ ಸ್ಥಾನ ಪಡೆಯಿತು.

ಮಾನಸಿಕ ನೆಮ್ಮದಿ...

ಸದಾ ಒತ್ತಡದಲ್ಲಿ ಕಾರ್ಯ ನಿರ್ವಹಿಸುವ ಪೊಲೀಸರಿಗೆ ವಾರ್ಷಿಕ ಕ್ರೀಡಾಕೂಟ ಮಾನಸಿಕ ನೆಮ್ಮದಿ ನೀಡಲಿದೆ ಎಂದು ದಕ್ಷಿಣ ವಲಯ ಐಜಿಪಿ ಡಾ.ಎಂ. ಬೋರಲಿಂಗಯ್ಯ ಹೇಳಿದರು.

ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಪೊಲೀಸರು ತಮ್ಮ ಉತ್ತಮ ದೈಹಿಕ ಆರೋಗ್ಯಕ್ಕಾಗಿ ಕ್ರೀಡೆಯ ಅಭ್ಯಾಸ ಮುಂದುವರೆಸಿ ಎಂದು ಸಲಹೆ ನೀಡಿದ್ದಲ್ಲದೆ ವಿಜೇತರನ್ನು ಅಭಿನಂದಿಸಿದರು.

ಗುಂಪು ವಿಭಾಗ: ವಾಲಿಬಾಲ್‌ನಲ್ಲಿ ಹುಣಸೂರು, ಜಿಲ್ಲಾ ಸಶಸ್ತ್ರ ಮೀಸಲು ಪಡೆ. ಕಬಡ್ಡಿಯಲ್ಲಿ ಮೈಸೂರು ಗ್ರಾಮಾಂತರ, ಜಿಲ್ಲಾ ಸಶಸ್ತ್ರ ಮೀಸಲು ಪಡೆ. ಹಗ್ಗಜಗ್ಗಾಟದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ, ನಂಜನಗೂಡು. ಕ್ರಿಕೆಟ್‌ನಲ್ಲಿ ಎಸ್‌ಪಿ ಮೈಸೂರು ತಂಡ, ಅಡಿಷನಲ್ ಎಸ್‌ಪಿ ಮೈಸೂರು ತಂಡ ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಿ.ಎನ್.ನಂದಿನಿ ಉಪಸ್ಥಿತರಿದ್ದರು.



ಮೈಸೂರಿನ ವಿಜಯನಗರ ಬಡಾವಣೆಯ 4ನೇ ಹಂತದಲ್ಲಿ 68ನೇ ಸುವರ್ಣ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಶಾಸಕರಾದ ಜಿ.ಟಿ. ದೇವೇಗೌಡರು ಮುಖ್ಯ ಅತಿಥಿಗಳಾಗಿ ಬಡಾವಣೆಯ ನಿವಾಸಿಗಳಿಗೆ ಶುಭಕೋರಿದರು. ಮುಖ್ಯ ಅತಿಥಿಗಳಾಗಿ ಪ್ರಧಾನ ಭಾಷಣವನ್ನು ನಾಡು–ನುಡಿ, ನೆಲ–ಜಲ, ಸಂಸ್ಕೃತಿಯ ಬಗೆಗೆ ಕನ್ನಡಾಭಿಮಾನದ ಸಂದೇಶವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಂಯೋಜನಾಧಿಕಾರಿ ಹಾಗೂ ಭಾಷಾವಿಜ್ಞಾನಿಯಾದ ಡಾ. ಅವರೆಕಾಡು ವಿಜಯಕುಮಾರ್‌ರವರು ನೀಡಿದರು. ಬಡಾವಣೆಯ ಲೇಔಟ್ ಮಂಜು, ಮಹಿಳಾ ಸಂಘದ ಅಧ್ಯಕ್ಷರಾದ ಡಾ. ಸುಮಿತ್ರ ಇತರರು ಉಪಸ್ಥಿತರಿದ್ದರು.

ಎಲ್‌ಪಿಜಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ಬೆಲೆಯಲ್ಲಿ 21 ರೂಪಾಯಿ ಹೆಚ್ಚಳ



ನವದೆಹಲಿ: 2023ರ ವರ್ಷಾಂತ್ಯದಲ್ಲಿ ಕೇಂದ್ರ ಸರ್ಕಾರ ಗ್ರಾಹಕರಿಗೆ ಶಾಕ್ ನೀಡಿದ್ದು, ಡಿಸೆಂಬರ್‌ನ ಮೊದಲ ದಿನವೇ ಎಲ್‌ಪಿಜಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ಬೆಲೆಯಲ್ಲಿ 21 ರೂಪಾಯಿ ಹೆಚ್ಚಳ ಮಾಡಿದೆ.

ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ ಕಂಪನಿಗಳು ವಾಣಿಜ್ಯ ಸಿಲಿಂಡರ್ ಬೆಲೆಯನ್ನು ಹೆಚ್ಚಳ ಮಾಡಿದ್ದು, ಇಂದಿನಿಂದಲೇ (ಡಿಸೆಂಬರ್ 1, ಶುಕ್ರವಾರ) ಹೊಸ ದರ ಅನ್ವಯವಾಗಲಿದೆ. ದರ ಹೆಚ್ಚಳದ ಬಳಿಕ 19 ಕೆಜಿ ತೂಕದ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಚಿಲ್ಲರೆ ವ್ಯಾಪಾರದ ಬೆಲೆ 1796.50 ರೂಪಾಯಿಗೆ ಏರಿಕೆಯಾಗಿದೆ. ಇದು ರಾಷ್ಟ್ರ ರಾಜಧಾನಿ ದೆಹಲಿಯ ಬೆಲೆಯಾಗಿದ್ದು, ಇದೇ ಬೆಲೆ ವಾಣಿಜ್ಯ ನಗರಿ ಮುಂಬೈನಲ್ಲಿ 1,749 ರೂಪಾಯಿಗೆ ಜಿಗಿತವಾಗಿದೆ.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ಡಿ.1– ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ–1ರ ಅರೆ ಅಲೆಮಾರಿ, ಅಲೆಮಾರಿ ವಿದ್ಯಾರ್ಥಿಗಳಿಂದ 2023–24 ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು https://ssp.postmatric.karnataka.gov.in ಮೂಲಕ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು 2024ರ ಜ.10 ಕೊನೆಯ ದಿನಾಂಕವಾಗಿರುತ್ತದೆ. ಮಾಹಿತಿಗಾಗಿ ಇಲಾಖೆಯ ಜಾಲತಾಣ bcwdhelpline @gmail.com ಮತ್ತು ಮೊ.ಸಂ. 8050770005 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲೂಕು ಹಿಂದುಳಿದ ವರ್ಗ ಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾರಂಪರಿಕ ಶೈಲಿಯ ಕಾಂಪೌಂಡ್ ಗೋಪುರ ಕುಸಿತ



ಮೈಸೂರು, ಡಿ.1(ಬಿಎಲ್‌ಯು)– ಮೈಸೂರಿನ ಚಾಮುಂಡಿ ಗೆಸ್ಟ್ ಹೌಸ್ ಹಿಂಭಾಗದ ಪಾರುಪರಿಕ ಶೈಲಿಯ ಕಾಂಪೌಂಡ್ ಗೋಪುರ ಕುಸಿದು ಹಲವು ದಿನಗಳು ಕಳೆದರೂ ಅಧಿಕಾರಿಗಳು ಇತ್ತ ಗಮನ ಹರಿಸಿಲ್ಲ.

ಚಾಮುಂಡಿ ಅತಿಥಿ ಗೃಹ ಹಿಂಭಾಗದ ವಸತಿ ಗೃಹದ ಪಾರಂಪರಿಕ ಶೈಲಿಯ ಕಾಂಪೌಂಡ್ ಗೋಪುರ ಕುಸಿದು ಗೇಟ್ ಕಿತ್ತು ಬಂದಿದೆ. ಇದರಿಂದ ಯಾರೂ ಒಳಗೆ ಹೋಗದಂತೆ ಗೇಟ್‌ನ್ನು ಅಡ್ಡಲಾಗಿ ನಿಲ್ಲಿಸಿ ಸಿಬ್ಬಂದಿಗಳು ಕೈ ತೊಳೆದು ಕೊಂಡಿದ್ದಾರೆ. ಈ ಸ್ಥಳದಲ್ಲಿ ಓಡಾಡಲು ಸಾಧ್ಯವಾಗದ ಕಾರಣ ಬೇರೆ ಮಾರ್ಗದ ಮೂಲಕ ಸಾರ್ವಜನಿಕರು ಓಡಾಡುತ್ತಿದ್ದಾರೆ. ಕಾಂಪೌಂಡ್ ಗೋಪುರ ಕುಸಿದು ಹಲವು ದಿನಗಳಾದರೂ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಸರಪಡಿಸುವ ಗೋಜಿಗೆ ಹೋಗಿಲ್ಲ.

ಕಾಂಪೌಂಡ್ ಗೋಪುರ ಪುನರ್ ನಿರ್ಮಾಣ ಮಾಡಿ ಪಾರಂಪರಿಕ ಕಟ್ಟಡ ಸಂರಕ್ಷಣೆ ಮಾಡಲಿ ಎಂದು ಪಡುವಾರಹಳ್ಳಿ ಎಂ.ರಾಮಕೃಷ್ಣ ಲೋಕೋಪಯೋಗಿ ಇಲಾಖೆಯನ್ನು ಆಗ್ರಹಿಸಿದ್ದಾರೆ.

ಇಂದು ಸಿದ್ದಪ್ಪಾಜಿ ದೇವಸ್ಥಾನ ಕುಂಭಾಭಿಷೇಕ; ಅನ್ನ ಸಂತರ್ಪಣೆ



ಮೈಸೂರು, ಡಿ.1– ಮೈಸೂರಿನ ಕನ್ನೇಗೌಡನ ಕೊಪ್ಪಲು ಪೈಲ್ವಾನ್ ಬಸವಯ್ಯನವರ ವೃತ್ತದ ಬಳಿಯಿರುವ ಅಶ್ವಥ ಕಟ್ಟೆ ಶ್ರೀ ಮಹಾಗಣಪತಿ, ಶ್ರೀ ಸಿದ್ದಪ್ಪಾಜಿ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ 13ನೇ ವರ್ಷದ ಕುಂಭಾಭಿಷೇಕ ಮಹೋತ್ಸವ ಶನಿವಾರ ಜರುಗಲಿದೆ.

ಬೆಳಗ್ಗೆ 8.50ಕ್ಕೆ ಪೂರ್ಣಾಹುತಿ, 9.10ಕ್ಕೆ ಧನಸ್ಸು ಲಗ್ನದಲ್ಲಿ ಕುಂಭಾಭಿಷೇಕ ಅಲಂಕಾರ ಮಹಾಮಂಗಳಾರತಿ ನಂತರ ಮಧ್ಯಾಹ್ನ 12.30ಕ್ಕೆ ತೀರ್ಥಪ್ರಸಾದ ವಿನಿಯೋಗ ಮತ್ತು ಅನ್ನಸಂತರ್ಪಣೆ ನೆರವೇರಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ವಿಪಕ್ಷಗಳಿಲ್ಲದ ಆಡಳಿತ ನಡೆಸಲು ಬಿಜೆಪಿ ಹುನ್ನಾರ

ಕೆಪಿಸಿಸಿ ವಕ್ತಾರೆ ಭವ್ಯ ನರಸಿಂಹಮೂರ್ತಿ



ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಬಹುದು..

“ಸಂವಿಧಾನ ವಿರೋಧಿ ಮತ್ತು ಅಸಂವಿಧಾನಿಕ ಹೇಳಿಕೆಗಳನ್ನು ನೀಡುವ ಇಲ್ಲಿನ ಸಂಸದರು, ಸಮಾಜದ ಸ್ವಾಸ್ಥ್ಯ ಹಾಳುಗೆಡುತ್ತಿದ್ದಾರೆ. ಇದನ್ನು ತಡೆಯುವ ಶಕ್ತಿ ವಕೀಲರಿಗಿದ್ದು, ಸಾಮಾಜಿಕ ಜವಾಬ್ದಾರಿಯೊಂದಿಗೆ ಶ್ರಮಿಸಿದರೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಬಹುದು.

- ಭವ್ಯ ನರಸಿಂಹಮೂರ್ತಿ, ಕೆಪಿಸಿಸಿ ವಕ್ತಾರೆ

ಮೈಸೂರು, ಡಿ.1(ಎಂಕೆ)– ಸಾಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಂಡು ವಿರೋಧ ಪಕ್ಷಗಳೇ ಇಲ್ಲದಂತೆ ಆಡಳಿತ ನಡೆಸಲು ಬಿಜೆಪಿ ಹುನ್ನಾರ ನಡೆಸಿದೆ ಎಂದು ಕೆಪಿಸಿಸಿ ವಕ್ತಾರರಾದ ಭವ್ಯ ನರಸಿಂಹಮೂರ್ತಿ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಜಿಲ್ಲಾ ಕಾಂಗ್ರೆಸ್ ಕಾನೂನು ಘಟಕದ ವತಿಯಿಂದ ಆಯೋಜಿಸಿದ್ದ ಸಂವಿಧಾನ ಸಮರ್ಪಣಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಂವಿಧಾನಿಕ ಸಂಸ್ಥೆಗಳಾದ ಸಿಬಿಐ, ಐಟಿ, ಇಡಿಗಳನ್ನು ದುರುಪಯೋಗ ಪಡಿಸಿಕೊಂಡು ವಿರೋಧ ಪಕ್ಷಗಳ ನಾಯಕರ ಮೇಲೆ ದಾಳಿ ನಡೆಸಲಾಗುತ್ತಿದೆ. ಸೈನ್ಯವನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡು ಮತ ಕೇಳುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಮತ್ತು ಸಂಘ ಪರಿವಾರದಿಂದ ದೇಶದ ಸಂವಿಧಾನಕ್ಕೆ ಅಪತ್ತು ಎದುರಾಗಿದ್ದು, ಇದನ್ನು ಅರಿತು ವಕೀಲರು ಜವಾಬ್ದಾರಿಯಿಂದ ನ್ಯಾಯಾಲಯದ ಒಳಗೆ–ಹೊರಗೆ ಹೋರಾಟ ನಡೆಸಬೇಕಿದೆ. ಬಿಜೆಪಿ ದುರಾಡಳಿತಕ್ಕೆ ಕರ್ನಾಟಕದ ಜನರು ಬುದ್ಧಿ ಕಲಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅಲೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಕರ್ನಾಟಕದಿಂದ ಕಾಂಗ್ರೆಸ್ ಪುಟ್ಟಿದೇಳುತ್ತಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ನಿರೀಕ್ಷೆ ಇದೆ. ಇದಕ್ಕಾಗಿ ವಕೀಲರು ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕಾನೂನು ಘಟಕ ಅಧ್ಯಕ್ಷ ತಿಮ್ಮಯ್ಯ, ಕಾರ್ಯದರ್ಶಿ ಎಸ್. ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಸಂತ ಶ್ರೇಷ್ಠ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು. ಬ್ಯಾಂಕ್ ಅಧ್ಯಕ್ಷೆ ಪಿ. ರಾಜೇಶ್ವರಿ, ನಿರ್ದೇಶಕರಾದ ಎಸ್.ಸೋಮಣ್ಣ, ಕೆ.ಉಮಾಶಂಕರ್, ಎಸ್‌ಬಿಎಂ ಮಂಜು, ರಾಜಕೀಯ ರವಿಕುಮಾರ್, ಎಸ್.ಆರ್.ರವಿಕುಮಾರ್, ರೇವಣ್ಣ, ಪಡುವಾರಹಳ್ಳಿ ಎಂ. ರಾಮಕೃಷ್ಣ, ಕಾರ್ಯದರ್ಶಿ ಹರ್ಷಿತ್ ಗೌಡ, ಸದಸ್ಯರು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ತಾಯಿ–ಮಗು ನಾಪತ್ತೆ





ಮೈಸೂರು, ಡಿ.1– ನಗರದ ಹೆಬ್ಬಾಳದ ನಿವಾಸಿ, 24 ವರ್ಷದ ಮಹಿಳೆ ಕೀರ್ತನ ಮತ್ತು ಅವರ ಮಗು 2 ವರ್ಷದ ಜಸ್ವಿಕ್ ನ.30 ರಂದು ಕಾಣೆಯಾಗಿದ್ದು, ಹೆಬ್ಬಾಳ್ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಕಾಣೆಯಾದ ಕೀರ್ತನ ಸುಮಾರು 4.8 ಅಡಿ ಎತ್ತರವಿದ್ದು, ಕೋಲು ಮುಖ, ಸಾಧಾರಣಾ ಶರೀರ, ಎಣ್ಣೆಗೆಂಪು ಮೈ ಬಣ್ಣ ಹೊಂದಿದ್ದು, ಕನ್ನಡ ಭಾಷೆಯನ್ನು ಮಾತನಾಡುವರು, ಎಡಗೈನಲ್ಲಿ ANNA ಎಂಬ ಅಚ್ಚೆ ಹಾಕಿಸಿರುತ್ತಾರೆ. ಕಾಣೆಯಾದ ಸಂದರ್ಭದಲ್ಲಿ ಹಸಿರು ಬಣ್ಣದ ಚೂಡಿದಾರ್ ಧರಿಸಿರುತ್ತಾರೆ. ಅವರ ಮಗು ಜಸ್ವಿಕ್ ಸುಮಾರು 2 ಅಡಿ ಎತ್ತರವಿದ್ದು, ದುಂಡು ಮುಖ, ಗೋಧಿ ಮೈ ಬಣ್ಣ ಹೊಂದಿದ್ದು, ಕಾಣೆಯಾದ ಸಮಯ ದಲ್ಲಿ ಬಿಳಿ ಬಣ್ಣದ ಶರ್ಟ್, ನೀಲಿ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಕಾಣೆಯಾದ ವ್ಯಕ್ತಿ ಪತ್ತೆಯಾದಲ್ಲಿ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ದೂ.ಸಂ: 2418318, ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂ: 2418339 ಅನ್ನು ಸಂಪರ್ಕಿಸಬಹುದು ಎಂದು ಹೆಬ್ಬಾಳ್ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಬೇಡಿಕೆ ಮುಂದಿಟ್ಟು ಪೌರಕಾರ್ಮಿಕರ ಪ್ರತಿಭಟನೆ



ಮೈಸೂರು, ಡಿ.1(ಜಿಎ)–ಮೈಸೂರು ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೇರಪಾವತಿ, ಹೊರಗುತ್ತಿಗೆ ಪೌರ ಕಾರ್ಮಿಕರು, ಒಳಚರಂಡಿ ಸ್ವಚ್ಛತಾ ಕಾರ್ಮಿಕರು, ವಾಹನ ಚಾಲಕರನ್ನು ಕಾಯಂಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥ ಬಡಾವಣೆಯಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಬಳಿ ಜಮಾವಣೆಗೊಂಡ ಪ್ರತಿಭಟನಾಕಾರರು ಬೇಡಿಕೆ ಈಡೇರಿಕೆಗೆ ಘೋಷಣೆಗಳನ್ನು ಕೂಗಿದರು. ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ, ಸಾರ್ವಜನಿಕರ ಆರೋಗ್ಯ ಕಾಪಾಡುವುದು ಆಯಾಯ ಸ್ಥಳೀಯ ಸಂಸ್ಥೆಗಳ ಕರ್ತವ್ಯ. ಹೀಗಾಗಿ ಸ್ವಚ್ಛತೆ, ಒಳ ಚರಂಡಿ, ನೀರು ಸರಬರಾಜು ಸೇರಿದಂತೆ ಹಲವು ಸೇವೆಗಳನ್ನು ಗುತ್ತಿಗೆ, ಹೊರ ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ನೇಮಕವಾದವರು ಮಾಡುತ್ತಾ ಬಂದಿದ್ದಾರೆ. ಇದು ಸರ್ಕಾರಿ ಗುಲಾಮ ಪದ್ಧತಿಗೆ ಸಮನಾಗಿದೆ ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರ ಕಳೆದ ಎರಡು ದಶಕಗಳಿಂದ ಪ.ಜಾತಿ, ಪ.ಪಂಗಡ ಹಾಗೂ ಇತರೆ ಹಿಂದುಳಿದ ಸಮುದಾಯಗಳ ನೌಕರರನ್ನು ಸ್ವಚ್ಛತೆ, ಒಳಚರಂಡಿ, ಕಸ ವಿಲೇವಾರಿ, ವಾಹನ ಚಾಲಕರನ್ನಾಗಿ ಗುತ್ತಿಗೆ ಆಧಾರದಲ್ಲಿ ಮಧ್ಯವರ್ತಿಗಳ ಮೂಲಕ ನೇಮಕ ಮಾಡಿಕೊಂಡಿದೆ. ಆದರೆ, ಅವರಿಗೆ ನೀಡಬೇಕಾದ ಕನಿಷ್ಠ ಸೌಲಭ್ಯಗಳಾದ ವೇತನ, ಭವಿಷ್ಯ ನಿಧಿ, ಆರೋಗ್ಯ ವಿಮೆ, ಮಕ್ಕಳ ಶಿಕ್ಷಣ, ಉದ್ಯೋಗ ಭದ್ರತೆ, ವಸತಿ, ಕುಡಿಯುವ ನೀರು ಒಳಚರಂಡಿ ವ್ಯವಸ್ಥೆ ಮಾಡದೆ ವಂಚಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಾನಗರ ಪಾಲಿಕೆಗಳಲ್ಲಿ ಹಲವು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ 544 ಒಳಚರಂಡಿ ಸಹಾಯಕ ಕಾರ್ಮಿಕರನ್ನು ಕೂಡಲೇ ಕಾಯಂ ಮಾಡಬೇಕು. ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಬೇಕು. ಮೈಸೂರು ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸಿ ಮೃತಪಟ್ಟಿರುವ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡಬೇಕು. ಮೃತರಾದರೆ ಪರಿಹಾರವಾಗಿ 10 ಲಕ್ಷ, ನಿವೃತ್ತರಾದರೆ 10 ಲಕ್ಷ ಪರಿಹಾರ ನೀಡಬೇಕು. ಹೆಲ್ತ್ ಕಾರ್ಡ್ ನೀಡಬೇಕು. ನೇರಪಾವತಿ ನೌಕರರಿಗೆ ಗೃಹಭಾಗ್ಯ ಯೋಜನೆ ಜಾರಿಯಾಗಬೇಕು. ನಗರದಲ್ಲಿ ವಿಶ್ರಾಂತಿ ಕೊಠಡಿ, ಶೌಚಾಲಯ ಸೌಲಭ್ಯ ಒದಗಿಸಬೇಕು. ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ರೈತ ವಿದ್ಯಾನಿಧಿ ಮಾದರಿ ವಿದ್ಯಾರ್ಥಿ ವೇತನ ಜಾರಿ ಮಾಡಬೇಕು. ಪೌರಕಾರ್ಮಿಕರ ನೇಮಕ ಕುರಿತು ವಿಶೇಷ ನೇಮಕಾತಿ ನಿಯಮ ಜಾರಿಗೊಳಿಸಬೇಕು. ಒಳ ಚರಂಡಿ ಸಹಾಯಕ ಪೌರ ಕಾರ್ಮಿಕರಿಗೆ, ಸ್ವಚ್ಛತಾ ವಾಹನ ಚಾಲಕರಿಗೆ ಸಂಕಷ್ಟ ಭತ್ಯೆ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಮೇಯರ್ ನಾರಾಯಣ, ರಾಜ್ಯ ಸಂಚಾಲಕ ಎಸ್.ಎಂ. ಪಳನಿಸ್ವಾಮಿ, ಜಿಲ್ಲಾಧ್ಯಕ್ಷ ಎಸ್.ನಾಗರಾಜ್, ರಾಜ್ಯ ಉಪಾಧ್ಯಕ್ಷ ಆರ್.ಶಿವಣ್ಣ, ಪ್ರಧಾನ ಕಾರ್ಯದರ್ಶಿ ಎನ್.ರಾಜ, ಆರ್.ದಾಸ್, ಯತಿರಾಜ್, ಪಿ.ಮಂಜುನಾಥ್, ಪಳನಿ, ಆರ್.ಹರೀಶ್, ಜೈರಾಮ್, ಆರ್.ಆರ್. ರಮೇಶ್, ಬನ್ನಮ್ಮ, ಸಿ.ಪಿ.ರಾಜೀವ್‌ಕುಮಾರ್, ಕಮಲ್, ಶಂಕರಪ್ಪ ನೂರಾರು ಪೌರಕಾರ್ಮಿಕರು ಪಾಲ್ಗೊಂಡಿದರು.

ಚಿರತೆ ದಾಳಿ: ರೈತನಿಗೆ ಗಾಯ



ಮದ್ದೂರು, ಡಿ.1– ಹಾಡಹಗಲೇ ರೈತನ ಮೇಲೆ ಚಿರತೆ ದಾಳಿ ಮಾಡಿ ಗಾಯಗೊಳಿಸಿರುವ ಘಟನೆ ತಾಲೂಕಿನ ಅಡಗನಹಳ್ಳಿಯಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ.

ಗ್ರಾಮದ ರೈತ ಪ್ರಕಾಶ್ ಎಂಬುವರೇ ಗಾಯಗೊಂಡವರು. ಈತ ಇಂದು ಮಧ್ಯಾಹ್ನ ತಮ್ಮ ಜಮೀನಿನ ಬಳಿ ಕುರಿಗಳನ್ನು ಮೇಯಿಸುತ್ತಿದ್ದ ವೇಳೆ ಚಿರತೆ ಏಕಾಏಕಿ ಕುರಿಗಳ ಮೇಲೆ ದಾಳಿ ಮಾಡಿದೆ. ಈ ಸಂದರ್ಭ ಕುರಿಗಳನ್ನು ರಕ್ಷಣೆ ಮಾಡಲು ಹೋದ ರೈತ ಪ್ರಕಾಶ್ ಮೇಲೂ ದಾಳಿ ಮಾಡಿ ಕಿವಿ ಮತ್ತು ಕೈ ಸೇರಿದಂತೆ ವಿವಿಧೆಡೆ ಕಚ್ಚಿ ಗಾಯಗೊಳಿಸಿದೆ. ಈ ವೇಳೆ ಪ್ರಕಾಶ ಕೂಗಿಕೊಂಡಿದ್ದು, ಅಕ್ಕಪಕ್ಕದ ಜಮೀನಿನಲ್ಲಿದ್ದವರು ಸ್ಥಳಕ್ಕಾಗಮಿಸುತ್ತಿದ್ದಂತೆ ಚಿರತೆ ಸ್ಥಳದಿಂದ ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಾಲೂಕು ವಲಯ ಅರಣ್ಯಾಧಿಕಾರಿ ಗವಿಯಪ್ಪ, ಉಪ ವಲಯ ಅರಣ್ಯಾಧಿಕಾರಿ ರತ್ನಾಕರ್ ಸೇರಿದಂತೆ ಸಿಬ್ಬಂದಿ ಪರಿಶೀಲನೆ ನಡೆಸಿ ರೈತ ಪ್ರಕಾಶ್‌ಗೆ ಕೆಸ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ರವಾನಿಸಿದರು.

ಚಿರತೆ ಹಾವಳಿ ಹೆಚ್ಚಿದೆ: ತಾಲೂಕಿನ ಆತಗೂರು ಹೋಬಳಿಯಲ್ಲಿ ಚಿರತೆ ದಿನೇ ದಿನೆ ಹೆಚ್ಚುತ್ತಿದೆ. ಇತ್ತೀಚೆಗೆ ಮಲ್ಲನಾಯಕಹಳ್ಳಿ ಹೊರವಲಯದ ಒಂಟಿ ಮನೆ ಮುಂದೆ ಇದ್ದ ಕೋಳಿಗಳನ್ನು ತಿನ್ನಲು ಬಂದ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿದ್ದ ಕಾರಣ ಈ ಭಾಗದ ರೈತರು, ಸಾರ್ವಜನಿಕರಲ್ಲಿ ಆತಂಕ ಹೆಚ್ಚಿಸಿದೆ. ಹೀಗಾಗಿ ಚಿರತೆಗಳ ನಿಯಂತ್ರಣಕ್ಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹೆಣ್ಣು ಭ್ರೂಣ ಹತ್ಯೆ ಬಗ್ಗೆ ಮಾಹಿತಿ ಇದ್ದರೂ ತಡೆಯುವಲ್ಲಿ ಜಿಲ್ಲಾಡಳಿತ ನಿರ್ಲಕ್ಷ್ಯ: ಆರೋಪ

ಮಂಡ್ಯ, ಡಿ.1– ತಾಲೂಕಿನ ಹಾಡ್ಯ ಗ್ರಾಮದ ಬಳಿಯ ಆಲೆಮನೆಯಲ್ಲಿ ಭ್ರೂಣ ಹತ್ಯೆ ನಡೆಯುತ್ತಿರುವ ಬಗ್ಗೆ ಮಾಹಿತಿ ಇದ್ದರೂ ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದು, ಮುಚ್ಚಿ ಹಾಕುವ ಪ್ರಯತ್ನ ನಡೆದಿದೆ ಎಂದು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಎಲ್ಲಾ ಪ್ರಾತಿಪರ ಸಂಘಟನೆಗಳು ಹಾಗೂ ಮಹಿಳಾ ವಿಮೋಚನಾ ಸಮಿತಿಯ ಜನಾರ್ಧನ್ ಆರೋಪಿಸಿದರು.

ಹಾಡ್ಯ ಗ್ರಾಮದ ಆಲೆಮನೆಯಲ್ಲಿ ಭ್ರೂಣ ಲಿಂಗ ಪತ್ತೆ ಮಾಡಿ ಹತ್ಯೆ ಮಾಡುವ ಜಾಲವನ್ನು ಬೆಂಗಳೂರು ಪೊಲೀಸರು ಬೇಧಿಸಿದ್ದಾರೆ. ಮಾಹಿತಿ ತಿಳಿದ ತಕ್ಷಣ ಸಂಘಟನೆಗಳು ಕಳೆದ ಅ.26ರಂದೇ ಜಿಲ್ಲಾಧಿಕಾರಿ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗಿತ್ತು. ಆದರೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದರು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರು ಪೊಲೀಸರು 6 ಮಂದಿಯನ್ನು ಬಂಧಿಸಿದ ನಂತರ ಹಾಗೂ ಸಂಘಟನೆಗಳ ಪ್ರತಿರೋಧ ಹೆಚ್ಚಾದ ಮೇಲೆ ಮೇಲಧಿಕಾರಿಗಳ ಆದೇಶದ ನಂತರ ದಂಧೆ ನಡೆಸುತ್ತಿದ್ದ ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದಾರೆ. ಅಷ್ಟರಲ್ಲಿ ಎಲ್ಲಾ ಸಾಕ್ಷಿಗಳನ್ನು ನಾಶ ಮಾಡಿದ್ದಾರೆ. ಅಲ್ಲದೆ, ಇದುವರೆಗೂ ಆಲೆಮನೆ ಮಾಲೀಕರ ಮೇಲೆ ಪ್ರಕರಣ ದಾಖಲಾಗಿಲ್ಲ. ಆಲೆಮನೆ ಸೀಜ್ ಮಾಡಿಲ್ಲ. ಇದನ್ನು ನೋಡಿದರೆ ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ನಡೆದಂತೆ ಕಾಣುತ್ತಿದೆ ಎಂದು ದೂರಿದರು.



ಜಿಲ್ಲೆಯಲ್ಲಿ ಇದುವರೆಗೂ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ನಿಷೇಧ ಕಾಯ್ದೆಯಡಿ ದಾಖಲಾಗಿರುವ ಯಾವುದೇ ಪ್ರಕರಣಗಳು ತಾರ್ಕಿಕ ಅಂತ್ಯ ಕಂಡಿಲ್ಲ. ತಪ್ಪಿತಸ್ಥರಿಗೆ ಯಾವುದೇ ಕ್ರಮ ಆಗಿಲ್ಲ. ಶಿವಳ್ಳಿ ಆಸುಪಾಸಿನಲ್ಲಿ ಮೊಬೈಲ್ ಸ್ಕ್ಯಾನಿಂಗ್ ಮಾಡುವ ಮೂಲಕ ಭ್ರೂಣಪತ್ತೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಆರೋಗ್ಯ ಇಲಾಖೆ ಅಂಕಿ ಅಂಶಗಳಲ್ಲೂ ಗೊಂದಲವಿದೆ. ಆದರೂ ಜಿಲ್ಲಾಡಳಿತ, ಆರೋಗ್ಯ ಇಲಾಖೆ ಎಲ್ಲಿಯೂ ಜಾಗೃತಿ ಫಲಕ ಅಳವಡಿಸಿಲ್ಲ. 14 ಲಕ್ಷ ರೂ. ಅನುದಾನವಿದ್ದರೂ, ಜಾಗೃತಿಗೆ ಸರಿಯಾಗಿ ಬಳಕೆಯಾಗುತ್ತಿಲ್ಲ. ಭ್ರೂಣಪತ್ತೆ ಹಾಗೂ ಹತ್ಯೆ ನಡೆಯುತ್ತಿದೆ ಎಂದು ತಿಳಿದು ಬಂದ ತಕ್ಷಣ ಸ್ಕ್ಯಾನಿಂಗ್ ಸೆಂಟರ್, ಆಸ್ಪತ್ರೆಗಳನ್ನು ಶಾಶ್ವತವಾಗಿ ಮುಚ್ಚಿಸಬೇಕು. ಅಲ್ಲದೇ ವೈದ್ಯರ ಪರವಾನಗಿಯನ್ನು ವೈದ್ಯಕೀಯ ಪರಿಷತ್‌ನಲ್ಲಿ ರದ್ದುಪಡಿಸಬೇಕು. ಗರ್ಭಿಣಿಯರು 4 ತಿಂಗಳ ಬಳಿಕ ಆಸ್ಪತ್ರೆಗಳಿಗೆ ಬರುತ್ತಿದ್ದಾರೆ. ಅಂಥವರಿಗೂ ತಾಯಿ ಕಾರ್ಡ್ ನೀಡಲಾಗುತ್ತಿದೆ. ಆದರೆ ಅದಕ್ಕೂ ಮುನ್ನ ಯಾಕೆ ಬಂದಿಲ್ಲ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿಲ್ಲ. ವಿಚಾರಣೆ ನಡೆಸುತ್ತಿಲ್ಲ. ಯಾವುದೇ ಕಾನೂನುಗಳು ಸರಿಯಾಗಿ ಪಾಲನೆಯಾಗುತ್ತಿಲ್ಲ. ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲೆ ಆಗಾಗ್ಗೆ ದಾಳಿ ನಡೆಸಿ ನಿಯಮಗಳನ್ನು ಪಾಲನೆ ಮಾಡುತ್ತಿದ್ದಾರಾ ಎಂಬುದನ್ನು ಖಚಿತಪಡಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲೆಯ ಪೊಲೀಸ್ ಹಾಗೂ ಗುಪ್ತಚರ ಇಲಾಖೆಯ ವೈಫಲ್ಯ ಹೆಚ್ಚಾಗಿದೆ. ಭ್ರೂಣ ಪತ್ತೆ ಬಗ್ಗೆ 2 ವರ್ಷಗಳ ಹಿಂದೆಯೇ ಮಾಹಿತಿ ನೀಡಿದ್ದೆವು. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ. ಹೆಣ್ಣು ಭ್ರೂಣ ಹತ್ಯೆ ತಡೆ ಸಮಿತಿ ಸಭೆಗಳು ಸರಿಯಾಗಿ ನಡೆಯುತ್ತಿಲ್ಲ. ಸಮಿತಿಯಲ್ಲಿರುವವರಿಗೆ ಕಾನೂನಿನ ಅರಿವಿಲ್ಲ. ಅನುಮಾನಾಸ್ಪದ ಗರ್ಭಿಣಿಯರ ಬಗ್ಗೆ ವಿಚಾರಣೆ ನಡೆಯುತ್ತಿಲ್ಲ. ಪತ್ತೆ ಹಚ್ಚುವ ಕಾರ್ಯ ಮಾಡುತ್ತಿಲ್ಲ. ಕಾನೂನನ್ನು ಇನ್ನಷ್ಟು ಕಠಿಣಗೊಳಿಸಬೇಕು. ಇಲ್ಲದಿದ್ದರೆ ಆರೋಪಿಗಳಿಗೆ ಶಿಕ್ಷೆಯಾಗದೆ ಮತ್ತೆ ಇಂತಹ ಘಟನೆಗಳು ಮರುಕಳುಹಿಸಲಿವೆ ಎಂದರು. ಗೋಷ್ಠಿಯಲ್ಲಿ ವಿವಿಧ ಸಂಘಟನೆಗಳ ಮಹಿಳಾ ಮುಖಂಡರಾದ ಸುನಂದಾ ಜಯರಾಂ, ಮಾಜಿ ಶಾಸಕಿ ಮಲ್ಲಾಜಮ್ಮ, ಸಿಐಟಿಯು ಸಿ.ಕುಮಾರಿ, ಮಹಿಳಾ ಮುನ್ನಡೆ ಪೂರ್ಣಿಮಾ, ನಗರಸಭೆ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ, ರೆಡ್‌ಕ್ರಾಸ್ ಸಂಸ್ಥೆಯ ಮೀರಾಶಿವಲಿಂಗಯ್ಯ ಇದ್ದರು.

ಪಾಂಡವಪುರದಲ್ಲಿ ಅದ್ಧೂರಿ ಸುವರ್ಣ ಕರ್ನಾಟಕ ಸಂಭ್ರಮ

● ಸಿಎಸ್‌ಪಿ ಹುಟ್ಟುಹಬ್ಬ ಆಚರಣೆ ● ಪ್ರೇಕ್ಷಕರ ರಂಜಿಸಿದ ಅರ್ಜುನ್ ಜನ್ಯ ತಂಡದ ರಸಸಂಜೆ ಕಾರ್ಯಕ್ರಮ





ಪಾಂಡವಪುರ, ಡಿ.1– ಸುವರ್ಣ ಕರ್ನಾಟಕ 50ರ ಸಂಭ್ರಮ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ 60ನೇ ಹುಟ್ಟುಹಬ್ಬವನ್ನು ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಅದ್ಧೂರಿಯಾಗಿ ಆಚರಿಸಿದರು.

ಕಾರ್ಯಕ್ರಮದ ಅಂಗವಾಗಿ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮತ್ತು ತಂಡದ ಸದಸ್ಯರು ನಡೆಸಿಕೊಟ್ಟ 'ಸಂಗೀತ ರಸಸಂಜೆ' ನೆರೆದಿದ್ದ ಸಾವಿರಾರು ಪ್ರೇಕ್ಷಕರನ್ನು ಶಿಳ್ಳೆ, ಚಪ್ಪಾಳೆಗಳೊಂದಿಗೆ ಹುಚ್ಚೆದ್ದು ಕುಣಿಸಿತು.

ಜೀ ಕನ್ನಡ ವಾಹಿನಿಯ ಡ್ರಾಮ ಜೂನಿಯರ್ ತಂಡದ ಕಲಾವಿದರು ಮಾಜಿ ಸಚಿವ ಸಿ.ಎಸ್.ಪುಟ್ಟ ರಾಜು ಅವರ ಬಾಲ್ಯ ಮತ್ತು ರಾಜಕೀಯವಾಗಿ ಬೆಳೆದು ಬಂದ ದಾರಿಯ ಕುರಿತು ಪ್ರದರ್ಶಿಸಿದ ನಾಟಕ ಎಲ್ಲರ ಕಣ್ಣಲ್ಲಿ ನೀರು ಬರುವಂತೆ ಮಾಡಿತು. ಅರ್ಜುನ್ ಜನ್ಯ ಮತ್ತು ತಂಡದ ಗಾಯಕರು ಹಾಡಿದ ಒಂದೊಂದು ಹಾಡಿಗೂ ನೆರೆದಿದ್ದ ಪ್ರೇಕ್ಷಕರು ವೇದಿಕೆ ಮುಂದೆ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಈ ವೇಳೆ ಕಿರುತೆರೆ ನಟ ನಟಿಯರು ನಡೆಸಿಕೊಟ್ಟ ಆಕರ್ಷಕ ನೃತ್ಯ ಪ್ರದರ್ಶನ ಎಲ್ಲರ ಮೆಚ್ಚುಗೆ ಪಡೆಯಿತು.

ಸಿಎಸ್ಪಿಗೆ ಅಭಿನಂದನೆ: ಇದೇ ವೇಳೆ ವೇದಿಕೆ ಮೇಲೆ ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು, ವಿಶೇಷವಾಗಿ ಪೌರಕಾರ್ಮಿಕ ಮಹಿಳೆ, ರೈತ ಮಹಿಳೆ, ಮಂಗಳಮುಖಿ, ಪುಟಾಣಿಯರು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಪತ್ನಿ ನಾಗಮ್ಮ ಅವರನ್ನು ಅಭಿನಂದಿಸಿದರು. ಅಲ್ಲದೇ 60ನೇ ಹುಟ್ಟುಹಬ್ಬದ ಅಂಗವಾಗಿ ಪುಟ್ಟರಾಜು ಅವರಿಗೆ 60 ಗ್ರಾಂ ತೂಕದ ಚಿನ್ನದ ಸರ ಹಾಗೂ ಬೆಳ್ಳಿ ಕಿರೀಟ ತೊಡಿಸಿ, ಕೇಕ್ ಕತ್ತರಿಸಿ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಇದೇ ಸಂದರ್ಭ ಶಾಸಕ ಹೆಚ್.ಟಿ.ಮಂಜು ದಂಪತಿಯನ್ನೂ ಅಭಿನಂದಿಸಲಾಯಿತು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ರಾಜ್ಯದಲ್ಲಿ ಬರ ಎದುರಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ ಕ್ಷೇತ್ರದ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾಗೂ ನನ್ನ ಅಭಿಮಾನಿಗಳು ಆಚರಿಸುತ್ತಿರುವ ಈ ಕಾರ್ಯಕ್ರಮಕ್ಕೆ ನಾನು ಬರಲು ಒಪ್ಪಿರಲಿಲ್ಲ. ಆದರೆ, ಪಕ್ಷದ ಎಲ್ಲಾ ಮುಖಂಡರು ಕರ್ನಾಟಕಕ್ಕೆ ಸುವರ್ಣ ಸಂಭ್ರಮದ ವಿಶೇಷ ವರ್ಷ ಆಗಿರುವುದರಿಂದ ಕಾರ್ಯಕ್ರಮ ನಡೆಸುತ್ತಿದ್ದೇವೆ. ನೀವು ಒಪ್ಪಿಕೊಳ್ಳಬೇಕೆಂದು ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ಒಪ್ಪಿಕೊಂಡು ಬಂದೆ ಎಂದರು.

ಜೀ ಕನ್ನಡ ವಾಹಿನಿಯ ಮಕ್ಕಳು ನನ್ನ ಜೀವನ ಕುರಿತು ಪ್ರದರ್ಶಿಸಿದ ನಾಟಕ ಮತ್ತೆ ಒಂದು ಕ್ಷಣ ನನ್ನನ್ನು ಬಾಲ್ಯದ ಜೀವನಕ್ಕೆ ಕರೆದೊಯ್ಯಿತು. ಕ್ಷೇತ್ರದ ಜನತೆಯ ಆಶೀರ್ವಾದದಿಂದ 3 ಬಾರಿ ಶಾಸಕ, ಸಚಿವ, ಸಂಸದನಾಗಿ ಕೆಲಸ ಮಾಡಲು ಸಾಧ್ಯವಾಯಿತು. ಕ್ಷೇತ್ರದ ಜನತೆ, ಅಭಿಮಾನಿಗಳು, ಕಾರ್ಯಕರ್ತರು ನನ್ನ ಮೇಲೆ ಇಟ್ಟಿರುವ ಪ್ರೀತಿ ವಿಶ್ವಾಸಕ್ಕೆ ಚಿರಋಣಿ ಎಂದರು. ವೇದಿಕೆಯ ಮೇಲೆ ಪಕ್ಷದ ಮುಖಂಡರು, ಕಾರ್ಯಕರ್ತರು, ಗಣ್ಯರು ಹಾಜರಿದ್ದರು.

ವಿಜೃಂಭಣೆಯ ತಂದ್ರಮ್ಮ ದೇವಿ ಜಾತ್ರಾ ಮಹೋತ್ಸವ



ಕೆ.ಆರ್.ಪೇಟೆ, ಡಿ.1– ತಾಲೂಕಿನ ವಳಗೆರೆಮೆಣಸ ಗ್ರಾಮದಲ್ಲಿ ಶ್ರೀತಂದ್ರಮ್ಮ ದೇವಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಕಳೆದ ವರ್ಷವಷ್ಟೇ ನೂತನವಾಗಿ ನಿರ್ಮಿಸಿ ಶ್ರೀತಂದ್ರಮ್ಮ ದೇವಿ ದೇವಾಲಯ ಉದ್ಘಾಟಿಸಿದ್ದ ದೇವಿ ಒಕ್ಕಲಿನ ಭಕ್ತರು ದಾವಣಗೆರೆ ಶ್ರೀಪಂಚಾಚಾರ್ಯ ಧರ್ಮಸಂಸ್ಥೆ ಒಡೆತನದ ರೂಪವತಿ ಆನೆಯನ್ನು ಅರಣ್ಯ ಇಲಾಖೆ, ಜಿಲ್ಲಾಧಿಕಾರಿಗಳು ಮತ್ತು ವನ್ಯಜೀವಿ ಸಂರಕ್ಷಣಾ ಇಲಾಖೆಯ ಅನುಮತಿ ಪಡೆದು ಗ್ರಾಮಕ್ಕೆ ಕರೆತಂದು ದಸರಾ ಆನೆ ಮಾದರಿ ಅಲಂಕಾರ ಮಾಡಿ ಅಂಬಾರಿ ಮಾದರಿ ಪಲ್ಲಕ್ಕಿ ವೇದಿಕೆಯಲ್ಲಿ ಶ್ರೀತಂದ್ರಮ್ಮ ದೇವಿ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ, ರಾತ್ರಿಯಿಡೀ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಿದರು. ಈ ವೇಳೆ 10 ಸಾವಿರಕ್ಕೂ ಹೆಚ್ಚು ಭಕ್ತರು ಹಣ್ಣು, ಕಾಯಿ ಸಮರ್ಪಿಸಿ ದೇವಿ ದರ್ಶನ ಪಡೆದು ಪುನೀತರಾದರು.

ಜಾತ್ರಾ ಮಹೋತ್ಸವ ಅಂಗವಾಗಿ ರಸಸಂಜೆ, ಅನ್ನದಾನ, ಜಾನಪದ ಗಾಯಕ ಯರಹಳ್ಳಿ ಪುಟ್ಟಸ್ವಾಮಿ ಅವರ ತಂಡದಿಂದ ಜಾನಪದ ಗೀತಗಾಯನ, ದೀಪೋತ್ಸವ, ಸಿಡಿಮದ್ದು ಪ್ರದರ್ಶನ, ಪುಷ್ಪಾಲಂಕಾರ ಸೇರಿದಂತೆ ವಿವಿಧ ಕಾರ್ಯಕ್ರಮ ಗಳು ನಡೆದವು. ಈ ವೇಳೆ ಶಾಸಕ ಹೆಚ್.ಟಿ.ಮಂಜು, ಸಮಾಜ ಸೇವಕ ಆರ್.ಟಿ.ಓ.ಮಲ್ಲಿಕಾರ್ಜುನ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ಗ್ರಾಪಂ ಸದಸ್ಯರಾದ ರಮಾನಂದ್, ನೇತ್ರಾವತಿ, ಸಿ.ಆರ್.ಪಿ.ಕುಮಾರ್, ಜಯಂತಿ, ರವೀಂದ್ರ, ಶಶಿರೇಖಾ ಅಶೋಕ್, ಆರ್.ಶ್ರೀನಿವಾಸ್, ತಾಪಂ ಮಾಜಿ ಅಧ್ಯಕ್ಷ ವಿ.ಎನ್.ಮಹದೇವೇಗೌಡ ಸೇರಿದಂತೆ ವಿವಿಧ ಗಣ್ಯರು, ತಂದ್ರಮ್ಮ ದೇವಿ ದೇವಾಲಯ ಟ್ರಸ್ಟ್‌ನ ಪದಾಧಿಕಾರಿಗಳು, ಗ್ರಾಮದ ಯಜಮಾನರು, ಯುವ ಮುಖಂಡರು ಭಾಗವಹಿಸಿದ್ದರು.

ಕೃಷ್ಣಪ್ಪ ನಿಧನ



ಕೆ.ಆರ್.ಪೇಟೆ, ಡಿ.1– ಪಟ್ಟಣದ ಜಯನಗರ ಬಡಾವಣೆ ನಿವಾಸಿ, ಕೆಇಬಿ ನಿವೃತ್ತ ನೌಕರ ಕೃಷ್ಣಪ್ಪ(68) ಶುಕ್ರವಾರ ಸಂಜೆ ನಿಧನರಾದರು. ಮೃತರು ಚೆಸ್ಕಾಂ ಕಿರಿಯ ಇಂಜಿನಿಯರ್ ಕೆ.ರಘು ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಪತ್ನಿ ಲಕ್ಷ್ಮಮ್ಮ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12ಗಂಟೆಗೆ ಹೊಸಹೊಳಲು ಕೆರೆಕೋಡಿ ಬಳಿಯ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

ಬಾಂಬ್ ಬೆದರಿಕೆ

ಮನವಿ ಮಾಡಿದ್ದಾರೆ. ಪೊಲೀಸರು ಮೇಲ್ ಪರಿಶೀಲಿಸಿದಾಗ ಬಾಂಬ್ ಬೆದರಿಕೆಯ ಒಂದೇ ಸಂದೇಶವನ್ನು ಏಕ ಕಾಲಕ್ಕೆ 60 ಶಾಲೆಗಳಿಗೆ ರವಾನಿಸಿರುವುದು ಇ–ಮೇಲ್‌ನ ಸಿಸಿ ಮೂಲಕ ತಿಳಿದು ಬಂದಿದೆ. ಬೆಂಗಳೂರಿನ ಬಸವೇಶ್ವರ ನಗರ, ಯಲಹಂಕ, ಸದಾಶಿವನಗರ ಪೊಲೀಸ್ ಠಾಣೆ ವ್ಯಾಪ್ತಿಯ ಹೆಚ್ಚಿನ ಖಾಸಗಿ ಶಾಲೆಗಳಿಗೆ ಸಂದೇಶ ರವಾನೆಯಾಗಿದೆ. ಮೇಲ್ ಅನ್ನು ಕಂಡು ಕೆಲ ಶಾಲೆಗಳ ಆಡಳಿತ ಮಂಡಳಿಯವರೇ ಪೊಲೀಸರಿಗೆ ಮಾಹಿತಿ ನೀಡಿದರೆ, ಇ–ಮೇಲ್‌ನ ಸಿಸಿಯಲ್ಲಿ ಕಂಡು ಬಂದ ಉಳಿದ ಶಾಲೆಗಳಿಗೆ ಪೊಲೀಸರೇ ಮಾಹಿತಿ ನೀಡಿ ಮಕ್ಕಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವಂತೆ ಶಾಲಾ ಆಡಳಿತ ಮಂಡಳಿಯವರಿಗೆ ಸೂಚಿಸಿದ್ದಾರೆ. ಎಲ್ಲಾ ಶಾಲೆಗಳಲ್ಲೂ ಇಂದು ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಬಾಂಬ್ ನಿಷ್ಕ್ರಿಯ ದಳ ಪರಿಶೀಲನೆ ನಡೆಸಿದ್ದು, ಇದೊಂದು ಹುಸಿ ಬಾಂಬ್ ಕರೆ ಎಂಬುದು ಖಚಿತಪಟ್ಟಿದೆ.

ಶಾಲೆಯಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಮೇಲ್ ಬಂದಿರುವ ವಿಚಾರ ತಿಳಿಯುತ್ತಿದ್ದಂತೆಯೇ ಅನೇಕ ಪೋಷಕರು ಗಾಬರಿಯಿಂದಲೇ ಸಿಕ್ಕ ಸಿಕ್ಕ ವಾಹನಗಳಲ್ಲಿ ಶಾಲೆಗಳಿಗೆ ಆಗಮಿಸಿ, ತಮ್ಮ ಮಗುವನ್ನು ತರಾತುರಿಯಿಂದಲೇ ಶಾಲೆಯಿಂದ ಮನೆಗೆ ಕರೆದೊಯ್ಯುತ್ತಿದ್ದ ದೃಶ್ಯ ಕಂಡುಬಂತು. ಶಾಲೆಯ ಪುಟ್ಟ ಪುಟ್ಟ ಮಕ್ಕಳೂ ಕೂಡ ಭಯಭೀತರಾಗಿ ಪೋಷಕರೊಂದಿಗೆ ತೆರಳುತ್ತಿದ್ದ ದೃಶ್ಯ ಸರ್ವೇಸಾಮಾನ್ಯವಾಗಿತ್ತು.

ಸದಾಶಿವನಗರದ ತಮ್ಮ ಮನೆ ಸಮೀಪವೇ ಇರುವ ನೀವ್ ಅಕಾಡೆಮಿ ಶಾಲೆಗೆ ಬಾಂಬ್ ಬೆದರಿಕೆ ಮೇಲ್ ಬಂದಿದೆ ಎಂಬುದು ಗೊತ್ತಾಗುತ್ತಿದ್ದಂತೆಯೇ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಈ ಶಾಲೆಗೆ ಆಗಮಿಸಿದರು. ಶಾಲೆಗೆ ಬಂದಿದ್ದ ಮೇಲ್ ಅನ್ನು ಓದಿದ ಅವರು, ಶಿಕ್ಷಕರಿಗೆ ಹಾಗೂ ಪೋಷಕರಿಗೆ ಧೈರ್ಯ ತುಂಬಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಹುಸಿ ಬಾಂಬ್ ಕರೆಯಾದರೂ, ನಿರ್ಲಕ್ಷಿಸುವಂತಿಲ್ಲ. 8–10 ಬಾರಿ ಹುಸಿ ಬಾಂಬ್ ಬೆದರಿಕೆ ಹಾಕಿ ನಾವು ಮೈಮರೆತಾಗ ನಿಜವಾಗಿಯೂ ಬಾಂಬ್ ಇಡಬಹುದು ಎಂಬುದನ್ನು ಕಡೆಗಣಿಸಲು ಸಾಧ್ಯವಿಲ್ಲ. ಇಂತಹ ಇ–ಮೇಲ್‌ಗಳು ಎಲ್ಲಿಂದ ಬರುತ್ತಿವೆ ಹಾಗೂ ಯಾರು ಈ ಕೃತ್ಯ ಎಸಗುತ್ತಿದ್ದಾರೆ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತದೆ. ತಪ್ಪಿತಸ್ಥರನ್ನು ಕಾನೂನು ವ್ಯಾಪ್ತಿಯಲ್ಲಿ ಕಠಿಣ ಶಿಕ್ಷೆಗೆ ಗುರಿಪಡಿಸಲಾಗುತ್ತದೆ ಎಂದರು. ಹಲವಾರು ಶಾಲೆಗಳಿಗೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಭೇಟಿ ಮಾಡಿ ಪರಿಶೀಲನೆ ನಡೆಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೊಂದು ಹುಸಿ ಬೆದರಿಕೆ ಎಂಬುದು ಪ್ರಾಥಮಿಕ ತನಿಖೆಯಿಂದಲೇ ತಿಳಿದು ಬಂದಿದೆ. ಆದರೂ ಕೂಡ ನಿರ್ಲಕ್ಷ್ಯ ವಹಿಸದೇ ಎಲ್ಲಾ ಶಾಲೆಗಳಲ್ಲಿ ಬಾಂಬ್ ನಿಷ್ಕ್ರಿಯ ದಳದ ಪೊಲೀಸರು ಹುಡುಕಾಟ ನಡೆಸಿದ್ದಾರೆ ಎಂದರು.

ಈ ಹಿಂದೆಯೂ ಕೂಡ ಹುಸಿ ಬಾಂಬ್ ಕರೆಗಳು ಬಂದಿದ್ದು, ಆರೋಪಿಗಳನ್ನು ಬಂಧಿಸಲಾಗಿದೆ. ಬೆಂಗಳೂರಿನಲ್ಲಿ ಯಾವುದೇ ರೀತಿಯ ದುಷ್ಕೃತ್ಯ ನಡೆಯದಂತೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದು, ಯಾರೂ ಆತಂಕಪಡಬೇಕಾದ ಅಗತ್ಯವಿಲ್ಲ ಎಂದು ಹೇಳಿದರು.

ಶಾಲೆಗಳಿಗೆ ಬಾಂಬ್ ಬೆದರಿಕೆ

ಇ–ಮೇಲ್ ಕಳಿಸಿದವರ ಪತ್ತೆ ಹಚ್ಚಿ ಕಠಿಣ ಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಸೂಚನೆ

ಬೆಂಗಳೂರು, ಡಿ.1(ಕೆಎಂಶಿ)–ಖಾಸಗಿ ಶಾಲೆಗಳಿಗೆ ಬಾಂಬ್ ಬೆದರಿಕೆ




ಇ–ಮೇಲ್ ಕಳುಹಿಸಿದವರ ಮೂಲ ಪತ್ತೆ ಹಚ್ಚುವಂತೆ ಪೊಲೀಸ್ ಇಲಾಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ಮಾಡಿದ್ದಾರೆ. ಈ ರೀತಿಯ ಬಾಂಬ್ ಬೆದರಿಕೆ ಕರೆಗಳು ಪುನರಾವರ್ತನೆಯಾಗದಂತೆ ತಡೆಯುವುದಲ್ಲದೆ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಸೂಚಿಸಿದ್ದಾರೆ.

ಇಂದು ನಗರದ 15 ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ಬಾಂಬ್ ಬೆದರಿಕೆ ಬಂದ ಹಿನ್ನೆಲೆಯಲ್ಲಿ ಬಹುತೇಕ ಶಾಲೆಗಳು ದಿಢೀರ್ ರಜೆ ಘೋಷಣೆ ಮಾಡಿದ್ದರಿಂದ ಮಕ್ಕಳು ಮತ್ತು ಪೋಷಕರು ಇಕ್ಕಟ್ಟಿಗೆ ಸಿಲುಕುವಂತಾಯಿತು. ಈ ಬೆಳವಣಿಗೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು, ಹಿರಿಯ ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಚರ್ಚೆ ಮಾಡಿದ್ದಲ್ಲದೆ, ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳಿ, ಇದು ಉತ್ತಮ ಬೆಳವಣಿಗೆ ಅಲ್ಲ ಎಂದಿದ್ದಾರೆ. ಇಂತಹ ಹುಸಿ ಬಾಂಬ್ ಬೆದರಿಕೆಯನ್ನು ಯಾರು ಹಾಕಿದ್ದಾರೆ, ಇಂತಹ ಸಂದೇಶಗಳು ಎಲ್ಲಿಂದ ಬರುತ್ತವೆ ಎಂಬುದನ್ನು ಪತ್ತೆ ಹಚ್ಚಿ, 24 ಗಂಟೆಯೊಳಗಾಗಿ ಅವರನ್ನು ವಶಕ್ಕೆ ಪಡೆಯಿರಿ. ಇದು ಕೇವಲ ರಾಜಧಾನಿಗೆ ಮಾತ್ರ ಸೀಮಿತವಲ್ಲ, ರಾಜ್ಯದ ವಿವಿಧೆಡೆ ಇಂತಹ ಪ್ರಕರಣಗಳು ಜರುಗುತ್ತಲಿರುತ್ತವೆ. ಇದರಿಂದ ಮಕ್ಕಳ ಮೇಲೆ ಮಾನಸಿಕ ಒತ್ತಡ ಬೀಳುತ್ತದೆ ಎಂದಿದ್ದಾರೆ.

ಬೆಳಗ್ಗೆ ಹುಸಿ ಬಾಂಬ್ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ನಗರದ ಪೊಲೀಸರು ಎಚ್ಚೆತ್ತು, ಕರೆ ಬಂದಿದ್ದ ಶಾಲೆಗಳಿಗೆ ಬಾಂಬ್ ನಿಷ್ಕ್ರಿಯ ದಳದೊಂದಿಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಇದು ಹುಸಿ ಕರೆ ಎಂದು ಘೋಷಿಸಿದರು. ಮಾಧ್ಯಮಗಳಲ್ಲಿ ಸುದ್ದಿ ಪ್ರಕಟಗೊಳ್ಳುತ್ತಿದ್ದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರತಿ ಪಕ್ಷದ ನಾಯಕ ಆರ್. ಅಶೋಕ್, ಕೆಲ ಶಾಲೆಗಳಿಗೆ ತೆರಳಿ ಮಕ್ಕಳು ಮತ್ತು ಪೋಷಕರಿಗೆ ಧೈರ್ಯ ತುಂಬುವ ಕೆಲಸ ಮಾಡಿದರು.

ಬಾಂಬ್ ಬೆದರಿಕೆ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ

ಬೆಂಗಳೂರು, ಡಿ.1–ಶಾಲೆಗಳಿಗೆ ಬಾಂಬ್ ಬೆದರಿಕೆ ಇ–ಮೇಲ್



ರವಾನಿಸಿರುವ ಕೃತ್ಯದ ಹಿಂದೆ ಯಾರೇ ಇದ್ದರೂ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹೇಳಿದರು. ಇಂದಿಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಬೆದರಿಕೆ ಇ–ಮೇಲ್ ಬಂದಿರುವ ಬಗ್ಗೆ ತನಿಖೆ ನಡೆಸುತ್ತಿದ್ದೇವೆ. ಮಕ್ಕಳ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವುದಿಲ್ಲ. ಮಕ್ಕಳು ಆತಂಕದಿಂದ ಶಾಲೆಗೆ ಹೋಗುವ ಪರಿಸ್ಥಿತಿ ಇರಬಾರದು. ಈ ಪ್ರಕರಣದಲ್ಲಿ ಯಾರೇ ತಪ್ಪು ಮಾಡಿದ್ದರೂ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ ಎಂದರು.

ಈ ವಿಚಾರವಾಗಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಬಾಂಬ್ ಬೆದರಿಕೆ ಪ್ರಕರಣವನ್ನು ಹಗುರವಾಗಿ ನೋಡುವ ಪ್ರಶ್ನೆಯೇ ಇಲ್ಲ. ಎಲ್ಲಾ ಶಾಲೆಗಳಿಗೂ ರಕ್ಷಣೆ ಕೊಡುತ್ತೇವೆ. ಈಗಾಗಲೇ ಗೃಹ ಸಚಿವರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಖಾಸಗಿ ಶಾಲೆಗಳಲ್ಲಿ ಈಗಾಗಲೇ ರಕ್ಷಣಾ ವ್ಯವಸ್ಥೆಗಳಿವೆ. ಆದರೂ ಈ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಚಿಂತನೆ ಮಾಡುತ್ತೇನೆ ಎಂದರು. ರಾಜ್ಯದ ಶಾಂತಿ–ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವ ಹುನ್ನಾರ ಇದು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಾಮಾಜಿಕ ಜಾಲತಾಣ–X ನಲ್ಲಿ ಪೋಸ್ಟ್ ಮಾಡಿದ್ದಾರೆ. ಇದರಿಂದ ಮಕ್ಕಳು ಮತ್ತು ಪೋಷಕರು ತೀವ್ರವಾಗಿ ಕಳವಳಗೊಂಡಿದ್ದಾರೆ. ಜನತೆಯಲ್ಲಿ ಭೀತಿ ಸೃಷ್ಟಿಸಿ ಶಾಂತಿ–ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವ ದುರುದ್ದೇಶದಿಂದಲೇ ದುಷ್ಟಶಕ್ತಿಗಳು ಇಂತಹ ಹುನ್ನಾರ ನಡೆಸಿರಬಹುದು. ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರ ಇದನ್ನು ಲಘುವಾಗಿ ಪರಿಗಣಿಸಬಾರದು. ಮಕ್ಕಳನ್ನು ಪೋಷಕರು ಧೈರ್ಯವಾಗಿ ಶಾಲೆಗೆ ಕಳುಹಿಸುವಂತಹ ಸುರಕ್ಷತೆ ಹಾಗೂ ಭದ್ರತೆಯ ಖಾತರಿಯನ್ನು ಸರ್ಕಾರ ನೀಡಬೇಕು. ಈ ವಿಷಯದಲ್ಲಿ ಕೇಂದ್ರ ಸರ್ಕಾರದ ನೆರವು ಪಡೆಯುವ ಬಗ್ಗೆ ರಾಜ್ಯ ಸರ್ಕಾರ ಮೀನಾ–ಮೇಷ ಎಣಿಸಬಾರದು ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಜಾನುವಾರುಗಳ ಮೇವಿಗೆ ಆರು ತಿಂಗಳು ಅಡ್ಡಿಯಿಲ್ಲ

ಪೊಟ್ಟಣಗಳನ್ನು ತ್ವರಿತವಾಗಿ ವಿತರಣೆ ಮಾಡಿ. ಈ ಸೌಲಭ್ಯ ಪಡೆಯಲು ಫ್ರೂಟ್ಸ್ ಐಡಿ ಅಗತ್ಯವಾಗಿರುವುದರಿಂದ ಈ ಬಗ್ಗೆ ರೈತರಿಗೆ ಮಾಹಿತಿ ನೀಡಿ. ಅವರಿಂದ ಅಗತ್ಯ ದಾಖಲೆಗಳನ್ನು ಪಡೆದು, ಫ್ರೂಟ್ಸ್ ಐಡಿ ತೆರೆಯಲು ಸಹಾಯ ಮಾಡುವ ಮೂಲಕ ಹಂಚಿಕೆಯಲ್ಲಿನ ಗುರಿ ಸಾಧಿಸಿ. ಗೋಶಾಲೆಗಳಲ್ಲಿ ಮೇವಿನ ದಾಸ್ತಾನು ಬಗ್ಗೆ ಗಮನಹರಿಸಿ. ಒಟ್ಟಾರೆ ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಿ ಎಂದು ತಿಳಿಸಿದರು.

ಹಳ್ಳಿಗಳಿಗೆ ಹೋಗಿ: ಜಾನುವಾರುಗಳನ್ನು ಬಾಧಿಸುತ್ತಿರುವ ಚರ್ಮಗಂಟು ರೋಗದ ಪ್ರಕರಣಗಳು ಮೈಸೂರು ಹಾಗೂ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಿವೆ. ಮೈಸೂರು ಜಿಲ್ಲೆಯ 257 ಹಳ್ಳಿಗಳಲ್ಲಿ ಒಂದೂವರೆ ಸಾವಿರಕ್ಕೂ ಹೆಚ್ಚು ಜಾನುವಾರುಗಳನ್ನು ಈ ರೋಗ ಬಾಧಿಸಿದ್ದು, ಸುಮಾರು 1300 ರಾಸುಗಳು ಗುಣವಾಗಿವೆ ಎಂದು ಸಭೆಯಲ್ಲಿ ಅಧಿಕಾರಿಗಳು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಕೆ.ವೆಂಕಟೇಶ್, ಚರ್ಮ ಗಂಟು ರೋಗವನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಿ. ಅಧಿಕಾರಿಗಳು ಕೇವಲ ಕಚೇರಿಗಳಿಗೆ ಸೀಮಿತವಾಗದೆ ಎಲ್ಲಾ ಹಳ್ಳಿಗಳಿಗೆ ಬೇಟಿ ನೀಡಿ ವಾಸ್ತವ ಪರಿಸ್ಥಿತಿ ತಿಳಿದು, ಕ್ರಮ ವಹಿಸಬೇಕು. ರೋಗ ಕಾಣಿಸಿಕೊಂಡ ಸುತ್ತಮುತ್ತಲ ಹಳ್ಳಿಗಳಲ್ಲೂ ಪರಿಶೀಲಿಸಬೇಕು. ಇಲಾಖೆಯಲ್ಲಿ ಜಿಲ್ಲಾವಾರು ಅನುದಾನ ಲಭ್ಯವಿದ್ದು, ಪಶುಗಳಿಗೆ ಶೇ.100ರಷ್ಟು ಚಿಕಿತ್ಸೆ ಕಲ್ಪಿಸಬೇಕು. ಆಕಸ್ಮಿಕವಾಗಿ ಮರಣ ಹೊಂದಿರುವ ಪಶುಗಳ ಪರಿಹಾರವನ್ನು ಸಕಾಲದಲ್ಲಿ ವಿತರಣೆ ಮಾಡಬೇಕು ಎಂದು ಹೇಳಿದರು.

ಪರಿಶೀಲನೆ ಭರವಸೆ: ಮೇವು ಖರೀದಿ ಬೆಲೆಯನ್ನು 2012ರಲ್ಲಿ ಕೆಜಿಗೆ 6 ರೂ ನಿಗದಿ ಮಾಡಿದ್ದು, ಈ ದರದಲ್ಲಿ ಮೇವು ಖರೀದಿ ಕಷ್ಟವಾಗುತ್ತಿದೆ ಎಂದು ಅಧಿಕಾರಿಗಳ ಮನವಿಗೆ ಪ್ರತಿಕ್ರಿಯಿಸಿದ ಸಚಿವರು, ಕಟಾವು ಸಂದರ್ಭದಲ್ಲಿ ಸಾಮಾನ್ಯವಾಗಿರುವ ಮೇವಿನ ಬೆಲೆ ನಂತರದ ದಿನಗಳಲ್ಲಿ ಹೆಚ್ಚಾಗುತ್ತದೆ. ಮೇವು ಖರೀದಿ ದರದ ಪರಿಷ್ಕರಣೆ ಸಂಬಂಧ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಮೇವು ಪೋಲಾಗಬಾರದು: ಯಂತ್ರಗಳ ಮೂಲಕ ಭತ್ತದ ಪೈರು ಕಟಾವು(ವಿಷನ್ ಕಟಿಂಗ್) ಮಾಡುವುದರಿಂದ ಮೇವು ವ್ಯರ್ಥವಾಗುತ್ತಿದೆ. ಕೈಯಿಂದ ಅಥವಾ ಹುಲ್ಲು ಹಾಳಾಗದಂತಹ ಯಂತ್ರಗಳ ಮೂಲಕ ಕಟಾವು ಮಾಡುವಂತೆ ಜಿಲ್ಲಾಧಿಕಾರಿಗಳ ಮೂಲಕ ಸೂಚನೆ ನೀಡಿದರೆ ಸೂಕ್ತ ಎಂದು ಅಧಿಕಾರಿಗಳು ಅಭಿಪ್ರಾಯಿಸಿದರು. ಕಾರ್ಮಿಕರ ಕೂಲಿ ವೆಚ್ಚ ಹೆಚ್ಚಾಗುವುದರಿಂದ ಅಥವಾ ಕಾರ್ಮಿಕರ ಕೊರತೆಯಿಂದ ರೈತರು ಯಂತ್ರೋಪಕರಣಗಳ ಮೊರೆ ಹೋಗುತ್ತಾರೆ. ಆದರೆ ಮೇವಿನ ಕೊರತೆ ಬಗ್ಗೆ ಮನವರಿಕೆ ಮಾಡಿಕೊಟ್ಟು, ಸೂಕ್ತ ಯಂತ್ರಗಳ ಮೂಲಕ ಕಟಾವು ಮಾಡಿಸಲು ಮಾರ್ಗದರ್ಶನ ನೀಡುವಂತೆ ಸಚಿವರು ತಿಳಿಸಿದರು.

ಎಬಿಸಿ ಸೆಂಟರ್‌ಗೆ ಜಾಗ ಗುರುತಿಸಿ: ಪಶು ಸಂಗೋಪನಾ ಇಲಾಖೆ ಕಾರ್ಯದರ್ಶಿ ಸಲ್ಮಾ ಫಾಹಿಮ್ ಮಾತನಾಡಿ, ಬೀದಿ ನಾಯಿಗಳ ಸಂಖ್ಯೆ ಸದ್ಯ ನಿಯಂತ್ರಣದಲ್ಲಿದೆ. ಆದರೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಆಗದಿದ್ದರೆ ಮುಂದಿನ ದಿನಗಳಲ್ಲಿ ಸಂಖ್ಯೆ ಜಾಸ್ತಿಯಾಗಬಹುದು. ಈ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಆದೇಶದಂತೆ ಪ್ರತಿ ಜಿಲ್ಲೆಯಲ್ಲಿ ಪ್ರಾಣಿ ಜನನ ನಿಯಂತ್ರಣ(ಅನಿಮಲ್ ಬರ್ತ್ ಕಂಟ್ರೋಲ್–ಎಬಿಸಿ) ಕೇಂದ್ರಗಳನ್ನು ತೆರೆಯಬೇಕಿದೆ. ಜಿಲ್ಲಾ ಕೇಂದ್ರಗಳಲ್ಲಿ ಸ್ಥಳಾವಕಾಶವಿಲ್ಲದಿದ್ದರೆ ತಾಲೂಕು ಕೇಂದ್ರದಲ್ಲಾದರೂ ಎಬಿಸಿ ಸೆಂಟರ್ ತೆರೆಯಬೇಕಿದೆ. ಇದರಲ್ಲಿ ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ಜೊತೆಗೆ ನಮ್ಮ ಇಲಾಖೆ ಜವಾಬ್ದಾರಿಯೂ ಇದೆ ಎಂದು ಸೂಚನೆ ನೀಡಿದರು.

ವೈಜ್ಞಾನಿಕ ಸಮೀಕ್ಷೆ ಮಾಡಿ: ಯಾವ ಜಿಲ್ಲೆಯಲ್ಲೂ ಕಟ್ಟಡ ನಿರ್ವಹಣೆ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡಿಲ್ಲ. ಕಡೇ ಹಂತದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳುವುದು ಸರಿಯಲ್ಲ. ಪಶು ಸಂಗೋಪನಾ ಇಲಾಖೆಯ ಕಾಮಗಾರಿಗಳನ್ನು ಪಿಆರ್‌ಇಡಿಗೆ ವಹಿಸಲಾಗಿದ್ದು, ನಿಗದಿತ ಅವಧಿಯೊಳಗೆ ಗುಣಮಟ್ಟದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು. ಇಲಾಖೆ ಅಧಿಕಾರಿಗಳು ಪರಿಶೀಲಿಸಬೇಕು. ಪಶು ಆಂಬುಲೆನ್ಸ್ ಸೇವೆಯಲ್ಲಿ ಪ್ರಗತಿ ಸಾಧಿಸಬೇಕು. ಈಗಾಗಲೇ ನೀಡಿರುವ ಮೇವಿನ ಬೀಜದ ಮಿನಿ ಕಿಟ್‌ಗಳನ್ನು ತ್ವರಿತವಾಗಿ ಹಂಚಿಕೆ ಮಾಡಿ, ಹೆಚ್ಚಿನ ಬೇಡಿಕೆ ಇದ್ದರೆ, ವೈಜ್ಞಾನಿಕವಾಗಿ ಸಮೀಕ್ಷೆ ಮಾಡಿ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ಪ್ರಸ್ತಾವನೆ ಸಲ್ಲಿಸಬೇಕು. ಔಷಧಗಳ ಬೇಡಿಕೆ, ಪೂರೈಕೆ, ಬಳಕೆ ಮಾಹಿತಿ ಸಂಗ್ರಹಿಸಿ, ನಿಗಾ ವಹಿಸಬೇಕು ಎಂದು ತಿಳಿಸಿದರು.

ಪಶು ಸಂಗೋಪನಾ ಇಲಾಖೆ ಆಯುಕ್ತ ಮಂಜುನಾಥ್ ಪಾಳೇಕರ್, ಜಂಟಿ ನಿರ್ದೇಶಕ ಡಾ.ವೀರಭದ್ರಪ್ಪ, ವಿಭಾಗದ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಪಶು ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಹಾಲಿನ ಖರೀದಿ ದರ ಕಡಿತ; ಸಚಿವರಿಂದ ಸೂಪರ್‌ಸೀಡ್ ಎಚ್ಚರಿಕೆ

ಮೈಸೂರು, ಡಿ.1(ಎಸ್‌ಬಿಡಿ)–ಸರ್ಕಾರದ ಗಮನಕ್ಕೆ ತರದೆ ಸಹಕಾರ ಹಾಲು ಒಕ್ಕೂಟಗಳು ಹಾಲು ಖರೀದಿ ದರ ಕಡಿತಗೊಳಿಸಿದರೆ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಎಚ್ಚರಿಕೆ ನೀಡಿದರು. ಪಶು ಸಂಗೋಪನಾ ಇಲಾಖೆಯ ಮೈಸೂರು ವಿಭಾಗದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಲಾಖೆ ಕಾರ್ಯದರ್ಶಿ ಸಲ್ಮಾ ಫಾಹಿಮ್, ಸಹಕಾರ ಹಾಲು ಒಕ್ಕೂಟಗಳು ಹಾಲು ಖರೀದಿ ದರ ಕಡಿತಗೊಳಿಸಿರುವ ಬಗ್ಗೆ ಪ್ರಶ್ನಿಸಿದರು. ಈ ವೇಳೆ ಮೈಸೂರಿನಲ್ಲಿ 1.50 ರೂ., ಮಂಡ್ಯದಲ್ಲಿ 1.75 ರೂ. ಹಾಗೂ ಚಾಮರಾಜನಗರದಲ್ಲಿ 1 ರೂ. ಕಡಿಮೆ ಮಾಡಿರುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ಮಾಹಿತಿ ನೀಡಿದರು.

ಈ ಬಗ್ಗೆ ಅಚ್ಚರಿಗೊಂಡ ಸಚಿವರು, ನಾನು ಯಾವುದೋ ಮದುವೆಗೆ ಹೋಗುವ ಸಂದರ್ಭದಲ್ಲಿ ಮಂಡ್ಯ ಹಾಲು ಒಕ್ಕೂಟದವರು ಹಾಲು ಖರೀದಿ ದರ ಕಡಿತಗೊಳಿಸಬೇಕೆಂಬ ವಿಷಯ ತಿಳಿಸಿದರು. ಆಗ ನಾನು ನೋಡೋಣ ಎಂದಷ್ಟೇ ಹೇಳಿದೆ. ಆದರೂ ದರ ಕಡಿತ ಮಾಡಿದ್ದಾರೆ. ಮೈಮುಲ್‌ನವರು ಮುಖ್ಯಮಂತ್ರಿಗಳನ್ನೇ ಭೇಟಿ ಮಾಡಿದ್ದರು. ಅವರೂ ಸಹ ಅನುಮತಿ ನೀಡಿಲ್ಲ. ಈ ಬಗ್ಗೆ ಮಾತನಾಡಿ ಕೆಎಂಎಫ್‌ನವರಿಗೆ ತಿಳಿಸುವುದಾಗಿ ಹೇಳಿದ್ದರಷ್ಟೇ. ಆದರೆ ತಮಗಿಷ್ಟ ಬಂದಂತೆ ದರ ಕಡಿತ ಮಾಡಿಕೊಂಡಿದ್ದಾರೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂಬಂಧ ಒಕ್ಕೂಟಗಳ ಅಧ್ಯಕ್ಷರೊಂದಿಗೆ ಸಭೆ ನಡೆಸೋಣವೆಂಬ ಕಾರ್ಯದರ್ಶಿಗಳ ಸಲಹೆಯನ್ನು ತಳ್ಳಿ ಹಾಕಿದ ಸಚಿವರು, ಅಧ್ಯಕ್ಷರೊಂದಿಗೆ ಸಭೆ ನಡೆಸುವುದರಿಂದ ಪ್ರಯೋಜನವಿಲ್ಲ. ಈ ಸಂಬಂಧ ಹಾಲು ಒಕ್ಕೂಟದ ಎಲ್ಲಾ ಉನ್ನತ ಅಧಿಕಾರಿಗಳ ಸಭೆ ನಡೆಸಿ ಸೂಕ್ತ ಮಾರ್ಗಸೂಚಿ ರೂಪಿಸಬೇಕು. ಹಾಲಿನ ದರ ಖರೀದಿಯಲ್ಲಿ ಇಷ್ಟಬಂದಂತೆ ಬದಲಾವಣೆ ಮಾಡಬಾರದು. ಏನೇ ಮಾಡಿದರೂ ಅದನ್ನು ಸರಕಾರದ ಗಮನಕ್ಕೆ ತರಬೇಕು. ಸರಕಾರದ ಗಮನಕ್ಕೆ ತರದೆ ಹಾಲಿನ ದರ ಕಡಿಮೆ ಮಾಡಿರುವ ಒಕ್ಕೂಟವನ್ನು ಸೂಪರ್‌ಸೀಡ್ ಮಾಡಲಾಗುವುದು ಎಂದು ಎಚ್ಚರಿಸಿದರು.

ಅನುಚಿತ ವರ್ತನೆ

ಬೀಚ್‌ನಲ್ಲಿ ಅಸಭ್ಯವಾಗಿ ವರ್ತಿಸಿದ ವಿಚಾರವನ್ನು ತಿಳಿಸಿ, ಕಣ್ಣೀರಿಟ್ಟರು ಎಂದು ಹೇಳಲಾಗಿದೆ. ಈ ವೇಳೆ ಶಿಕ್ಷಕರು, ವಿದ್ಯಾರ್ಥಿನಿಯರನ್ನು ಸಮಾಧಾನಪಡಿಸಿ, ಪೋಷಕರಿಗೆ ವಿಷಯ ತಿಳಿಸುವಂತೆ ಹೇಳಿದರಂತೆ. ಅದರಂತೆ ಶನಿವಾರ ವಿದ್ಯಾರ್ಥಿಗಳು ಪ್ರವಾಸ ಮುಗಿಸಿ ಬೀಚನಹಳ್ಳಿಗೆ ಹಿಂತಿರುಗಿ, ಮುಖ್ಯ ಶಿಕ್ಷಕ ಮತ್ತು ಅಟೆಂಡರ್ ಅನುಚಿತ ವರ್ತನೆಗಳನ್ನು ತಮ್ಮ ತಮ್ಮ ಪೋಷಕರ ಬಳಿ ತೋಡಿಕೊಂಡಿದ್ದಾರೆ.

ಆಕ್ರೋಶಗೊಂಡ ಪೋಷಕರು ಸೋಮವಾರ ಶಾಲೆಗೆ ಬಂದು ಮುಖ್ಯ ಶಿಕ್ಷಕ ನಾಗಣ್ಣನನ್ನು ಭೇಟಿ ಮಾಡಿ, ತಮ್ಮ ಹೆಣ್ಣು ಮಕ್ಕಳ ಮೇಲೆ ನಡೆಸಿರುವ ದೌರ್ಜನ್ಯವನ್ನು ಪ್ರಶ್ನಿಸಿದ್ದಾರೆ. ಈ ವೇಳೆ ಮುಖ್ಯ ಶಿಕ್ಷಕ ಉಡಾಫೆಯಿಂದ ಉತ್ತರಿಸಿ, ಇದನ್ನೆಲ್ಲಾ ಕೇಳಲು ನೀವ್ಯಾರು ಎಂದು ಪ್ರಶ್ನಿಸಿದ್ದಾರೆ. ತಮ್ಮ ಹೆಣ್ಣು ಮಕ್ಕಳ ಮೇಲೆ ನಡೆದಿರುವ ದೌರ್ಜನ್ಯ ಪ್ರಶ್ನಿಸಿದರೆ ತಮ್ಮ ವಿರುದ್ಧವೇ ಹರಿಹಾಯ್ದು ಮುಖ್ಯ ಶಿಕ್ಷಕನನ್ನು ಪೋಷಕರು ಏರು ಧ್ವನಿಯಲ್ಲಿ ದಬಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ಮತ್ತು ಪೋಷಕರ ನಡುವೆ ಮಾತಿನ ಚಕಮಕಿಯೇ ನಡೆದು, ದುಂಡಾವರ್ತನೆ ತೋರಿದ ಮುಖ್ಯ ಶಿಕ್ಷನಿಗೆ ಗೂಸಾ ಕೊಟ್ಟಿದ್ದಾರೆ. ಈ ಬೆಳವಣಿಗೆಯಲ್ಲಿ ಉಳಿದ ಶಿಕ್ಷಕರು ಮೂಕ ಸಾಕ್ಷಿಯಾಗಿದ್ದಾರೆ. ಈ ವೇಳೆ ಮುಖ್ಯ ಶಿಕ್ಷಕನ ನೆರವಿಗೆ ಧಾವಿಸಿ, ಪೋಷಕರಿಗೆ ಆವಾಜ್ ಹಾಕಿದ ಅಟೆಂಡರ್‌ಗೂ ತದುಕಿದ್ದಾರೆ. ಈ ಮಧ್ಯೆ ಕೆಲವರು ಗಲಾಟೆ ಬಿಡಿಸಿ, ಮಾತುಕತೆ ನಡೆಸುತ್ತಿದ್ದ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ಅಲ್ಲಿಂದ ಸದ್ದಿಲ್ಲದೆ ಜಾಗ ಖಾಲಿ ಮಾಡಿ, ತನ್ನ ಚೇಂಬರ್‌ಗೆ ತೆರಳಿ, ರಜೆ ಹಾಕಿ ಜಾಗ ಖಾಲಿ ಮಾಡಿದ್ದಾನೆ. ಇತ್ತ ಗುಮಾಸ್ತ ಕೂಡ ಪರಾರಿಯಾಗಿದ್ದಾನೆ.

ಇದರಿಂದ ಬೇಸರಗೊಂಡ ಪೋಷಕರು ತಮಗೆ ನ್ಯಾಯ ಕೊಡಿಸುವಂತೆ ಅದೇ ಗ್ರಾಮದ ಮಾಜಿ ಶಾಸಕ ಚಿಕ್ಕಣ್ಣ ಅವರ ನಿವಾಸಕ್ಕೆ ತೆರಳಿ, ಮನವಿ ಮಾಡಿದ್ದಾರೆ. ಈ ಮಧ್ಯೆ ವಿಷಯ ತಿಳಿದು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಓ) ಮಾರಯ್ಯ ಶಾಲೆಗೆ ತೆರಳಿ, ಶಾಲಾ ಶಿಕ್ಷಕರು ಮತ್ತು ದೌರ್ಜನ್ಯಕ್ಕೊಳಗಾದ ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದು, ನಂತರ ಪೋಷಕರನ್ನು ಕರೆಸಿಕೊಂಡು ಮಾತುಕತೆ ನಡೆಸಿ, ವರದಿ ಸಿದ್ಧಪಡಿಸಿದ್ದಾರೆನ್ನಲಾಗಿದೆ. ಈ ನಡುವೆ ಮಾಜಿ ಶಾಸಕ ಚಿಕ್ಕಣ್ಣ ಅವರು ಬಿಇಓ ಅವರನ್ನು ಸಂಪರ್ಕಿಸಿ, ಅನುಚಿತವಾಗಿ ವರ್ತಿಸಿದ ಮುಖ್ಯ ಶಿಕ್ಷಕ ಮತ್ತು ಅಟೆಂಡರ್ ಮೇಲೆ ಕ್ರಮ ಜರುಗಿಸಿ, ನ್ಯಾಯ ಕೊಡಿಸಬೇಕು. ಇಲ್ಲದಿದ್ದರೆ ಶಾಲೆಗೆ ಬೀಗ ಹಾಕುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇಷ್ಟೆಲ್ಲಾ ಘಟನೆಗಳ ಮಧ್ಯೆ ಅಟೆಂಡರ್ ರಮೇಶ್ ನಿದ್ರೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಆತನನ್ನು ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ. ಮುಖ್ಯ ಶಿಕ್ಷಕ ನಾಗಣ್ಣ ತಲೆಮರೆಸಿಕೊಂಡಿದ್ದು, ಯಾರ ಫೋನಿಗೂ ಪ್ರತಿಕ್ರಿಯಿಸುತ್ತಿಲ್ಲ ಎಂದು ಹೇಳಲಾಗಿದೆ. ವಿದ್ಯಾರ್ಥಿನಿಯರು ಮತ್ತು ಪೊಲೀಸರಿಂದ ಮಾಹಿತಿ ಸಂಗ್ರಹಿಸಿ, ಬಿಇಓ ಮಾರಯ್ಯ ಅವರು ಡಿಡಿಪಿಐ ಹೆಚ್.ಕೆ.ಪಾಂಡು ಅವರಿಗೆ ವರದಿ ಸಲ್ಲಿಸಿದ್ದು, ಕ್ರಮಕ್ಕೆ ಮುಂದಾಗಿದ್ದಾರೆ. ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಈ ಘಟನೆಯಿಂದ ಇಡೀ ಶಿಕ್ಷಣ ವಲಯ ತಲೆ ತಗ್ಗಿಸುವಂತಾಗಿದೆ ಎಂಬ ಮಾತುಗಳು ಕೇಳಿಬರುತ್ತಿದೆ.

ಪ್ರಜ್ವಲ್ ರೇವಣ್ಣ ಸ್ಪರ್ಧೆ

ಅವರೇ ಸ್ಪರ್ಧಿಸಲಿದ್ದಾರೆ ಎಂದರು. ಲೋಕಸಭೆ ಚುನಾವಣೆಯಲ್ಲಿ ತಮ್ಮ ಸ್ಪರ್ಧೆಯ ಕುರಿತು ಪ್ರತಿಕ್ರಿಯಿಸಿದ ಅವರು, ಸದ್ಯಕ್ಕೆ ರಾಜ್ಯಸಭಾ ಸದಸ್ಯನಾಗಿದ್ದು, ಇನ್ನೂ ಎರಡು ವರ್ಷ ಅವಧಿ ಇದೆ ಎಂದಷ್ಟೇ ಹೇಳಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷದ ನಾಯಕ ಆರ್.ಅಶೋಕ್ ನನ್ನನ್ನು ಭೇಟಿ ಮಾಡಿ ಚರ್ಚಿಸಿದ್ದು, ಒಟ್ಟಾಗಿ ಕೆಲಸ ಮಾಡೋಣ ಎಂದು ತಿಳಿಸಿದ್ದೇನೆ ಎಂದು ಹೇಳಿದರು.ಪಂಚ ರಾಜ್ಯಗಳ ಚುನಾವಣೆಯ ಫಲಿತಾಂಶ, ಲೋಕಸಭೆ ಚುನಾವಣೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ನನ್ನ ರಾಜಕೀಯ ಅನುಭವದ ಮೇಲೆ ಇದನ್ನು ಹೇಳುತ್ತಿದ್ದೇನೆ ಎಂದರು.

ಮೈಸೂರು ಮಿತ್ರ

ಪ್ರಭಾವಶಾಲಿ ಅಭಿವ್ಯಕ್ತಿಸಲು ಮಾತೃಭಾಷೆ ಕನ್ನಡದಿಂದ ಸಾಧ್ಯ



ಮೈಸೂರು, ಡಿ.1– ನಮ್ಮ ಭಾವನೆ, ಆಲೋಚನೆ, ವಿಚಾರ, ಕನಸುಗಳನ್ನು ಪ್ರಭಾವಶಾಲಿಯಾಗಿ ಅಭಿ ವ್ಯಕ್ತಿಸಲು ನಮ್ಮ ಮಾತೃಭಾಷೆಯಾದ ಕನ್ನಡದಿಂದ ಮಾತ್ರ ಸಾಧ್ಯವೇ ಹೊರತು, ಪರಭಾಷೆಗಳಿಂದ ಅಲ್ಲ ಎಂದು ಲಯನ್ಸ್ ಕ್ಲಬ್‌ನ ಮೊದಲನೇ ಉಪರಾಜ್ಯಪಾಲ ಎನ್. ಸುಬ್ರಹ್ಮಣ್ಯ ಅಭಿಪ್ರಾಯಪಟ್ಟರು.

ಲಯನ್ಸ್ ಕ್ಲಬ್ ಆಫ್ ಮೈಸೂರ್ ಪ್ಯಾಲೆಸ್ ಸಿಟಿ ವತಿಯಿಂದ ನಗರದ ಹೆಬ್ಬಾಳ ಹೊರವರ್ತುಲ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ 68 ನೇ ಕನ್ನಡ ರಾಜ್ಯೋತ್ಸವ, ಸನ್ಮಾನ ಹಾಗೂ ನೂತನ ಸದಸ್ಯರ ಪ್ರತಿಜ್ಞಾ ವಿಧಿ ಬೋಧನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡಿಗರಲ್ಲಿ ಭಾಷಾಭಿಮಾನ ಕಡಿಮೆ. ಪರಭಾಷೆಗಳ ಬಗ್ಗೆ ವ್ಯಾಮೋಹ ಹೆಚ್ಚು. ಸಾಮಾನ್ಯವಾಗಿ ಆಭಾಷೆಗಳಲ್ಲೇ ವ್ಯವಹಾರ ಮಾಡುತ್ತಾರೆ. ಆದರೆ, ಪರಭಾಷಿಕರು ಕರ್ನಾಟಕದಲ್ಲಿ ಇದ್ದರೂ ನಮ್ಮ ಕನ್ನಡ ಭಾಷೆ ಕಲಿಯುವುದಿಲ್ಲ, ತಮ್ಮ ಭಾಷೆಯ ಬಗ್ಗೆ ಅಭಿಮಾನ ಹೆಚ್ಚು ತೋರುತ್ತಾರೆ. ಇದು ಕನ್ನಡಿಗರಿಗೆ ಮಾದರಿ ಆಗಬೇಕು ಎಂದರು.

ಸನ್ಮಾನ ಸ್ವೀಕರಿಸಿದ ಸಾಹಿತಿ ಟಿ. ಸತೀಶ್ ಜವರೇಗೌಡ ಮಾತನಾಡಿ, ಒಂದು ಭಾಷೆ ಜೀವಂತವಾಗಿರಬೇಕಾದರೆ ಅದನ್ನು ನಿರಂತರವಾಗಿ ಬಳಸಬೇಕು. ಕವಿಗಳು, ಪತ್ರಕರ್ತರು ತಮ್ಮ ಬರಹದ ಮೂಲಕ ಕನ್ನಡ ಭಾಷೆಯ ಜೊತೆಗೆ ಸಾಹಿತ್ಯವನ್ನು ಉಳಿಸಿ ಬಳಸುತ್ತಿದ್ದಾರೆ. ಇದೇ ರೀತಿ ಪ್ರತಿಯೊಬ್ಬ ಕನ್ನಡಿಗ ಭಾಷಾಭಿಮಾನ ತೋರಬೇಕು ಎಂದರು.

ಲಯನ್ಸ್‌ಕ್ಲಬ್ ಆಫ್ ಮೈಸೂರ್ ಪ್ಯಾಲೇಸ್ ಸಿಟಿಯ ಅಧ್ಯಕ್ಷ ಎಂ.ಆರ್.ವಾಸು ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ವೇದಿಕೆಯಲ್ಲಿ ಕನ್ನಡ ರಾಜ್ಯೋತ್ಸವ ಸಮಿತಿಯ ಜಿಲ್ಲಾ ಕಾರ್ಯದರ್ಶಿ ರಾಮಕೃಷ್ಣ, ಲಯನ್ಸ್ ಕ್ಲಬ್ ನ ಪ್ರಾಂತೀಯ ಅಧ್ಯಕ್ಷ ಜಿ. ಪುಟ್ಟಸ್ವಾಮಿ ಉಪಸ್ಥಿತರಿದ್ದರು. ಖ್ಯಾತ ಜಾನಪದ ಗಾಯಕ ಅಮ್ಮ ರಾಮಚಂದ್ರ ಅವರ ಗಾಯನ ಮನಸೂರೆಗೊಂಡಿತು.



ಮೈಸೂರಿನ ಹರಿ ವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವ, ಕನಕದಾಸ ಜಯಂತಿ, ಮಕ್ಕಳ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಪ್ರಾಂಶುಪಾಲ ಡಾ.ಎನ್.ಭಾರತಿ ಶಂಕರ್, ಕಾರ್ಯದರ್ಶಿ ಎಚ್.ಆರ್.ಭಗವಾನ್, ಬೋಧಕ ಮತ್ತು ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಹಾಜರಿದ್ದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು, ಡಿ.1– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 2022–23ನೇ ಸಾಲಿನಲ್ಲಿ ಪೂರ್ಣಾಂಕ ಪಡೆದ ರಾಜ್ಯದ ನಾಲ್ವರು ವಿದ್ಯಾರ್ಥಿಗಳಿಗೆ ಇಲ್ಲಿನ ಆಲನಹಳ್ಳಿ ಬಡಾವಣೆಯ ಶಾಶ್ವತ ಸೇವಾ ಶಾಲೆಯು ಪೂಜ್ಯ ಆಯಿಮಾತಾಜೀ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿತು.

ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ಸಂಭ್ರಮ–50 ಅಂಗವಾಗಿ ಬುಧವಾರ ಸಂಜೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬೆಂಗಳೂರಿನ ಭೂಮಿಕಾ ಪೈ, ಮುದ್ದೇಬಿಹಾಳದ ಭೀಮನಗೌಡ ಪಾಟೀಲ್, ಸವದತ್ತಿಯ ಅನುಪಮಾ ಹೀರೆಹೋಳ ಹಾಗೂ ಚಿಕ್ಕಬಳ್ಳಾಪುರದ ಯಶಸ್ ಅವರಿಗೆ ಪುರಸ್ಕಾರದ ಜೊತೆಗೆ ತಲಾ 15 ಸಾವಿರ ರೂ. ನಗದು ನೀಡಲಾಯಿತು.

ಇದೇ ಸಂದರ್ಭದಲ್ಲಿ 2021–22, 2022–23ನೇ ಸಾಲಿನಲ್ಲಿ ಶಾಶ್ವತ ಸೇವಾ ಶಾಲೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಎನ್. ಸಂಜನಾ, ಎಂ. ಕೃತಿಕಾ, ಎಂ. ಐಶ್ವರ್ಯ, ಎಸ್. ರಿತುಪರ್ಣ ಅವರನ್ನು ಗೌರವಿಸಲಾಯಿತು. ಚಿಕ್ಕಮಗಳೂರಿನ ಶ್ರೀ ಬಸವಾನಂದಮೂರ್ತಿ ಶರಣರು ಸಾನ್ನಿಧ್ಯ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹಾಗೂ ದಿ ಮೈಸೂರು ಶಾಶ್ವತ ಸೇವಾ ಟ್ರಸ್ಟ್ ಕಾರ್ಯದರ್ಶಿ ಎಂ.ಆರ್. ಚೌಧರಿ ಕಾರ್ಯಕ್ರಮ ಉದ್ಘಾಟಿಸಿದರು. ನಿವೃತ್ತ ಪ್ರಾಂಶುಪಾಲ ಸಾಹಿತಿ ಶಿ. ಕುಮಾರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಸೋಸಲೆ ಗಂಗಾಧರ್ ಜ್ಞಾನಲೋಕ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಇಎನ್ ಟಿ ಪ್ರಾಧ್ಯಾಪಕ ಡಾ.ಎಚ್. ಸುಂದರರಾಜು ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು ತಾಲೂಕು ವಲಯ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಮಹದೇವ, ಬಿಇಓ ಕಚೇರಿಯ ಶಿಕ್ಷಣ ಸಂಯೋಜಕ ಯು.ಜಿ. ಮೋಹನಕುಮಾರ್ ಆರಾಧ್ಯ, ಆಲನಹಳ್ಳಿ ಕ್ಲಸ್ಟರ್ ಕ್ಷೇತ್ರ ಸಂಪನ್ಮೂಲಾಧಿಕಾರಿ ಮಹದೇವಸ್ವಾಮಿ, ತಾ. ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ದೇವರಾಜ್ ಪಿ.ಚಿಕ್ಕಹಳ್ಳಿ, ಎನ್‌ಐಇ ಸಹಾಯಕ ಪ್ರಾಧ್ಯಾಪಕ ಡಾ.ಸಿ.ವಿ.ಆನಂದ್ ಹುಲಗಬಾಳಿ, ವೀರಗಾಸೆ ಕಲಾವಿದ ಕಿರಾಳು ಮಹೇಶ್. ಜೂ.ರಾಜ್‌ಕುಮಾರ್ ರಮೇಶ್ ಕುಮಾರ್, ಅಧ್ಯಾಪಕ ಎಡೆಯೂರು ಸಮೀವುಲ್ಲಾ, ಎಂ. ನರೇಂದ್ರ ಮುಖ್ಯ ಅತಿಥಿಗಳಾಗಿದ್ದರು. ಮುಖ್ಯ ಶಿಕ್ಷಕಿ ಎಚ್.ಪಿ. ಪವಿತ್ರಾ ಸ್ವಾಗತಿಸಿದರು. ಕನ್ನಡ ಶಿಕ್ಷಕ ರಮೇಶ್ ನಿರೂಪಿಸಿದರು. ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಪೋಷಕರು ಮಕ್ಕಳ ಮೂಲಕ ಕೊಡುಗೆಯಾಗಿ ನೀಡಿರುವ ನೂರಾರು ಕನ್ನಡ ಪುಸ್ತಕಗಳ ಪ್ರದರ್ಶನ, ಸಾಹಿತಿಗಳ ಚುಕ್ಕಿ ಚಿತ್ರಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ವಿದ್ಯಾವರ್ಧಕ ಪದವಿ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ



ಮೈಸೂರು, ಡಿ.1–ಮೈಸೂರಿನ ವಿದ್ಯಾವರ್ಧಕ ಪದವಿ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಯಾಗಿ ಕಾಲೇಜಿನ ಕನ್ನಡ ವಿಭಾಗ ಮುಖ್ಯಸ್ಥ ಡಾ. ಧನಂಜಯ ಪಾಲಹಳ್ಳಿ ಪಾಲ್ಗೊಂಡು, ಕನ್ನಡ ನಾಡು, ನುಡಿ, ನೆಲ–ಜಲ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಾ ಕನ್ನಡ ಭಾಷೆ 3000 ವರ್ಷಗಳ ಪರಂಪರೆಯ ಜೊತೆಗೆ 2000 ವರ್ಷಗಳ ಸಾಹಿತ್ಯಿಕ ಇತಿಹಾಸ ಒಳಗೊಂಡಿದ್ದು, ಹೃದಯ ಶ್ರೀಮಂತಿಕೆಯ ಭಾಷೆಯಾಗಿದೆ. ಸತ್ವವುಳ್ಳ ಕನ್ನಡಿಗರ ಜೀವನಶೈಲಿ ಇತರರಿಗೆ ಅನುಕರಣೀಯ ಎಂದು ಅಭಿಪ್ರಾಯಪಟ್ಟರು.

ಸಮೃದ್ಧ ಸ್ವಾಭಿಮಾನದ ಸಂಕೇತವಾದ ಭವ್ಯ ಕರ್ನಾಟಕಕ್ಕೆ ಕಾರಣಕರ್ತರಾದ ನೆಲದ ಜನಪದರವನ್ನು ಮೊದಲ್ಗೊಂಡು ಆಳಿದ ಅರಸರು ಹಾಗೂ ಕವಿಪುಂಗವರ ಕೊಡುಗೆ ಅನನ್ಯವಾಗಿದೆ. ಕನ್ನಡ ನಾಡು, ಸಾಹಿತ್ಯ, ಶಿಕ್ಷಣ, ಸಂಗೀತ, ಶಿಲ್ಪಕಲೆ, ವಾಸ್ತುಶಿಲ್ಪ ಮತ್ತು ಆಡಳಿತ ಮೊದಲಾದ ಕ್ಷೇತ್ರಗಳಲ್ಲಿ ಅವಿಸ್ಮರಣೀಯ ಸಾಧನೆಗೈದ ಬಗ್ಗೆ ಹಾಗೂ ಕನ್ನಡಿಗರ ಶೌರ್ಯ, ಪರಾಕ್ರಮ, ದೇಶಪ್ರೇಮ, ಔದಾರ್ಯ ಮತ್ತು ಕರುಣೆ, ಮಾನವೀಯ ಮೌಲ್ಯ, ಧರ್ಮ ಸಹಿಷ್ಣುತೆ, ಸ್ನೇಹಪರ ಚಿಂತನೆಗೆ ಹೇಗೆ ಹೆಸರಾಗಿದೆ ಎಂಬುದನ್ನು ಕುವೆಂಪು, ಬೇಂದ್ರೆ, ಪುತಿನ, ಜಿ.ಎಸ್.ಶಿವರುದ್ರಪ್ಪ, ತೀನಂಶ್ರೀ, ಡಿ.ಎಸ್.ಕರ್ಕಿ, ಹುಯಿಲುಗೋಳ ನಾರಾಯಣರಾಯರು, ಜಿ.ಪಿ.ರಾಜರತ್ನಂ ಕವಿಗಳ ಕವಿತೆಗಳ ಸಾಲುಗಳನ್ನು ಉಲ್ಲೇಖಿಸಿದರು.

ಪ್ರಾಂಶುಪಾಲ ಡಾ.ಎಸ್.ಮರೀಗೌಡ ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡಿಗರು ನಾಡು ನುಡಿಯ ಬಗ್ಗೆ ಜಾಗೃತಿ ವಹಿಸುವುದರ ಮೂಲಕ ಪರಭಾಷಿಕರ ಹಾವಳಿಯಿಂದ ಕನ್ನಡವನ್ನು ಮುಕ್ತಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ಕಿವಿಮಾತು ಹೇಳಿದರು. ಸಂಚಾಲಕ ಪ್ರೊ. ಮೋಹನ್‌ಕುಮಾರ್ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಧ್ಯಾಪಕ ಸಲಹೆಗಾರರಾದ ಪ್ರೊ.ಪಲ್ಲವಿ, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ 300ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೂಚ್ ಬಿಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿ

ಮೈಸೂರಲ್ಲಿ ಕರ್ನಾಟಕ–ಉತ್ತರಾಖಂಡ್ ನಡುವೆ ಪಂದ್ಯ

- ಟಾಸ್ ಗೆದ್ದು ಬ್ಯಾಟ್ ಮಾಡಿದ ಉತ್ತರಾಖಂಡ್ ದಿನದ ಅಂತ್ಯಕ್ಕೆ 9 ವಿಕೆಟ್ ನಷ್ಟಕ್ಕೆ 232 ರನ್
- ನಾಯಕ ಆರವ್ ಮಹಾಜನ್ ಶತಕ, ಇಶಾನ್ ಎಸ್, ಧೀರಜ್‌ಗೌಡಗೆ ತಲಾ 3 ವಿಕೆಟ್





3 ವಿಕೆಟ್ ಪಡೆದ ಇಶಾನ್

ಮೈಸೂರು,ಡಿ.1(ಎಂಟಿವೈ)– ಮೈಸೂರಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಮೈದಾನದಲ್ಲಿ ಬಿಸಿಸಿಐ ಆಯೋಜಿಸಿರುವ ಕೂಚ್ ಬಿಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯ ಕರ್ನಾಟಕ ಹಾಗೂ ಉತ್ತರಾಖಂಡ್ ನಡುವಿನ ಪಂದ್ಯ ಶುಕ್ರವಾರ ಆರಂಭವಾಗಿದ್ದು, ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಉತ್ತರಾಖಂಡ್ ನಾಯಕ ಆರವ್ ಮಹಾಜನ್(127) ಶತಕದ ನೆರವಿನಿಂದ ದಿನದ ಅಂತ್ಯಕ್ಕೆ 9 ವಿಕೆಟ್ ಕಳೆದುಕೊಂಡು 232 ರನ್ ದಾಖಲಿಸಿದೆ.

ಬಿಸಿಸಿಐ 19 ವರ್ಷದೊಳಗಿನ ಆಟಗಾರರಿಗಾಗಿ ಆಯೋಜಿಸಿರುವ ನಾಲ್ಕು ದಿನಗಳ ಕೂಚ್ ಬಿಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿವಿಧ ರಾಜ್ಯಗಳ ನಡುವಿನ ಪಂದ್ಯಗಳು ದೇಶದ ವಿವಿಧೆಡೆ ನಡೆಯುತ್ತಿದ್ದು, ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್‌ನ ಮೈಸೂರು ವಲಯದ ಸಹಕಾರದಿಂದ ಅತಿಥೇಯ ಕರ್ನಾಟಕ ಹಾಗೂ ಉತ್ತರಾಖಂಡ್ ನಡುವಿನ ನಾಲ್ಕು ದಿನಗಳ ಪಂದ್ಯ ಆರಂಭವಾಗಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಉತ್ತರಾಖಂಡ್ ತಂಡಕ್ಕೆ ಕರ್ನಾಟಕ ಬೌಲರ್‌ಗಳು ಆರಂಭಿಕ ಆಘಾತ ನೀಡಿದರು. ಆತ್ಮವಿಶ್ವಾಸದಿಂದ ಬ್ಯಾಟಿಂಗ್ ಆರಂಭಿಸಲು ಬಂದ ಉತ್ತರಾಖಂಡ್ ತಂಡದ ಆರಂಭಿಕ ಆಟಗಾರ ಅಭ್ಯುದಯ್(9) ತಂಡದ ಮೊತ್ತ 9 ರನ್ ಆಗಿದ್ದಾಗ ಮೈಸೂರಿನ ವೇಗಿ ಇಶಾನ್ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆಗಿ ಪೆವಿಲಿಯನ್ನತ್ತ ಸಾಗಿದರು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಅಭಿನವ್ ಯಾವುದೇ ರನ್ ಗಳಿಸದೆ ಇಶಾನ್‌ಗೆ ವಿಕೆಟ್ ಒಪ್ಪಿಸಿ ಹೊರ ನಡೆದರು. ತಂಡದ ಮೊತ್ತ 13 ರನ್ ಆಗಿದ್ದಾಗ 5ನೇ ಓವರ್ ಬೌಲಿಂಗ್ ಮಾಡಲು ಬಂದಿದ್ದ ಸಮರ್ಥಗೆ 2 ರನ್ ಗಳಿಸಿದ್ದ ಆರಂಭಿಕ ಆಟಗಾರ ಪೂರ್ವಂಶ್ ಧ್ರುವ್ ಕ್ಯಾಚ್ ನೀಡಿ ನಿರ್ಗಮಿಸಿದರು.


4.1 ಓವರ್‌ನಲ್ಲಿ 13 ರನ್‌ಗೆ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಗಿದ್ದ ಉತ್ತರಾಖಂಡ್ ತಂಡಕ್ಕೆ ನಾಯಕ ಆರವ್ ಮಹಾಜನ್(127), ವಿಕೆಟ್ ಕೀಪರ್ ಸಂಸ್ಕಾರ್ ರಾವತ್(43) ಆಸರೆಯಾದರು. 5 ಬೌಂಡರಿ ಬಾರಿಸಿ ಉತ್ತಮ ಆಟ ಪ್ರದರ್ಶಿಸುತ್ತಿದ್ದ ಸಂಸ್ಕಾರ್ ರಾವತ್ ತಂಡದ ಮೊತ್ತ 107ರನ್ ಆಗಿದ್ದಾಗ ಇಶಾನ್‌ಗೆ ಮೂರನೇ ವಿಕೆಟ್ ಒಪ್ಪಿಸಿದರು. ಆ ನಂತರ ಬಂದ ರಾಜ್ಯವರ್ಧನ್ 7 ರನ್ ಗಳಿಸಿ ಔಟಾದರೆ, ಯೋಗೇಶ್ 29, ಎಸ್.ಗುಪ್ತ(0), ಡಿ.ಪಿ. ಸಿಂಗ್ 7 ರನ್‌ಗಳಿಸಿ ಪೆವಿಲಿಯನ್ ಸೇರಿದರು. ಶತಕ ದಾಖಲಿಸಿ ಕ್ರೀಸ್ ಕಾಯ್ದುಕೊಂಡಿದ್ದ ನಾಯಕ ಆರವ್ ಮಹಾಜನ್ 236 ಎಸೆತ ಎದುರಿಸಿ 18 ಬೌಂಡರಿಯೊಂದಿಗೆ 127 ರನ್‌ಗಳಿಸಿ ಸಮರ್ಥ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. 9ನೇ ವಿಕೆಟ್ ಪತನದ ನಂತರ 10ನೇ ಕ್ರಮಾಂಕದಲ್ಲಿ ಕ್ರೀಸ್‌ನಲ್ಲಿರುವ ಕೃಷ್ಣಗರ್ಗ್(0) ಅವ ರೊಂದಿಗೆ ಬ್ಯಾಟ್ ಮಾಡಲು ಬಂದಿರುವ ಬೌಲರ್ 11ನೇ ಆಟಗಾರ ಆದಿತ್ಯ ರಾವತ್(0) 8 ಎಸೆತವನ್ನು ಸುರಕ್ಷಿತ ವಾಗಿ ಎದುರಿಸಿ ದಿನದ ಆಟ ಅಂತ್ಯಗೊಳ್ಳುವವರೆಗೂ ಅಜೇಯರಾಗಿ ಉಳಿದಿದ್ದು, ಪಂದ್ಯದ ಎರಡನೇ ದಿನವಾದ ಶನಿವಾರ ಆಟ ಮುಂದುವರೆಸಲಿದ್ದಾರೆ.

ಕರ್ನಾಟಕ ತಂಡದ ಪರವಾಗಿ ಎನ್.ಸಮರ್ಥ 7 ಓವರ್‌ನಲ್ಲಿ 17 ರನ್ ನೀಡಿ 2 ವಿಕೆಟ್ ಪಡೆದರೆ, ಮೈಸೂರಿನ ವೇಗಿ ಇಶಾನ್.ಎಸ್, 13 ಓವರ್‌ನಲ್ಲಿ 49 ರನ್ ನೀಡಿ 3 ವಿಕೆಟ್ ಕಬಳಿಸಿದರು. ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಪುತ್ರ ಸಮಿತ್ ದ್ರಾವಿಡ್ 5 ಓವರ್‌ನಲ್ಲಿ 11 ರನ್ ನೀಡಿದರೆ, ಧೀರಜ್‌ಗೌಡ 30 ಓವರ್‌ನಲ್ಲಿ 62 ರನ್ ನೀಡಿ 3 ವಿಕೆಟ್ ಗಳಿಸಿದರು. ಹಾರ್ದಿಕ್ ರಾಜ್ 26 ಓವರ್‌ನಲ್ಲಿ 57 ರನ್ ನೀಡಿ 1 ವಿಕೆಟ್, ಸಿದ್ಧಾರ್ಥ ಅಖಿಲ್ 3 ಓವರ್‌ನಲ್ಲಿ7 ರನ್ ಹಾಗೂ ಶಿಖರ್ ಶೆಟ್ಟಿ 6 ಓವರ್‌ನಲ್ಲಿ 23 ರನ್ ನೀಡಿ ಉತ್ತರಾಖಂಡ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ಯಶಸ್ವಿಯಾದರು.

ಇಂಡಿಯಾ ಮುಖ್ಯ ಕೋಚ್ ರಾಹುಲ್ ದ್ರಾವಿಡ್‌ರ ಸರಳತೆ!

- ಪುತ್ರನ ಆಟ ನೋಡಲು ಸಾಮಾನ್ಯ ಪೋಷಕರಂತೆ ಪತ್ನಿ ಡಾ.ವಿಜೇತರೊಂದಿಗೆ ಆಗಮಿಸಿದ್ದ ದ್ರಾವಿಡ್
- ಆಡಂಬರದ ಆತಿಥ್ಯ ಬಯಸದೆ ಸಾಮಾನ್ಯರಂತೆ ಮೈದಾನದ ಕಲ್ಲಿನ ಮೆಟ್ಟಿಲ ಮೇಲೆ ಕುಳಿತು ಆಟ ವೀಕ್ಷಣೆ





ಮೈಸೂರು,ಡಿ.1(ಎಂಟಿವೈ)– ಭಾರತ ಕ್ರಿಕೆಟ್ ತಂಡ ಮುಖ್ಯ ತರಬೇತುದಾರ, ಟೀಮ್ ಇಂಡಿಯಾ ಮಾಜಿ ಆಟಗಾರ ರಾಹುಲ್ ದ್ರಾವಿಡ್ ಆಡಂಬರದ ಆತಿಥ್ಯ ಬಯಸದೆ ಪುತ್ರನ ಆಟ ಕಣ್ತುಂಬಿಕೊಳ್ಳಲು ಸಾಮಾನ್ಯ ಪೋಷಕರಂತೆ ವರ್ತಿಸಿ ಗಮನ ಸೆಳೆದರು.

ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಇಂದಿನಿಂದ ಆರಂಭವಾದ ಕೂಚ್ ಬಿಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯ ಕರ್ನಾಟಕ ಹಾಗೂ ಉತ್ತರಾಖಂಡ್ ನಡುವಿನ ಪಂದ್ಯದಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸುತ್ತಿರುವ ಪುತ್ರ ಸಮಿತ್ ದ್ರಾವಿಡ್ ಆಟ ನೋಡಲು ರಾಹುಲ್ ದ್ರಾವಿಡ್ ಪತ್ನಿ ಡಾ.ವಿಜೇತ ಅವರೊಂದಿಗೆ ಮೈದಾನಕ್ಕೆ ಆಗಮಿಸಿದ್ದರು. ಯಾರಿಗೂ ಮಾಹಿತಿ ನೀಡದೆ ಮೈದಾನಕ್ಕೆ ಆಗಮಿಸಿದ ರಾಹುಲ್ ದ್ರಾವಿಡ್, ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಕಚೇರಿ ಹಾಗೂ ಗಣ್ಯರು ಕುಳಿತುಕೊಳ್ಳುವ ಗ್ಯಾಲರಿಗೆ ಬರದೆ ಮೈದಾನದ ಮೆಟ್ಟಿಲು ಮೇಲೆ ಪಂದ್ಯ ವೀಕ್ಷಿಸಿದರು.

ಊಟದ ಸಮಯದಲ್ಲಿ ತಂಡದ ಸಹ ಆಟಗಾರರೊಂದಿಗೆ ಸಮಿತ್ ದ್ರಾವಿಡ್ ಭೋಜನ ಸವಿದರೆ, ರಾಹುಲ್ ದ್ರಾವಿಡ್ ದಂಪತಿ ಮಗನಿಂದ ಅಂತರ ಕಾಯ್ದುಕೊಂಡರು. ಬಳಿಕ ಊಟಕ್ಕಾಗಿ ಹೋಟೆಲ್‌ಗೆ ತೆರಳಿದರು. ಈ ವೇಳೆ ಮೈಸೂರು ವಿವಿಯ ಕೆಲ ವಿದ್ಯಾರ್ಥಿಗಳು ರಾಹುಲ್ ದ್ರಾವಿಡ್ ಅವರೊಂದಿಗೆ ಫೋಟೊ ತೆಗೆಸಿಕೊಂಡು ಸಂಭ್ರಮಿಸಿದರು.

ಕನ್ನಡ ಪ್ರೀತಿಸಿ, ಕನಕದಾಸರ ಆದರ್ಶ ಪಾಲಿಸಿ

ಮೈಸೂರು, ಡಿ. 1– ತಾಯಿ ಭಾಷೆಯಾದ ಕನ್ನಡವನ್ನು ಪ್ರೀತಿಸಿ, ಸಂತ ಶ್ರೇಷ್ಠರಾದ ಕನಕದಾಸರ ಆದರ್ಶವನ್ನು ಪಾಲಿಸಿ ಎಂದು ಜಿಲ್ಲಾ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಎಚ್. ಪ್ರಕಾಶ್ ಕರೆ ನೀಡಿದರು.

ಕನ್ನಡ ಜಾನಪದ ಪರಿಷತ್ ವತಿಯಿಂದ ಕುವೆಂಪುನಗರದ ಎಂಎಎಸ್‌ವಿಎಸ್ ಗುರುಕುಲ ಪದವಿಪೂರ್ವ ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ಕರ್ನಾಟಕ ಸುವರ್ಣ ಜಾನಪದ ರಾಜ್ಯೋತ್ಸವ ಹಾಗೂ ಭಕ್ತ ಕಸಕದಾಸರ 536ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ಯುವ ಜನಾಂಗ ಆಂಗ್ಲ ಭಾಷೆಯ ವ್ಯಾಮೋಹಕ್ಕೆ ಒಳಗಾಗಿ ಕನ್ನಡದ ಬಗ್ಗೆ ಆಸಕ್ತಿ ತೋರಿಸುತ್ತಿಲ್ಲ. ಈ ನಾಡಿನ ಎಲ್ಲರೂ ಕನ್ನಡವನ್ನು ಪ್ರೀತಿಸಬೇಕು. ಮನೆಯಲ್ಲಿ ಮಮ್ಮಿ, ಡ್ಯಾಡಿ ಬದಲು ಅಪ್ಪ, ಅಮ್ಮ ಎಂಬ ಪ್ರಿಯ ಪದಗಳ ಬಳಸಬೇಕು ಎಂದರು.



ರಾಜ್ಯದ ಗಡಿ ಭಾಗ ಹಾಗೂ ಬೆಂಗಳೂರಿನಲ್ಲಿ ಪರಿಭಾಷಿಕರ ಹಾವಳಿ ಅತಿಯಾಗಿದೆ. ಹೀಗಿರುವಾಗ ಕನ್ನಡಿಗರಾದ ನಾವು ಕನ್ನಡವನ್ನು ಉಳಿಸಿ, ಬೆಳೆಸುವ ಕಡೆ ಗಮನಹರಿಸಬೇಕು ಎಂದು ಹೇಳಿದರು.

ಕನಕದಾಸರು ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆ ಏನಾದರೂ ಬಲ್ಲಿರಾ ಎಂದು ಆ ಕಾಲಕ್ಕೆ ಹಾಡುವ ಮೂಲಕ ಜಾತ್ಯಾತೀತ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ. ಅವರ ತತ್ವಾದರ್ಶವನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ತಿಳಿಸಿದರು.

ಜಾನಪದ ಕಲಾವಿದೆ ಸುಮಾ ಪ್ರಶಾಂತ್, ಜಾನಪದ ಗಾಯಕರಾದ ಡಿ. ಶಂಕರ್, ಪುಷ್ಪಲತಾ ನಾರಾಯಣ, ಮಲಾರ ಗಣೇಶ್, ಜಾನಪದ ಸಂಘಟಕ ಜಿ. ಶ್ರೀಧರ್, ರಾಜ್ಯ ಮಟ್ಟದ ಅತ್ಯುತ್ತಮ ಎನ್‌ಎಸ್‌ಎಸ್ ಅಧಿಕಾರಿ ಪ್ರಶಸ್ತಿ ಪಡೆದಿರುವ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್‌ನ ಎಸ್.ಎಂ. ಮಧುಸೂದನ್ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಪಿ.ಡಿ. ಕನ್ನಿಕರ್ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲೆ ಬಿ.ಜಿ. ತನುಜಾ, ಕಜಪ ವಿಭಾಗೀಯ ಸಂಚಾಲಕಿ ಕಾವೇರಿ ಪ್ರಕಾಶ್, ಜಿಲ್ಲಾ ಜಂಟಿ ಕಾರ್ಯದರ್ಶಿ ಜಿ. ರವಿಶಂಕರ್, ಚಾಮರಾಜ ಕ್ಷೇತ್ರದ ಅಧ್ಯಕ್ಷೆ ರಾಣಿಪ್ರಭಾ, ಜಗದೀಶ್, ರೇವಣ್ಣ ಭಾಗವಹಿಸಿದ್ದರು. ಕನ್ನಡ ವಿಭಾಗದ ಮುಖ್ಯಸ್ಥ ಎಸ್.ಎಸ್.ಬಸವರಾಜು ಪ್ರಾಸ್ತಾವಿಕ ಭಾಷಣ ಮಾಡಿದರು. ಅಮ್ಮ ರಾಮಚಂದ್ರ, ಪನ್ನಗ ವಿಜಯಕುಮಾರ್ ಮತ್ತು ತಂಡದವರು ಗೀತಗಾಯನ ನಡೆಸಿಕೊಟ್ಟರು.

'ಗೀತ್ ಸಂಗಮ್' ಸಂಗೀತ ಸಂಜೆ ಕಾರ್ಯಕ್ರಮ

ಮೈಸೂರು, ಡಿ.1–ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಡಿ. 3 ರಂದು ಸಂಜೆ 5.30ಕ್ಕೆ ಶ್ರೀಮತಿ ಕವಿತಾ ಕಾಮತ್ ನೇತೃತ್ವದಲ್ಲಿ ಮ್ಯೂಸಿಕ್ ಲವರ್ಸ್ ತಂಡದವರಿಂದ 'ಗೀತ್ ಸಂಗಮ್' ಸುಮಧುರ ಕನ್ನಡ ಹಾಗೂ ಹಿಂದಿ ಚಲನಚಿತ್ರಗೀತೆಗಳ ಸಂಗೀತ ರಸಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಸಂಗೀತ ಸಂಜೆಯಲ್ಲಿ ವೃತ್ತಿಪರ ಗಾಯಕರು ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಉದಯೋನ್ಮುಖ ಗಾಯಕರು ಹಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಕವಿತಾ ಕಾಮತ್, ನಿತ್ಯಾನಂದ ಕಾಮತ್, ಸದಾಶಿವ ಶೆಣೈ, ಹೆಡತಲೆ ನಾರಾಯಣ್, ಡಾ. ಸೋಮನಾಥ್ ವಾಸುದೇವ್, ಡಾ. ಸೀತಾಲಕ್ಷ್ಮಿ, ಡಾ. ಮಂಜುನಾಥ್ ಕೆ.ಆರ್. ಡಾ. ಭಾರತಿ, ನಿಖಿಲ್ ಪ್ರಭು, ಸುಮಾ ಪ್ರಕಾಶ್ ಹಾಗೂ ಜಯಲಕ್ಷ್ಮಿನಾಯ್ಡು ಹಾಡಲಿದ್ದಾರೆ. ನಿರೂಪಣೆಯನ್ನು ಡಾ. ಆರ್.ಎಲ್. ಜಗದೀಶ್ ಮತ್ತು ಅನಿತಾ ನಿರ್ವಹಿಸಲಿದ್ದಾರೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿರುತ್ತದೆ.

ಪುಟ್ಟಣ್ಣ ಕಣಗಾಲ್ ಜನ್ಮ ದಿನೋತ್ಸವ; ಚಿತ್ರಚೇತನ ನೆನಪಿನಂಗಳ ಕಾರ್ಯಕ್ರಮ

ಮೈಸೂರು, ಡಿ.1–ಕನ್ನಡ ಚಿತ್ರರಂಗದ ಚಿತ್ರಬ್ರಹ್ಮ ಎಸ್.ಆರ್.ಪುಟ್ಟಣ್ಣ ಕಣಗಾಲ್ ಅವರ 90ನೇ ಜನ್ಮದಿನೋತ್ಸವದ ಅಂಗವಾಗಿ ಅಪೂರ್ವ ಸ್ನೇಹ ಬಳಗದ ವತಿಯಿಂದ ಚಾಮುಂಡಿಪುರಂನಲ್ಲಿರುವ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಪುಟ್ಟಣ್ಣ ನೆನಪಿನಂಗಳ ಕಾರ್ಯಕ್ರಮ ಆಯೋಜಿಸಲಾಗಿತ್ತು.



ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ, ಪುಟ್ಟಣ್ಣ ಕಣಗಾಲ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಪೌರಾಣಿಕ ನಾಟಕಗಳು, ಸಂಗೀತ ಕಾರ್ಯಕ್ರಮಗಳಿಗೆ ಅತೀ ಹೆಚ್ಚು ಪ್ರೋತ್ಸಾಹ ಜನಮನ್ನಣೆ ಇದ್ದ ಕಾಲಘಟ್ಟದಲ್ಲಿ ಕೌಟುಂಬಿಕ ಚಿತ್ರಗಳು ಮತ್ತು ಸಮಾಜಕ್ಕೆ ಸಂದೇಶ ಸಾರುವ ಚಿತ್ರಗಳನ್ನು ನಿರ್ದೇಶಿಸಿ 3 ದಿನಗಳ ಮುಂಗಡವಾಗಿ ಸರತಿ ಸಾಲಿನಲ್ಲಿ ಟಿಕೆಟ್ ಪಡೆಯಲು ಚಿತ್ರಮಂದಿರಕ್ಕೆ ಕಲಾಪ್ರೇಕ್ಷಕರನ್ನು ಆಕರ್ಷಿಸಿದ್ದು ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳು ಎಂದರು. 'ನಾಗರ ಹಾವು' ಚಿತ್ರದಲ್ಲಿ ಬರುವ ಪಾತ್ರಗಳು, ಓನಕೆ ಒಬ್ಬವ್ವ ಇವತ್ತಿಗೂ ಯುವಪೀಳಿಗೆಯಲ್ಲಿ ದೇಶಪ್ರೇಮವನ್ನು ಹೆಚ್ಚಿಸುತ್ತದೆ. ಚಾಮಯ್ಯ ಮೇಷ್ಟ್ರು ರಾಮಾಚಾರಿ ಪಾತ್ರಗಳು ಗುರುಶಿಷ್ಯನ ಬಾಂಧವ್ಯ ಗೌರವವನ್ನು ಹೆಚ್ಚಿಸುತ್ತದೆ ಎಂದರು.

ಸಮಾಜದಲ್ಲಿ ವಸ್ತುಸ್ಥಿತಿಯನ್ನು ತೋರಿಸಿ ಜನರನ್ನು ಎಚ್ಚರಿಸುತ್ತಿದ್ದ ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳು ಪ್ರೇಕ್ಷಕರ ಮನಗೆದ್ದಿತು. ಚಿತ್ರದುರ್ಗದ ಕಲ್ಲಿನ ಕೋಟೆ, ಕನ್ಯಾಕುಮಾರಿ ವಿವೇಕ ಸ್ಮಾರಕ, ಕೊಡಗಿನ ಕಾವೇರಿ, ಶ್ರೀ ಚಾಮುಂಡೇಶ್ವರಿ, ಮೈಸೂರು ದಸರಾ ಸೇರಿದಂತೆ ಪ್ರತಿಯೊಂದು ಚಿತ್ರದ ಹಾಡುಗಳು ಸಹ ಪ್ರವಾಸಿ ತಾಣದ ಜನಪ್ರಿಯತೆ ತಂದುಕೊಟ್ಟಿತು. ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣವಾದರೆ ಅದಕ್ಕೆ ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಹೆಸರನ್ನು ನಾಮಕರಣ ಮಾಡಿ ಸ್ಮರಿಸಬೇಕು. ಪಿರಿಯಾಪಟ್ಟಣದ ಕಣಗಾಲ್‌ನಲ್ಲಿರುವ ಅವರ ಮನೆಯನ್ನು ಸ್ಮಾರಕವಾಗಿ ಉಳಿಸಿಕೊಳ್ಳಬೇಕಿದೆ ಎಂದರು.

ಹಿರಿಯ ಸಮಾಜ ಸೇವಕ ಡಾ.ಕೆ ರಘುರಾಂ ವಾಜಪೇಯಿ ಮಾತನಾಡಿ, ಕಲಾವಿದರ ತವರೂರು ಮೈಸೂರು ಚಿತ್ರರಂಗ ಕ್ಷೇತ್ರದಲ್ಲಿ ಉತ್ತುಂಗಕ್ಕೆ ಏರಲು ಪುಟ್ಟಣ್ಣ ಕಣಗಾಲ್ ಅವರ ಪಾತ್ರ ಪ್ರಮುಖವಾದದ್ದು. ಪುಟ್ಟಣ್ಣನವರ ಚಿತ್ರದಲ್ಲಿ ಪಾತ್ರಗಳ ನಟನೆಯಲ್ಲಿ ಪರಿಪೂರ್ಣತೆ ಸಿಗುವವರೆಗೂ ಕಲಾವಿದರು ಭಯದ ವಾತವರಣದಲ್ಲೇ ನಟಿಸುತ್ತಿದ್ದ ಕಾರಣ, ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್ ಸೇರಿದಂತೆ ಹಲವರು ಅತ್ಯುತ್ತಮ ನಟರಾಗಿ ಹೊಮ್ಮಿದರು. ಪುಟ್ಟಣ್ಣನವರ ಚಿತ್ರವು ಸಮಾಜಕ್ಕೆ ಸಂದೇಶ ಮತ್ತು ಕುಟುಂಬ ಪ್ರಧಾನವಾಗಿದ್ದವು. ಹಿಂದೂಸ್ಥಾನವೂ ಎಂದು ಮರೆಯದ ಭಾರತರತ್ನವೂ ನೀನಾಗು ಗೀತೆ ಸಹಸ್ರಾರು ಯುವಕರನ್ನು ವಿವಿಧ ಕ್ಷೇತ್ರದಲ್ಲಿ ಮುಖ್ಯವಾಹಿನಿಗೆ ಬಂದು ಸಾಧನೆ ಮಾಡುವಂತೆ ಪ್ರೇರೇಪಿಸಿತು ಎಂದರು. ಮಾಜಿ ನಗರ ಪಾಲಿಕೆ ಸದಸ್ಯರಾದ ಎಂ.ಡಿ.ಪಾರ್ಥಸಾರಥಿ, ಕೆ.ಜೆ.ರಮೇಶ್, ಅನಂತು, ಅಪೂರ್ವ ಸುರೇಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ನಜರ್‌ಬಾದ್ ನಟರಾಜ್, ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್, ಬ್ರಾಹ್ಮಣ ಧರ್ಮ ಸಹಾಯ ಸಭಾ ಅಧ್ಯಕ್ಷ ಅಶ್ವಥ್ ನಾರಾಯಣ್, ಸಂದೀಪ್, ಸುರೇಶ್, ಡಿಪ್ಪೋ ಆನಂದ್, ಮಹದೇವ್ ಪಾಂಡೆ, ಮುರಳಿ, ಶಿವರಾಜ್, ರವಿಶಂಕರ್, ಮುರಳಿ, ಚಕ್ರಪಾಣಿ ಇನ್ನಿತರರು ಉಪಸ್ಥಿತರಿದ್ದರು.

ಹೈಪ್ಲೈಯರ್ಸ್ ಕೊಡವ ಕೌಟುಂಬಿಕ ಹಾಕಿ ಕಪ್ ಪಂದ್ಯಾವಳಿ

ಫೈನಲ್ ಪ್ರವೇಶಿಸಿದ ಚೇಂದಿರ, ಕೊಂಗಂಡ ತಂಡ



ಪೊನ್ನಂಪೇಟೆ, ಡಿ.1–ಬಿಟ್ಟಂಗಾಲ ಸಮೀಪದ ವಿ.ಬಾಡಗದ ಹೈಪ್ಲೈಯರ್ಸ್ ಸಂಸ್ಥೆ ವತಿಯಿಂದ ಸ್ಥಳೀಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆಯುತ್ತಿರುವ ವಿರಾಜಪೇಟೆ ತಾಲೂಕಿನ ಬೇರಳಿನಾಡು, ಕುತ್ತುನಾಡು ಮತ್ತು ಬೊಟ್ಟಿಯತ್ ನಾಡು ವ್ಯಾಪ್ತಿಯ 2ನೇ ವರ್ಷದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯಲ್ಲಿ ಶುಕ್ರವಾರದ ಸೆಮಿ ಫೈನಲ್‌ನಲ್ಲಿ ಸೆಣೆಸಾಡಿದ ಬಲಿಷ್ಠ ಚೇಂದಿರ ಮತ್ತು ಕೊಂಗಂಡ ತಂಡಗಳು ಫೈನಲ್ ಪ್ರವೇಶಿಸಿವೆ.

ಕಳೆದ ಬಾರಿಯ ಚಾಂಪಿಯನ್ ಚೇಂದಿರ ಒಳಗೊಂಡ ಬಲಿಷ್ಠ ಈ ಎರಡು ತಂಡಗಳು ಶನಿವಾರ (ಇಂದು) ನಡೆಯಲಿರುವ ಫೈನಲ್‌ನಲ್ಲಿ ಚಾಂಪಿಯನ್ ಪಟ್ಟಕ್ಕಾಗಿ ಮತ್ತೆ ಹೋರಾಟ ನಡೆಸಲಿವೆ. ಪ್ರಥಮ ಸೆಮಿಫೈನಲ್‌ಲ್ಲಿ ಚೇಂದಿರ ತಂಡ ಚಂದೂರ ತಂಡವನ್ನು 3–0 ಗೋಲುಗಳಿಂದ ಸೋಲಿಸಿ ಫೈನಲ್ ಪ್ರವೇಶಿಸಿತು. ಆರಂಭದಲ್ಲೇ ಬಿರುಸಿನ ಆಟಕ್ಕೆ ಒತ್ತು ನೀಡಿದ ಚೇಂದಿರ ತಂಡದ ಆಟಗಾರರು ಎದುರಾಳಿಯ 'ಡಿ' ಆವರಣದೊಳಗೆ ನಿರಂತರವಾಗಿ ಲಗ್ಗೆ ಇಡುತ್ತಿತ್ತು. ಪ್ರಥಮಾರ್ಧ ಆರಂಭಗೊಂಡ 4ನೇ ನಿಮಿಷದಲ್ಲೇ ಚೇಂದಿರ ತಂಡದ ಆಟಗಾರ ಮಂಜುನಾಥ್ ಮಿಂಚಿನ ಗೋಲೊಂದನ್ನು ಬಾರಿಸಿ ತಂಡದ ಖಾತೆ ತೆರೆದರು. ಧನುಷ್, ಪುನೀತ್ ಗೋಲು ಬಾರಿಸಿದರು.

2ನೇ ಸೆಮಿ ಫೈನಲ್‌ನಲ್ಲಿ ಕಳೆದ ಬಾರಿಯ ರನ್ನರ್ಸ್ ಕೊಂಗಂಡ ತಂಡ ಕರ್ತಮಾಡ ತಂಡವನ್ನು 4–2 ಗೋಲುಗಳಿಂದ ಮಣಿಸಿ ಅಂತಿಮ ಹಣಾಹಣಿಗೆ ಹಾದಿ ಸುಗಮಗೊಳಿಸಿತು. ಕೊಂಗಂಡ ತಂಡದ ಆಟಗಾರ ನಾಚಪ್ಪ ಗೋಲು ಬಾರಿಸಿ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಹೈಪ್ಲೈಯರ್ಸ್ ಸಂಸ್ಥೆಯ ಅಧ್ಯಕ್ಷ ಅಮ್ಮಣಿಚಂಡ ರಂಜು ಪೂಣಚ್ಚ, ಸಲಹಾ ಸಮಿತಿ ಅಧ್ಯಕ್ಷ ಮಳವಂಡ ಗಿರೀಶ್ ಮುದ್ದಯ್ಯ, ಪದಾಧಿಕಾರಿಗಳಾದ ಕೊಂಗಂಡ ಕಾಶಿ ಕಾವೇರಪ್ಪ, ಚೇಮಿರ ಪ್ರಕಾಶ್, ಕೋಲತಂಡ ಸುಬ್ರಮಣಿ, ಕಂಜಿತಂಡ ಪೂವಣ್ಣ, ತೀತಿಮಾಡ ಬೋಪಣ್ಣ, ಕಂಜಿತಂಡ ವಿಕ್ರಾಂತ್ ಪಂದ್ಯಾವಳಿಯ ಉಸ್ತುವಾರಿ ವಹಿಸಿಕೊಂಡಿದ್ದರು. ಮಾಳೇಟಿರ ಶ್ರೀನಿವಾಸ್ ವೀಕ್ಷಕ ವಿವರಣೆ ನೀಡಿದರು.

ಪಂದ್ಯಾವಳಿಗೆ ಇಂದು ತೆರೆ: ಕಳೆದ ಮಂಗಳವಾರದಿಂದ ಆರಂಭಗೊಂಡ ವಿ.ಬಾಡಗ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಗೆ ಶನಿವಾರ (ಇಂದು) ತೆರೆ ಬೀಳಲಿದೆ. ಅಂದು ಮಧ್ಯಾಹ್ನ 2.30 ಗಂಟೆಗೆ ಫೈನಲ್ ನಡೆಯಲಿದ್ದು, ಇದಕ್ಕೂ ಮೊದಲು ತೃತೀಯ ಸ್ಥಾನಕ್ಕೆ ಚಂದೂರ ಮತ್ತು ಕರ್ತಮಾಡ ಕುಟುಂಬ ತಂಡಗಳ ನಡುವೆ ಪಂದ್ಯ ಜರುಗಲಿದೆ.

ಕರಾಟೆಯಲ್ಲಿ ಹರ್ಷಲ್‌ಗೆ ಬೆಳ್ಳಿ ಪದಕ



ಮಡಿಕೇರಿ, ಡಿ.1– ಮಂಗಳೂರಿನ ಕುದ್ರೋಳಿಯ ಕೊರಗಪ್ಪ ಕಲ್ಯಾಣ ಮಂಟಪದಲ್ಲಿ ನಡೆದ ರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಸೋಮವಾರಪೇಟೆಯ ಕ್ರಿಯೇಟಿವ್ ಅಕಾಡೆಮಿ ಸ್ಕೂಲ್‌ನ 3ನೇ ತರಗತಿ ವಿದ್ಯಾರ್ಥಿ ಬಿ.ಆರ್.ಹರ್ಷಲ್ ಬೆಳ್ಳಿ ಪದಕ ಗಳಿಸಿದ್ದಾನೆ. ಈತ ಸೋಮವಾರಪೇಟೆಯ ಬಿ.ಎಸ್.ರೋಹಿತ್ ಹಾಗೂ ಶಿಲ್ಪಾ ದಂಪತಿ ಪುತ್ರ ಕೊಡಗಿನ ಟ್ರೆಡಿಷನಲ್ ಶೊಟೊಕಾನ್ ಕರಾಟೆ ಅಸೋಸಿಯೇಷನ್ ತರಬೇತುದಾರ ಎನ್.ಸಿ.ಸುದರ್ಶನ್ ಅವರ ಬಳಿ ಹರ್ಷಲ್ ತರಬೇತಿ ಪಡೆದಿದ್ದಾನೆ.

ಶೀಘ್ರ ಆದಿವಾಸಿಗಳ ಕುಂದುಕೊರತೆ ಸಭೆ

ತಿತಿಮತಿಯಲ್ಲಿ ಗಿರಿಜನ ಉತ್ಸವದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಭರವಸೆ

ಮಡಿಕೇರಿ, ಡಿ.1– ವಿರಾಜಪೇಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಆದಿವಾಸಿಗಳ ಸಂಖ್ಯೆ ಹೆಚ್ಚಿದ್ದು, ಅವರ ಕುಂದುಕೊರತೆ ಪರಿಹರಿಸುವ ನಿಟ್ಟಿನಲ್ಲಿ ಸದ್ಯದಲ್ಲೇ ಸಭೆ ನಡೆಸಲಾಗುವುದು ಎಂದು ಶಾಸಕ ಎ.ಎಸ್.ಪೊನ್ನಣ್ಣ ಭರವಸೆ ನೀಡಿದರು.

ತಿತಿಮತಿ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣದದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಗ್ರ ಗಿರಿಜನ ಯೋಜನಾ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪರಿಶಿಷ್ಟ ಪಂಗಡ ಉಪ ಯೋಜನೆಯಡಿ ನಡೆದ 'ಗಿರಿಜನ ಉತ್ಸವ'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅರಣ್ಯ ಹಕ್ಕು ಕಾಯ್ದೆಯಡಿ ಇನ್ನೂ ಸಾಕಷ್ಟು ಕುಟುಂಬಗಳಿಗೆ ಅರಣ್ಯ ಹಾಗೂ ಸಮುದಾಯ ಹಕ್ಕುಪತ್ರ ಸಹ ದೊರೆಯಬೇಕಿದೆ. ಈ ನಿಟ್ಟಿನಲ್ಲಿ ಚರ್ಚಿಸಿ ಇತ್ಯರ್ಥಪಡಿಸಲು ಸಭೆ ನಡೆಸಲಾಗುವುದು ಎಂದರು.



ಈಗಾಗಲೇ ಗಿರಿಜನರ ಕುಂದುಕೊರತೆ ಆಲಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸಲಾಗಿದೆ. ಅನಾದಿಕಾಲದಿಂದಲೂ ಶೋಷಣೆ ಅನುಭವಿಸಿಕೊಂಡು ಬಂದಿರುವ ಜನರು ಜಾಗೃತರಾಗಬೇಕು. ಸರ್ಕಾರದ ಸೌಲಭ್ಯಗಳು ಹಂಚಿಕೆಯಾಗುವ ನಿಟ್ಟಿನಲ್ಲಿ ಸ್ಥಳೀಯವಾಗಿ ಹಲವು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಭೆ ಆಯೋಜಿಸಲಾಗುವುದು. ಸಿದ್ದರಾಮಯ್ಯ ಕಳೆದ ಬಾರಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗಾಗಿ ಪ್ರತಿಯೊಂದು ಇಲಾಖೆಯಲ್ಲೂ ಇಂತಿಷ್ಟು ಹಣವನ್ನು ಮೀಸಲಿಟ್ಟು ಹಲವು ಉಪಯುಕ್ತ ಕಾರ್ಯಕ್ರಮಗಳಿಗೆ ಅನುದಾನ ಬಳಸಲು ಕಾಯ್ದೆ ಜಾರಿಗೊಳಿಸಿದ್ದಾರೆ ಎಂದು ತಿಳಿಸಿದರು.

ಜಿಪಂ ಮಾಜಿ ಸದಸ್ಯರಾದ ಪಂಕಜ ಮಾತನಾಡಿ, ಸರ್ಕಾರ ಆದಿವಾಸಿಗಳ ಶ್ರೇಯೋಭಿವೃದ್ಧಿಗೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಪೌಷ್ಟಿಕ ಆಹಾರ ವಿತರಣೆ, ವಿದ್ಯಾರ್ಥಿ ನಿಲಯ ಸೌಲಭ್ಯ, ಆಶ್ರಮ ಶಾಲೆಗಳು, ಹೀಗೆ ಹಲವು ಯೋಜನೆಗಳಿದ್ದು, ಅವುಗಳನ್ನು ಬಳಸಿಕೊಳ್ಳುವಂತಾಗಬೇಕು ಎಂದರು. ಸಮಗ್ರ ಗಿರಿಜನ ಯೋಜನಾ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ ಮಾತನಾಡಿ, ಜಿಲ್ಲೆಯಲ್ಲಿ 21 ಸಾವಿರ ಯರವ, 12 ಸಾವಿರ ಜೇನುಕುರುಬ ಸೇರಿದಂತೆ ಸುಮಾರು 50 ಸಾವಿರಕ್ಕೂ ಹೆಚ್ಚು ಆದಿವಾಸಿಗಳು ವಾಸಿಸುತ್ತಿದ್ದಾರೆ. ನಿವೇಶನ ರಹಿತರಿಗೆ ನಿವೇಶನ ಕಲ್ಪಿಸಲು ಪ್ರಯತ್ನಿಸಲಾಗಿದೆ. ಆದಿವಾಸಿಗಳ ಕಲ್ಯಾಣಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಜಿಲ್ಲೆಯ 11 ಆಶ್ರಮ ಶಾಲೆಗಳಲ್ಲಿ ಗಿರಿಜನ ಸಮುದಾಯದ ಮಕ್ಕಳು ವಿದ್ಯಾರ್ಜನೆ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎಂ.ಚಂದ್ರಕಾಂತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ, ಗ್ರಾಪಂ ಅಧ್ಯಕ್ಷ ಪಿ.ಎಸ್.ಪೊನ್ನು, ತಹಸೀಲ್ದಾರ್‌ಗಳಾದ ಪ್ರಶಾಂತ್, ರಾಮಚಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ್, ಬಿಆರ್‌ಸಿ ವನಜಾಕ್ಷಿ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಗುರುಶ್ರೀ, ಲ್ಯಾಂಪ್ ಸೊಸೈಟಿ ಅಧ್ಯಕ್ಷೆ ಮಣಿ, ಮುಖ್ಯ ಶಿಕ್ಷಕರಾದ ಸಿದ್ದಲಿಂಗ ಶೆಟ್ಟಿ, ಪಾರ್ವತಿ, ಮಂಗಳಾ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಅಪ್ರೋಜ್, ಜಾನ್ ಇತರರಿದ್ದರು.



ಜನಮನ ರಂಜಿಸಿದ ಗಿರಿಜನ ಉತ್ಸವ

ತಿತಿಮತಿಯಲ್ಲಿ ನಡೆದ ಗಿರಿಜನ ಉತ್ಸವ ಜನಾಕರ್ಷಣೆಗೊಳಿಸಿತು. ಜೆ.ಪಿ.ರಮೇಶ್ ಅವರ ಗಿರಿಜನ ಆದಿವಾಸಿ ಹಾಡು ಎಲ್ಲರನ್ನು ರಂಗೇರಿಸಿತು. ಚೊಟ್ಟೆಪಾರೆ ಹಾಡಿಯ ಜೆ.ಕೆ.ರಾಮು ಮತ್ತು ತಂಡದವರು ಜೇನುಕುರುಬ ನೃತ್ಯ ಕಲಾ ಪ್ರದರ್ಶಿಸಿ ಗಮನ ಸೆಳೆದರು. ನಂಗ ಇರುದು ಹುಲ್ಲು ಮನೆ... ಹಿಂದೆ ಇದ್ದದ್ದು ಕಟ್ಟೆ ಬುಡಲಿನಲ್ಲಿ... ಈಗಲೂ ಇರುವುದು ಹುಲ್ಲು ಮನೆ... ಅಜ್ಜ ಅಜ್ಜಿ ಇದ್ದದ್ದು ಕಟ್ಟೆಬುಡಲೆ ಜೇನು ಕುರುಬ ಭಾಷೆಯಲ್ಲಿ ಹಾಡು ಹಾಡಿ ನೃತ್ಯ ಪ್ರದರ್ಶನ ಮಾಡಿದ್ದು, ಎಲ್ಲರನ್ನು ಮುದಗೊಳಿಸಿತು. ನಾಲಡಿ ಗ್ರಾಮದ ಭೋಜಕ್ಕಿ ಮತ್ತು ತಂಡದವರು ಕುಡಿಯರ ದುಡಿ ನೃತ್ಯ, ತೋರ ಗ್ರಾಮದ ಕುಡಿಯರ ಗೋಪಮ್ಮ ಮತ್ತು ತಂಡದವರು ಉರುಟ್ಟಿಕೊಟ್ ನೃತ್ಯ ಪ್ರದರ್ಶಿಸಿದರು.

ಕುಶಾಲನಗರದಲ್ಲಿ ವಿಜೃಂಭಣೆಯ ಗಣಪತಿ ರಥೋತ್ಸವ

ಕುಶಾಲನಗರ, ಡಿ.1– ಐತಿಹಾಸಿಕ ಹಿನ್ನೆಲೆಯ ಕುಶಾಲನಗರದ ಶ್ರೀಗಣಪತಿ ದೇವಾಲಯದ ವಾರ್ಷಿಕ ರಥೋತ್ಸವ ಶುಕ್ರವಾರ ವಿಜೃಂಭಣೆಯಿಂದ ನೆರವೇರಿತು.

ಗಣಪತಿ ದೇವಾಲಯ ಸೇವಾ ಸಮಿತಿ ವತಿಯಿಂದ ಮಧ್ಯಾಹ್ನ 12.45ಕ್ಕೆ ಗಣಪತಿ ವಿಗ್ರಹವನ್ನು ರಥೋತ್ಸವದಲ್ಲಿ ಪ್ರತಿಷ್ಠಾಪಿಸಲಾಯಿತು. ರಥಕ್ಕೆ ಬಲಿ ಪೂಜೆ ಹಾಗೂ ಮಹಾಮಂಗಳಾರತಿ ಬಳಿಕ 1 ಗಂಟೆಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತರು ರಥವನ್ನು ದೇವಾಲಯದಿಂದ ರಥಬೀದಿ ಮೂಲಕ ಆಂಜನೇಯ ದೇವಸ್ಥಾನದವರೆಗೆ ಎಳೆದರು. ದೇವಾಲಯದ ಪ್ರಧಾನ ಅರ್ಚಕ ಆರ್.ಕೆ.ನಾಗೇಂದ್ರ ಬಾಬು ಹಾಗೂ ದೇವಸ್ಥಾನ ಸಮಿತಿ ಅಧ್ಯಕ್ಷ ವಿ.ಎನ್.ವಸಂತಕುಮಾರ್ ವಿವಿಧ ಪೂಜಾ ವಿಧಿವಿಧಾನ ನೆರವೇರಿಸಲಾಯಿತು.



ಮೊದಲು ಪಕ್ಕದ ಹೆಬ್ಬಾಲೆ ಮತ್ತು ಆವರ್ತಿಯಿಂದ ಬಂದಿದ್ದ ಗೋವುಗಳಿಗೆ ಗೋಪೂಜೆ ನೆರವೇರಿಸಲಾಯಿತು. ಇದೇ ವೇಳೆ ಅಯ್ಯಪ್ಪ ಮಾಲಾಧಾರಿಗಳು ಗಣಪತಿ ದೇವಾಲಯದ ಎದುರು ರಸ್ತೆ ಉದ್ದಕ್ಕೂ ಕರ್ಪೂರ ಹರಡಿ ಬೆಂಕಿ ಹಚ್ಚಿ ಪ್ರಾರ್ಥನೆ ಸಲ್ಲಿಸಿದರು. ಹರಕೆ ಹೊತ್ತಿದ್ದ ಭಕ್ತರು ರಥ ಆಗಮಿಸುವ ವೇಳೆ ರಸ್ತೆಯಲ್ಲಿ ಸಾವಿರಾರು ಈಡುಗಾಯಿ ಒಡೆದರು.

ಗಣಪತಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಅನೇಕ ವರ್ಷಗಳಿಂದ ನಡೆಯುತ್ತಿರುವ ಇತಿಹಾಸ ಪ್ರಸಿದ್ಧ ಈ ಜಾತ್ರೆಗೆ ಮೈಸೂರು ಹಾಗೂ ಹಾಸನ ಜಿಲ್ಲೆಗಳ ಗಡಿಭಾಗದ ಜನರು ಸೇರಿದಂತೆ ಕೊಡಗು ಜಿಲ್ಲೆಯ ಸಾವಿರಾರೂ ಜನರು ಪಾಲ್ಗೊಂಡಿದ್ದರು.

ಶಾಸಕ ಡಾ.ಮಂಥರ್‌ಗೌಡ ಗಣಪತಿ ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆದರು. ದೇವಾಲಯ ಸಮಿತಿ ಕಾರ್ಯಾಧ್ಯಕ್ಷ ಎಂ.ಕೆ.ದಿನೇಶ್, ಉಪಾಧ್ಯಕ್ಷ ಆರ್.ಬಾಬು, ಕಾರ್ಯದರ್ಶಿ ಬಿ.ಕೆ.ಮುತ್ತಣ್ಣ, ನಿರ್ದೇಶಕರಾದ ವಿ.ಡಿ. ಪುಂಡರಿಕಾಕ್ಷ, ವಿ.ಪಿ.ಶಶಿಧರ್, ಜಿ.ಎಲ್.ನಾಗರಾಜು, ಎಂ.ವಿ.ನಾರಾಯಣ್, ಖಾಯಂ ಆಹ್ವಾನಿತ ಟಿ.ಆರ್.ಶರವಣಕುಮಾರ್, ವಿಶೇಷ ಆಹ್ವಾನಿತರಾದ ಕೆಎನ್.ದೇವರಾಜು, ಎಚ್.ಎಂ.ಚಂದ್ರು, ಎಚ್.ಎನ್.ರಾಮಚಂದ್ರ, ಡಿ.ಅಪ್ಪಣ, ವೈ.ಆರ್.ನಾಗೇಂದ್ರ, ಡಿ.ಸಿ.ಜಗದೀಶ್, ಕೆ.ಎನ್.ಸುರೇಶ್, ಕೆ.ಸಿ.ನಂಜುಂಡ ಸ್ವಾಮಿ, ಪಟ್ಟಣ ಪಂಚಾಯಿತಿ ಸದಸ್ಯ ಬಿ.ಜೈವರ್ಧನ್, ಅಮೃತ್ ರಾಜ್, ಡಿ.ಕೆ.ತಿಮ್ಮಪ್ಪ, ಮುಖಂಡರಾದ ಮಂಜುನಾಥ್ ಗುಂಡೂರಾವ್, ನಾಗೇಂದ್ರ ಪ್ರಸಾದ್ ಹಾಜರಿದ್ದರು.

ಕೋಲ್ ಮಂದ್‌ನಲ್ಲಿ ಪುತ್ತರಿ ನಮ್ಮೆ ಸಂಭ್ರಮ



ವಿರಾಜಪೇಟೆ, ಡಿ.1–ವಿರಾಜಪೇಟೆಯ ಕೊಡವ ಸಮಾಜ ಬಳಿಯ ಪೂಮಾಲೆ ಕೋಲ್ ಮಂದ್‌ನಲ್ಲಿ ಪುತ್ತರಿ ಹಬ್ಬದ ಅಂಗವಾಗಿ ಶುಕ್ರವಾರ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಎಡೆನಾಡ್, ಬೇಟೋಳಿನಾಡ್, ಭೈರವನಾಡ್, ಪೊರವನಾಡ್ ಸೇರಿದಂತೆ ಅರಾಯಿರ ನಾಡ್ ಒಟ್ಟು 17 ಗ್ರಾಮಗಳಿಂದ ಸಾಂಪ್ರದಾಯಿಕ ಉಡುಪುಗಳಲ್ಲಿ ಬಂದಿದ್ದ ತಕ್ಕಮುಖ್ಯಸ್ಥರು ಹಾಗೂ ವಿವಿಧ ನಾಡಿನ ಗ್ರಾಮಸ್ಥರು ಪುತ್ತರಿ ಕೋಲಾಟ, ಪರೆಕಳಿ, ವಾಲಗತಟ್ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಪುತ್ತರಿ ನಮ್ಮೆ ಸಂಭ್ರಮಿಸಿದರು. ಕಾರ್ಯಕ್ರಮದಲ್ಲಿ ಪೂಮಾಲೆ ಮಂದ್ ಅಧ್ಯಕ್ಷ ಅಜ್ಜಿನಿಕಂಡ ಸುಧೀರ್, ಉಪಾಧ್ಯಕ್ಷ ವಟೇರಿರ ಶಂಕರಿ ಪೂವಯ್ಯ, ಮರಣನಿಧಿ ಪಂಡ್ ಅಧ್ಯಕ್ಷ ಚೆಂದಂಡ ಜಿ.ಪೊನ್ನಪ್ಪ, ನಾಡ್ ತಕ್ಕರಾದ ಕೊಳುಮಂಡ ಕಾರ್ಯಪ್ಪ, ಮುಕ್ಕಟ್ಟಿರ ಮುತ್ತು ಕುನ್ನಿ, ಅಮ್ಮಣ ಕುಟ್ಟಂಡ ವಸಂತಕಟ್ಟಿ, ಪೊನ್ನ ಕಚ್ಚಿರ ಸೋಮಯ್ಯ, ಕ್ರೀಡಾ ಸಮಿತಿ ಪುಗ್ಗೇರ ಎಸ್.ನಂದ ಮುಂತಾದವರು ಭಾಗವಹಿಸಿದ್ದರು. ಪುತ್ತರಿ ನಮ್ಮೆ ಅಂಗವಾಗಿ ಬೆಳಗ್ಗೆ ಪೂಮಾಲೆ ಕೋಲ್‌ಮಂದ್‌ನಲ್ಲಿ ಮಂದ್ ಅಧ್ಯಕ್ಷ ಅಜ್ಜಿನಿಕಂಡ ಸುಧೀರ್ ಧ್ವಜಾರೋಹಣ ನೆರವೇರಿಸಿ ಮಂದ್ ಪೂಜೆ ಸಲ್ಲಿಸಿದರು.

ವಿವಿಧೆಡೆ ಕೋಟ್ಪಾ ದಾಳಿ: 7970 ರೂ. ದಂಡ



ಚಾಮರಾಜನಗರ, ಡಿ.1– ಜಿಲ್ಲಾ ತಂಬಾಕು ನಿಯಂತ್ರಣ ಘಟಕ, ಜಿಲ್ಲಾ ಕಣ್ಗಾವಲು ಘಟಕ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಕೋಟ್ಪಾ ತನಿಖಾ ತಂಡ ನವೆಂಬರ್‌ನಲ್ಲಿ ಜಿಲ್ಲೆಯ ವಿವಿಧೆಡೆ ಕೋಟ್ಪಾ ದಾಳಿ ನಡೆಸಿ, 7970 ರೂ. ದಂಡ ವಿಧಿಸಿದೆ.

ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಗುಂಡ್ಲುಪೇಟೆ ಪಟ್ಟಣ, ಹನೂರು ತಾಲೂಕಿನ ನೆಲ್ಲೂರು, ಪೆದ್ದನಪಾಳ್ಯ, ಕೂಡ್ಲೂರು, ಚಾಮರಾಜನಗರ ತಾಲೂಕಿನ ಅಮಚವಾಡಿ, ಇರಸವಾಡಿ, ಮಸಣಾಪುರ ಮತ್ತು ಕೊಳ್ಳೇಗಾಲ ಪಟ್ಟಣ ವ್ಯಾಪ್ತಿ ದಾಳಿ ನಡೆಸಿ, ಒಟ್ಟು 83 ಪ್ರಕರಣ ದಾಖಲಿಸಿ ದಂಡ ವಿಧಿಸಲಾಗಿದೆ.

ನಿಯಮ ಉಲ್ಲಂಘಿಸಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳು, ಕೋಟ್ಪಾ ಎಚ್ಚರಿಕೆ ನಾಮಫಲಕವನ್ನು ಪ್ರದರ್ಶಿಸದ ಹೋಟೆಲ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು, ಟೀ ಸ್ಟಾಲ್, ಚಿಲ್ಲರೆ ಅಂಗಡಿಗಳು ತಂಬಾಕು ಪದಾರ್ಥಗಳ ಮಾರಾಟ ಮತ್ತು ಸೇವನೆಗೆ ಉತ್ತೇಜನ ನೀಡುತ್ತಿರುವುದರಿಂದ ದಂಡ ವಿಧಿಸಲಾಗಿದೆ.

ಮಹದೇಶ್ವರಬೆಟ್ಟದ ಲಾಡು ತಯಾರಿಕಾ ಘಟಕದಲ್ಲಿ ಬೆಂಕಿ ಅವಘಡ

- ಗ್ಯಾಸ್ ಸೋರಿಕೆಯಿಂದ ಲಕ್ಷಾಂತರ ರೂ. ಮೌಲ್ಯದ ವಸ್ತು ಭಸ್ಮ
- ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ



ಹನೂರು, ಡಿ.1– ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ಯಾತ್ರಾ ಶ್ರೀಕ್ಷೇತ್ರ ಮಲೆಮಹದೇಶ್ವರಸ್ವಾಮಿ ಬೆಟ್ಟದ ಲಾಡು ತಯಾರಿಕಾ ಕೇಂದ್ರದಲ್ಲಿ ಶುಕ್ರವಾರ ಮಧ್ಯಾಹ್ನ ಸಿಲಿಂಡರ್‌ನಲ್ಲಿ ಗ್ಯಾಸ್ ಸೋರಿಕೆಯಾಗಿ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಬೆಂಕಿಗೆ ಭಸ್ಮವಾಗಿವೆ.

ಮಾದಪ್ಪನ ದೇವಾಲಯದ ಲಾಡು ತಯಾರಿಕಾ ಕೇಂದ್ರದಲ್ಲಿ ದಿಢೀರ್ ಬೆಂಕಿ ಅವಘಡ ಸಂಭವಿಸಿ, ಕಟ್ಟಡ ಹೊತ್ತಿ ಉರಿದಿದೆ. ಅದೃಷ್ಟವಶಾತ್ ಯಾವುದೇ ಅಪಾಯವಾಗಿಲ್ಲ. ಲಾಡು ತಯಾರಿಕಾ ಕೇಂದ್ರದಲ್ಲಿ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಲಾಗಿತ್ತು. ಅದರಲ್ಲಿ ಯಾವುದೋ ಒಂದು ಸಿಲಿಂಡರ್‌ನಿಂದ ಗ್ಯಾಸ್ ಸೋರಿಕೆಯಾಗಿದೆ. ಇದರಿಂದ ಈ ವೇಳೆ ಲಾಡು ತಯಾರಿಸುವ ಬಿಸಿ ಬಾಡ್ಲಿಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಕೊಠಡಿಯ ಗೋಡೆ ಹಾಗೂ ಚಾವಣಿಯಲ್ಲಿ ಎಣ್ಣೆ ಹಾಗೂ ತುಪ್ಪದ ಜಿಡ್ಡಿನಾಂಶ ಅಂಟಿದ್ದರಿಂದ ವೇಗವಾಗಿ ವ್ಯಾಪಿಸಿದ ಬೆಂಕಿಯ ಜ್ವಾಲೆಗೆ ಲಾಡು ತಯಾರಿಕಾ ಕೇಂದ್ರದೊಳಗಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಸುಟ್ಟು ಭಸ್ಮವಾಗಿವೆ.

ಬೆಂಕಿಯ ಜ್ವಾಲೆ ವ್ಯಾಪಿಸುತ್ತಿದ್ದಂತೆ ಕೊಠಡಿಯಲ್ಲಿದ್ದ ಸಿಬ್ಬಂದಿ ಹೊರ ಬಂದಿದ್ದಾರೆ. ಹೀಗಾಗಿ ಯಾವುದೇ ಅಪಾಯವಾಗಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ವಿಷಯ ತಿಳಿದು ತಕ್ಷಣ ಸ್ಥಳಕ್ಕೆ ಧಾವಿಸಿದ ಮಲೆಮಹದೇಶ್ವರ ಬೆಟ್ಟದ ಅಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸಪಟ್ಟರು. ಬೆಟ್ಟಕ್ಕೆ ಸುಮಾರು 70 ಕಿಮೀ ದೂರವಿರುವ ಹನೂರಿನಿಂದ ಅಗ್ನಿಶಾಮಕ ಸಿಬ್ಬಂದಿ ಬರುವಷ್ಟರಲ್ಲಿ ಲಾಡು ತಯಾರಿಕೆ ಕೇಂದ್ರದಲ್ಲಿದ್ದ ವಸ್ತುಗಳು ಸುಟ್ಟು ಹೋಗಿವೆ. ಮಲೆಮಹದೇಶ್ವರ ಬೆಟ್ಟದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ, ಅಧಿಕಾರಿಗಳು ಸ್ಥಳ ಪರಿಶೀಲಿಸಿದರು. ಈ ಸಂಬಂಧ ಮಹದೇಶ್ವರಬೆಟ್ಟದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಭಿಮಾನವಿದ್ದರೆ ಮಾತ್ರ ಕನ್ನಡ ಬೆಳೆಸಲು ಸಾಧ್ಯ

ಕರ್ನಾಟಕ ಸುವರ್ಣ ಸಂಭ್ರಮದಲ್ಲಿ ಸಚಿವ ಕೆ.ವೆಂಕಟೇಶ್ ಅಭಿಮತ

ಚಾಮರಾಜನಗರ, ಡಿ.1– ಮಾತೃಭಾಷೆ ಬಗ್ಗೆ ಅಭಿಮಾನ ಬೆಳೆಸುವ ಇಚ್ಛಾಶಕ್ತಿ ಇದ್ದರೆ ಮಾತ್ರ ಕನ್ನಡವನ್ನು ದೊಡ್ಡ ಮಟ್ಟದಲ್ಲಿ ಬೆಳೆಸಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ರಾಜ್ಯ ಘಟಕದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ, ಕರ್ನಾಟಕ ಸುವರ್ಣ ಸಂಭ್ರಮ ಹಾಗೂ ಕರ್ನಾಟಕ ಏಕೀಕರಣದ ಶಿಲ್ಪಿ ಕೆಂಗಲ್ ಹನುಂತಯ್ಯ ಅವರ ಸ್ಮರಣೆ ಕಾರ್ಯಕ್ರಮವ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡವನ್ನು ದೊಡ್ಡಮಟ್ಟದಲ್ಲಿ ಬೆಳೆಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕರ್ನಾಟಕ ಸುವರ್ಣ ಸಂಭ್ರಮವನ್ನು ವರ್ಷಪೂರ್ತಿ ಆಚರಿಸಲು ಘೋಷಣೆ ಮಾಡಿದೆ. ಇಡೀ ವರ್ಷ ಸುವರ್ಣ ಕಾರ್ಯಕ್ರಮ ಆಚರಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ಕಾರ್ಯಕ್ರಮದಲ್ಲಿ ಬರೀ ಸಂಭ್ರಮಿಸಿ, ಕುಣಿದು ಕುಪ್ಪಳಿಸಿ ಮನೆಗೆ ಹೋದರೆ ಮಾತೃಭಾಷೆ ಅಭಿವೃದ್ಧಿಯಾಗಲ್ಲ. ದಿನನಿತ್ಯ ಕನ್ನಡ ಬಳಕೆ ಮಾಡಲು ಏನೇನು ಕೊಡುಗೆ ನೀಡಲು ಸಾಧ್ಯವಿದೆಯೋ ಅದನ್ನೆಲ್ಲ ಕೊಡುವ ಕೆಲಸವನ್ನು ಕನ್ನಡಿಗರು ಮಾಡಬೇಕು ಎಂದು ಮನವಿ ಮಾಡಿದರು.

ಕರ್ನಾಟಕ ಏಕೀಕರಣದಲ್ಲಿ ಕೆಂಗಲ್ ಹನುಮಂತಯ್ಯನವರ ಪಾತ್ರ ಬಹಳ ದೊಡ್ಡದಿದೆ. ಅಂದಿನ ರಾಜಕಾರಣಿಗಳ ಪೈಕಿಯಲ್ಲಿ ಮಾಜಿ ರಾಜ್ಯಪಾಲ ಬಿ.ರಾಚಯ್ಯನವರು ಕೊಡುಗೆ ನೀಡಿದ್ದಾರೆ. ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡಿದ ಮಹನೀಯರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.



ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಮಾತನಾಡಿ, ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ನಾಮಕರಣ ಈ ಎರಡು ಶುಭಗಳು ಈ ವರ್ಷ ಸಂದಿಸಿವೆ. ಕರ್ನಾಟಕ 68 ವರ್ಷಗಳ ಹಿಂದೆ ಏಕೀಕರಣವಾಯಿತು. ಆದರೆ, ಭೌಗೋಳಿಕವಾಗಿ ಏಕೀಕರಣ ಆಗಿದೆಯೇ ಹೊರತು, ನೈತಿಕವಾಗಿ ಏಕೀಕರಣವಾಗಿಲ್ಲ. ಕನ್ನಡಿಗರು ಇನ್ನೂ ಒಂದಾಗಿಲ್ಲ ಎಂಬುವುದು ಒಂದು ವಿಷಾದಕರ ಸಂಗತಿಯಾಗಿದೆ. ಕೆಂಗಲ್ ಹನುಮಂತಯ್ಯನವರ ಪುಣ್ಯಸ್ಮರಣೆಯಿಂದ ಕರ್ನಾಟಕ ಏಕೀಕರಣ ಆಗಬೇಕಿದೆ ಎಂದು ಹೇಳಿದರು.

ರಾಜ್ಯದಲ್ಲಿ ಅನೇಕರು ಮುಖ್ಯಮಂತ್ರಿಗಳಾಗಿದ್ದಾರೆ. ಆದರಲ್ಲಿ ದೇವರಾಜ ಅರಸ್ ಅವರು ಕರ್ನಾಟಕ ನಾಮಕರಣ ಮಾಡಿದರು. ಕರ್ನಾಟಕ ಏಕೀಕರಣಕ್ಕಾಗಿ ಹನುಮಂತಯ್ಯನವರು ಶ್ರಮಿಸಿದರು ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ, ಕೆಂಗಲ್ ಹನುಮಂತಯ್ಯನವರು ಕರ್ನಾಟಕ ಏಕೀಕರಣಕ್ಕಾಗಿ ಮಹತ್ವದ ಪಾತ್ರ ವಹಿಸಿದ್ದರು. ಕರ್ನಾಟಕ ಸ್ಥಾಪನೆಯಾಗಲು ಕನ್ನಡ ಮಾತನಾಡುವ ಎಲ್ಲರನ್ನೂ ಒಗ್ಗೂಡಿಸಲು ಶ್ರಮಿಸಿದ್ದಾರೆ. ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ವಿಷನ್ ವರದಿ ನೀಡಿ ಭದ್ರಬುನಾದಿ ಹಾಕಿದ್ದರು. ಬೆಂಗಳೂರಿನಲ್ಲಿ ವಿಧಾನಸೌಧ ನಿರ್ಮಿಸಿದರು. ಅಂತಹ ಸುಂದರವಾದ ಸೌಧ ಬೇರೆ ಎಲ್ಲೂ ಇಲ್ಲ. ಅವರ ಸ್ಮರಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ವಾಟಾಳ್ ಸೂರ್ಯ ಸಿಂಹಾಸನ ಮಠದ ಶ್ರೀ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್, ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮಾತನಾಡಿದರು.


ಇದೇ ವೇಳೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರಿಗೆ ಕೆಂಗಲ್ ಹನುಮಂತಯ್ಯ ಪ್ರಶಸ್ತಿ ಪ್ರದಾನ ಮಾಡಿ, ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಕನ್ನಡ ಮಹಾಸಭಾ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಚಾಮರಾಜನಗರ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಎಂ.ಆರ್.ಗಂಗಾಧರ್, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್‌ನಾಯಕ, ಮಹಾಸಭಾ ಗೌರವಾಧ್ಯಕ್ಷ ಶಾ.ಮುರಳಿ, ಪ್ರಧಾನ ಕಾರ್ಯದರ್ಶಿ ಚಾ.ವೆಂ.ರಾಜ್‌ಗೋಪಾಲ್, ಸಹ ಕಾರ್ಯದರ್ಶಿ ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ಚಾ.ಹ.ರಾಮು ಇತರರು ಹಾಜರಿದ್ದರು.

ಹೆದ್ದಾರಿಯಲ್ಲಿ ಕನ್ನಡ ಧ್ವಜ ಹಿಡಿದು ಪ್ರತಿಭಟನೆ

ಚಾಮರಾಜನಗರ, ಡಿ.1– ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಕಳೆದ 87 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು, ಶುಕ್ರವಾರ ಕನ್ನಡ ಬಾವುಟ ಹಿಡಿದು ಪ್ರತಿಭಟನೆ ನಡೆಸಲಾಯಿತು.

ಚಾಮರಾಜೇಶ್ವರ ಉದ್ಯಾನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಭುವನೇಶ್ವರಿ ವೃತ್ತಕ್ಕೆ ತೆರಳಿ ನಂತರ ರಾಷ್ಟ್ರೀಯ ಹೆದ್ದಾರಿಯಲ್ಲಿ ಕನ್ನಡ ಧ್ವಜ ಹಿಡಿದು ಕೇಂದ್ರ ಮತ್ತು ಕರ್ನಾಟಕ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ಚಾ.ವೆಂ.ರಾಜ್‌ಗೋಪಾಲ್, ಮಹೇಶ್‌ಗೌಡ, ಗು.ಪುರುಷೋತ್ತಮ್, ಲಿಂಗರಾಜು, ರಾಜಪ್ಪ, ಚಾ.ಸಿ.ಸಿದ್ದರಾಜು, ವೀರಭದ್ರ, ಮಂಜು, ಪ್ರಕಾಶ್ ಇತರರು ಭಾಗವಹಿಸಿದ್ದರು.



ಪುಣಜನೂರಿನಲ್ಲಿ ಸಾಂಸ್ಕೃತಿಕ ಗಡಿ ಉತ್ಸವ

ಚಾಮರಾಜನಗರ, ಡಿ.1– ತಾಲೂಕಿನ ಪುಣಜನೂರಿನಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ರಂಗ ಜಂಗಮ ಜನಪದ ವೇದಿಕೆ ವತಿಯಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸವಿನೆನಪಿನ ಅಂಗವಾಗಿ ಶುಕ್ರವಾರ 'ಅಮೃತ ಭಾರತಿಗೆ ಕನ್ನಡದ ಆರತಿ' ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಗಡಿ ಉತ್ಸವ ಅದ್ಧೂರಿಯಾಗಿ ನಡೆಯಿತು.

ಸಾಂಸ್ಕೃತಿಕ ಕಲಾ ತಂಡಗಳಾದ ಶಿವರಾಮು ಮತ್ತು ತಂಡ ಪಿನಾಸಿ ನೃತ್ಯ, ಚಂದ್ರಶೇಖರ್ ಮತ್ತು ತಂಡ ಬಡಗು ನೃತ್ಯ, ಗೀತಾ, ಸವಿತಾ ಮತ್ತು ತಂಡ ಬಡಗರು ನೃತ್ಯ, ಮಂಟೇಸ್ವಾಮಿ, ಕಾವ್ಯ, ಮಹೇಶ್ ತಂಡ ತಂಬೂರಿಪದ, ಮಣಿಯಮ್ಮ ಮತ್ತು ತಂಡ, ರಾಜಶೇಖರ್, ಎಂ.ನಟರಾಜು ತಂಡ ಜನಪದ ಗಾಯನ, ನಾಗಲಿಂಗಸ್ವಾಮಿ ಮತ್ತು ತಂಡದವರು ವಾದ್ಯಗೋಷ್ಠಿ ನಡೆಸಿಕೊಟ್ಟರು.

ಸಾಹಿತಿ ಕೆ.ಎನ್.ಶಿವಕುಮಾರ್ ಕೊತ್ತಲವಾಡಿ ಗಡಿನಾಡು ಸಾಂಸ್ಕೃತಿಕ ಸಮಸ್ಯೆಗಳ ಕುರಿತು ಮಾತನಾಡಿ, ಭಾರತೀಯ ಸಂಸ್ಕೃತಿ ಎಂದರೆ ಹಳ್ಳಿಗಾಡಿನ ಒಟ್ಟು ಬಹುಸಂಸ್ಕೃತಿ ಎಂದಾರ್ಥವಾಗಿ ಭಾರತ ಒಂದು ಹಳ್ಳಿಗಳ ದೇಶವಾಗಿದೆ. ಒಂದು ವೈವಿಧ್ಯಮಯ ಸಂಸ್ಕೃತಿಯನ್ನು ಭಾರತದ ನೆಲಗಟ್ಟು ಹೊಂದಿರುವುದನ್ನು ನಾವು ಕಾಣುತ್ತೇವೆ. ಅದನ್ನು ಸಾವಿರಾರು ವರ್ಷಗಳಿಂದ ಜನರು ಆಚರಣೆಮಾಡಿಕೊಂಡು ಬಂದಿದ್ದಾರೆ ಎಂದರು.

ಹಳ್ಳಿಗಾಡಿನ ಜನರು ತಮ್ಮ ಕೃಷಿ ಬದುಕಿನ ಜಾಂಜಾಟಗಳ ನಡುವೆ ಈ ರೀತಿ ಹಬ್ಬ, ಉತ್ಸವ, ಜಾತ್ರೆಗಳನ್ನು ಆಚರಣೆ ಮಾಡುವ ಮೂಲಕ ಎಲ್ಲಾ ಸಂತೋಷದಿಂದ ಎಲ್ಲರೂ ಒಟ್ಟಿಗೆ ಬದುಕುವುದಕ್ಕೆ ಕಂಡುಕೊಂಡಿರುವುದೇ ಸಾಂಸ್ಕೃತಿಕ ಆಚರಣೆ. ಸಾಂಸ್ಕೃತಿಕ ಆಚರಣೆ ಪ್ರತೀಕವನ್ನೇ ದೇಶದ ಸಂಸ್ಕೃತಿ ಎಂದು ಕರೆಯುತ್ತೇವೆ ಎಂದು ತಿಳಿಸಿದರು.



ಪರಿಸರವಾದಿ ಪುಣಜನೂರು ದೊರೆಸ್ವಾಮಿ ನೆಲ, ಜಲ, ಗಡಿನಾಡು ಸಮಸ್ಯೆ ಕುರಿತು ಮಾತನಾಡಿ, ಜಿಲ್ಲೆಯಲ್ಲಿ ಎಲ್ಲತರದ ಜನಪದ ಪ್ರಕಾರಗಳ ನೃತ್ಯವಿದೆ. ಗಿರಿಜನ, ಲಂಬಾಣಿ, ಬಡಗರ ನೃತ್ಯಗಳು ಮೂಲ ಕಲೆಗಳಾಗಿವೆ. ಗ್ರಾಮ ಪಂಚಾಯಿತಿಯವರು ಗಡಿ ಒತ್ತುವರಿಗೆ ಬಗ್ಗೆ ಗಮನಹರಿಸಬೇಕು. ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಬಡವರಿಗೆ ನಿವೇಶನ ಇಲ್ಲ. ಇದರ ಬಗ್ಗೆ ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮೆರವಣಿಗೆ, ಸನ್ಮಾನ: ಕಾರ್ಯಕ್ರಮಕ್ಕೂ ಮುನ್ನ ಕಲಾತಂಡಗಳ ಮೆರವಣಿಗೆ ಅದ್ಧೂರಿಯಾಗಿ ನಡೆಯಿತು. ಇದೇ ವೇಳೆ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸಾಧಕರನ್ನು ಸನ್ಮಾನಿಸಲಾಯಿತು.

ಪುಣಜನೂರು ಗ್ರಾಪಂ ಅಧ್ಯಕ್ಷ ಸಿವಿಬಾಯಿ ಗಣೇಶ್‌ನಾಯಕ್ ಅಧ್ಯಕ್ಷತೆ ವಹಿಸಿದ್ದರು. ರಂಗ ಜಂಗಮ ವೇದಿಕೆಯ ಅಧ್ಯಕ್ಷ ಜನಪದ ಮಹೇಶ್, ತಾಪಂ ಮಾಜಿ ಸದಸ್ಯ ಕುಮಾರ್‌ನಾಯಕ್, ಉಪಾಧ್ಯಕ್ಷ ರಾಚಯ್ಯ, ಪಿಡಿಓ ವಿ.ಸಿದ್ದರಾಜು, ಸದಸ್ಯರಾದ ಗೀತಾ ಸಿದ್ದರಾಜು, ಸಬೀನಾಬಾನು, ಚಂದ್ರಶೇಖರ್, ಕುಮಾರ, ಪಿ.ನಾಗನಾಯಕ್, ಮಣಿನಾಯಕ್, ಕುಮಾರಿಬಾಯಿ, ಮಹೇಶ, ಲಲಿತಾಬಾಯಿ, ಮಹೇಶ್‌ನಾಯಕ್, ಬಸಮ್ಮ, ಮಮತಾಮುತ್ತು, ನಂಜುಂಡಿ, ಗಂಗಾ, ರಂಗಸ್ವಾಮಿ, ಭಾಗ್ಯಬಾಯಿ, ಸುಶೀಲಾ, ಮಾಜಿ ಸದಸ್ಯರಾದ ಹೆಚ್.ಮೂರ್ತಿ, ಶಿವಾಜಿನಾಯಕ್, ಶಾಂತಮ್ಮ, ಷಾಮಿರ್‌ಪಾಷ, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಜಾಕೀರ್, ಗ್ರಂಥಾಲಯ ಮೇಲ್ವಿಚಾರಕ ವೆಂಕಟೇಶ್ ಹಾಗೂ ಕಲಾವಿದರು ಹಾಜರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು
ಸಂಬಳ: 18500/- +W/o (8hrs)
ಊಟ ತಿಂಡಿ ಸೌಲಭ್ಯವಿರುತ್ತದೆ.
9880727819
9620777819

ಶ್ರೀ ಮೂರ್ತಿ ಟೂರಿಸ್ಟ್
20.12.23 ಬೆಳಿಗ್ಗೆ 4.30ಕ್ಕೆ ಹೊರಟು 1 ದಿನದಲ್ಲಿ 3 ರಂಗನಾಥಸ್ವಾಮಿ (ಆದಿ, ಮಧ್ಯ, ಅಂತ್ಯ ರಂಗನಾಥನ) ದರ್ಶನ ಮಾಡಿ 21–12–23 ಬೆಳಿಗ್ಗೆ 11ಕ್ಕೆ ವಾಪಸ್ ಬರುವುದು (ಕೆ.ಎಸ್.ಆರ್.ಟಿ.ಸಿ ಸಾಮಾನ್ಯ ಬಸ್‌ನಲ್ಲಿ)
9480733069

ಸೈಟುಗಳು ಮಾರಾಟಕ್ಕಿದೆ
30x40, 20x30 ದಟ್ಟಗಳ್ಳಿ 30x50, ಆದಿತ್ಯ ಸರ್ಕಲ್ ಹತ್ತಿರ ಹಳೆಮನೆ/ಹೊಸಮನೆ ಸೈಟು ಮಾರುವವರು/ಕೊಳ್ಳುವವರು
9945042875
ಶ್ರೀ ಬನಶಂಕರಿ ರಿಯಲ್ ಎಸ್ಟೇಟ್

House for Lease
2 BHK in the first floor (13 chadara accommodation) with 2 side balcony, car parking with covered shed at Vijayanagar 4th Stage, 2nd Phase. Location: Walkable distance to NPS School. Contact:
Mob: 9480792529

ಸೈಟ್ ಮಾರಾಟಕ್ಕಿದೆ
ನಂ.21, 30x50 ಉತ್ತರ ದಿಕ್ಕು ಲಕ್ಷ್ಮಿದೇವಿ ಎನ್‌ಕ್ಲೈವ್ (ಕಟೀಲ್ ಎನ್‌ಕ್ಲೈವ್) ವಿಜಯನಗರ 4ನೇ ಹಂತದ ಹತ್ತಿರ, ಮೈಸೂರು
ಬೆಲೆ: 75 ಲಕ್ಷಗಳು (ನೆಗೋಷಿಯಬಲ್)
9845543286
9731681088

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker 9.30 am to 2 pm. Sunday: 10.30 to 3 pm. Salary: 8,000/- per month. For evening: (Male only). 6.30 pm to 11.30 pm. Salary: Rs. 8,000/- per month.
7349337469, 9448525072

ಕುಕ್ ಬೇಕಾಗಿದ್ದಾರೆ
ವೆಜ್ ಮತ್ತು ನಾನ್ ವೆಜ್ ಮಾಡಲು ಅನುಭವವಿರಬೇಕು. ದಟ್ಟಗಳ್ಳಿ 3ನೇ ಹಂತ, ಮೋರ್ ಕಾಂಪ್ಲೆಕ್ಸ್ ಹತ್ತಿರ
ಸಂಪರ್ಕಿಸಿ: ಬೆ.7.30 ರಿಂದ ಬೆ.10.00
9731053082

ಅನುಬಂಧ ಮ್ಯಾರೇಜಸ್
ವಧು ವರರನ್ನು ಹುಡುಕಲು ಸಹಾಯಬೇಕೇ? ನಮಗೆ ಕರೆ ಮಾಡಿ
6361740552

SITES FOR SALE
Muda Approved Nandi Greens Layout, Yelawala 30x50 South Facing
9886653258

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಹೂಟಗಳ್ಳಿ & ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC, PUC, ITI any trade, ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು: 18 ರಿಂದ 30. ಸಂಬಳ: 14,500 ರಿಂದ 19,500. ಅನುಕೂಲತೆ ESI, PF, Canteen ಸೌಲಭ್ಯವಿರುತ್ತದೆ. ಸಂಪರ್ಕಿಸಿ:
7019380847, 7019822622, 6362491336, 9611601179

SITE FOR SALE
SHRIRAM LAND "OXYGEN 2"
Ready to register / RERA & DTCP approved Clear title Sites Starting@ Rs.14.99 Lakhs Onwards
HD Kote Main Road, Mysore (Landmark - Near Jayapura)
9686188919
7676644999

ಮನೆ ಮಾರಾಟಕ್ಕಿದೆ
30X44
ನಂಜನಗೂಡು, ಹುಲ್ಲಹಳ್ಳಿ ರಸ್ತೆ, ರಾಮಸ್ವಾಮಿ ಲೇಔಟ್, ಸಿಟಿಜನ್ ಪಬ್ಲಿಕ್ ಸ್ಕೂಲ್ ಹತ್ತಿರ, ಸೈಟ್ ನಂ. 137/138
8147474199
7795088989

HOUSE FOR LEASE
2BHK House, Ground Floor East Face Semi Furnished with Solar & UPS @ JP Nagar Ring Road (Outer)
9880290857

ತಕ್ಷಣ ಬೇಕಾಗಿದ್ದಾರೆ
ಬಲ್ಲಾಳ್ RTO Circle ಹಾಗೂ ಗಂಗೋತ್ರಿ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು
ಸಂಬಳ : 17500/-(+W/o)
ವಯೋಮಿತಿ : 50 ವರ್ಷದ ಒಳಗೆ
9620667819
9620777819

FOR SALE
TATA ACE MEGA WITH CONTAINER 2016 MODEL
9035159747

WANTED
ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಬಳ: 10,000 - 12,000 / Month
Mob: 9945116969

Alpha School of Fashion Design, Mysore
Become a Fashion Designer
NCVTE New Delhi approved courses
- 3 MONTHS CERTIFICATION COURSE
- 6 MONTHS DIPLOMA COURSE
- 1 YEAR ADVANCE DIPLOMA COURSE

ADMISSION OPEN
*HOSTEL AND PG AVAILABLE
Alpha School of Fashion Design, No.66/2, Manandavadi Road, Near Ring Road Signal Junction, Srirampura, Mysore
7829937469



ಬ್ಯುಸಿನೆಸ್ ಪ್ಲಾನ್
ಬ್ಯುಸಿನೆಸ್ ಪ್ಲಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50–50. ಈ ರೀತಿ ಬ್ಯುಸಿನೆಸ್ ಪ್ಲಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

Wanted (Female) Receptionist / Front Office Executive
for Service Apartment
Qualification: Any Degree, Computer knowledge, Accounts & good English.
J.P. Nagar, Mysore.
Mob: 9243536373

ಮನೆ ಬಾಡಿಗೆಗೆ
2 ಬೆಡ್ ರೂಂ ಮೊದಲನೇ ಮಹಡಿ ಶಾಂತಲಾ ಥಿಯೇಟರ್ ಹತ್ತಿರ
8722552355

WANTED
Accountant 2 Years Experence in Tally with Good Qualification and Communication Skill in Telecaller Salary : 12000 to 15000 (Based on Experience)
FURNISHING SHOP ROYAL FOAM
Address: Akbar Road, Near Ashoka Road, Mysore
9916459786

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ|| ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ|| ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು

WANTED
A shop for lease in Saraswathipuram, Kuvempunagar, Srirampura, Dattagalli.
8762720446, 7829871480

HOUSE FOR SALE
16x32 G&F at Sharadadevi Nagar, 25x40 Ground, 40x60 G&F at Ramakrishna Nagar, 30x40 Duplex at Srirampura, 40x60 G&F at Kuvempunagar
8792538993

SITE FOR SALE
50x80 corner Site for Sale in SBM Bogadi 30x40 Site for Sale in Srinagar, 33x40 Corner Site for Sale in Sharada Layout
9880344263

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
18–01–24: ರಾಯಲ್ ರಾಜಸ್ತಾನ್, 11 ದಿನಗಳ ಪ್ಯಾಕೇಜ್. 30–01–2024: ಗುಜರಾತ್, ನಾಗನಾಥ್, ಸೋಮ್‌ನಾಥ್, ಸರ್ದಾರ್ ವಲ್ಲಭ್‌ಭಾಯ್ ಪಟೇಲ್ ಸ್ಟ್ಯಾಚ್ಯು. 8-1-2024: ಪುರಿ ಜಗನ್ನಾಥ್, ಭುವನೇಶ್ವರ್, ಕೋನಾರ್ಕ್, ಚಂದ್ರಭಾಗ್ ಬೀಚ್. 7-12-23: ರಾಮೇಶ್ವರು, ಕನ್ಯಾಕುಮಾರಿ, ಮಧುರೈ. 4-01-2024: ಶಿರಡಿ, 3 ಜ್ಯೋತಿರ್ಲಿಂಗ ದರ್ಶನ ವಿಮಾನ ಪ್ಯಾಕೇಜ್.
9591017782, 9964527782

ಹೊಸ ಮನೆ ಮಾರಾಟಕ್ಕಿದೆ
20x30 ಉತ್ತರ ದಿಕ್ಕು GF + FF, ರೈಲ್ವೆ ಲೇಔಟ್, ಜೆ.ಪಿ. ನಗರ, ಮೈಸೂರು
9538956060, 8660108796

ಬೇಕಾಗಿದ್ದಾರೆ
ಕಲ್ಯಾಣ ಮಂಟಪದಲ್ಲಿ ಕೆಲಸ ಮಾಡಲು ಸೂಪರ್‌ವೈಸರ್ ಬೇಕಾಗಿದ್ದಾರೆ. ವಯೋಮಿತಿ 35 ಮೇಲೆ. ಮೈಸೂರಿನವರಿಗೆ ಆದ್ಯತೆ.
Mob: 7337716671

HOUSE FOR RENT
South Facing I Floor, 3 BHK, Granite Flooring attached bathroom Store Room, Open Kitchen Solar, Ramakrishna Nagar H.Block, Health Block
8310884681

WANTED
1) Marketing Executive Male with 2 Wheeler,
2) Office Accountant/ Assistant with Tally,
3) Helpers Required
Mail-bilvagreen@gmail.com
9945229013

A TO Z
WE BUY
We buy household articles, furniture, old vessels, electric items, UPS Battery, Generator and other scrap items.
Call: 9900945675

REQUIRED
Female and male telecallers. Ready to work in financial services. Qualification: SSLC and above with computer basic knowledge & salary around 10,000. Work place: SLV ENTERPRISES, #2060, 2nd Floor, Vaibhav Complex, Madvachar Road, Near 101 Ganapati Temple, Agrahara, Mysore-570 004
9513965656, 0821-3539085

Diploma Tuitions
Crash course for Dec-23 exam
1) Engg. Mathematics C-20 M1, M2 - C-15, C-9
2) All branches, all subjects (C-20, C-15, C-9)
Money back if you
Class starts from 4th Dec.
Sathisha Coaching Academy
Mob: 8951434968

ಕೆಲಸಕ್ಕೆ ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, 10th, ITI, SSLC, PUC, Diploma, Any Degree (pass or fail)
ಸ್ಯಾಲರಿ: 18,000 – 30,000
ಪುರುಷ ಅಭ್ಯರ್ಥಿಗಳಿಗೆ ಮಾತ್ರ
ತರಬೇತಿ ಸಮಯದಲ್ಲಿ ವೇತನ ಕೊಡಲಾಗುವುದು.
ವಯಸ್ಸು: 35 Below
8762361391, 9880151303



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

HOUSE FOR SALE
30X40 No.28, N/Face Ground & First Floor ISHWRYA layout, JP Nagar Near Siddalingeshwara Layout II Stage
Price : 1.45 Cr.
(Brokers Excuse)
9448271349

EXCELLENT OPPORTUNITY
For Retired /VRS Officials Businessman, Home Makers and unemployed graduates to earn attractive Salary incentives and Foreign trip by working in a Reputed Banking group Excellent growth opportunities Earnings with Flexible working hours interested persons may contact us
9844389026

FOR SALE
30 GUNTAS LAND
West Facing, Ring Road Lalitadripura, Mysuru
Only Genuine Buyers Contact:
80738 98525

HOUSE FOR SALE at JP Nagar
4 BHK Duplex New House, 30x40, MUDA, E/F Door, Near Police Booth,
Price - Rs 1.70 cr
(Brokers excuse)
8660105902

HOUSE FOR SALE at Vijayanagar
3 BHK Duplex New House, MUDA, N/F Door, Near Marimallappa School,
Price - 84 Lakhs/1.59 Cr
8660105902

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

neem BOND PLATINUM®
PLY / DOORS @ FACTORY RATES
MANUFACTURER 10 YEARS WARRANTY
9901291267 / 9845426862

HOUSE FOR RENT
1BHK AND 2BHK 1st FLOOR / 2nd FLOOR NEAR VIVEKANANDA NAGAR CIRCLE, MYSORE- 570023
9483434392
9972042115

ಬೇಕಾಗಿದ್ದಾರೆ
ಫೀಲ್ಡ್ ಆಫೀಸರ್–1, (ದ್ವಿಚಕ್ರ ವಾಹನ ಹೊಂದಿರಬೇಕು – ಪದವಿ ಆಗಿರಬೇಕು.) ಸೆಕ್ಯೂರಿಟಿ ಗಾರ್ಡ್–5 (ವಯಸ್ಸು 25 ರಿಂದ 45) ಮೈಸೂರು ಸಿಟಿ, ಮೇಟಗಳ್ಳಿ, ಒಂಟಿಕೊಪ್ಪಲು, ಸುತ್ತಮುತ್ತ, 12 ಗಂಟೆ ಡ್ಯೂಟಿ ಆಕರ್ಷಕ ಸಂಬಳವಿರುತ್ತದೆ. ಬ್ಯಾಂಕ್‌ಗೆ ಅಟೆಂಡರ್–1, ಬ್ಯಾಂಕ್ ಕೆಲಸದಲ್ಲಿ ಅನುಭವ ಹೊಂದಿರಬೇಕು. ಆಫೀಸ್ ಅಸಿಸ್ಟೆಂಟ್/ಅಕೌಂಟ್ ಅಸಿಸ್ಟೆಂಟ್–1 ಮೇಟಗಳ್ಳಿ, ಒಂಟಿಕೊಪ್ಪಲು, ಸುತ್ತಮುತ್ತ
9972837203, 9036745292

SITE FOR SALE
60x40 East Facing Dattagalli, near Christ public school. Broker Excuse, Contact:
9341624462

100% TEAK WOOD FACTORY FINISH DOORS @ DEPOT RATES



10 YEARS WARRANTY
www.ssbuildmart.com
9901291267
9845426862

FOR SALE
1) 30x40 30@50 near Defence Apartment kote road
2) Commercial 30@43 gokulam
3) 30@40 Narasipura road
4) Commercial 50@80 Bogadi road
5) 40&70 House Vidyaranya puram
6) 10 Guntas Land doctor lyt attach
New and old house city sarrounding
Prakruthi properties
9538690359, 9035990359

ಕೇರಳ ಪ್ರವಾಸ
ಒಟ್ಟು 4 ದಿನಗಳು, ಹೊರಡುವ ದಿನಾಂಕ: 08/ಡಿಸೆಂಬರ್/2023, ನೋಡುವ ಸ್ಥಳಗಳು: ಅನಂತ ಪದ್ಮನಾಭ ದೇವಸ್ಥಾನ, ಕೋವಲಂ ಬೀಚ್, ಜಟಾಯು ಅರ್ತ್‌ಸೆಂಟರ್, ಗುರುವಾಯೂರು, ಅಲ್ಲಪೆ, ಕೊಚ್ಚಿನ್ ಮರಿನ್ ಡ್ರೈವ್, ಅತಿರಪಿಲ್ಲೆ ವಾಟರ್ ಫಾಲ್ಸ್, ಊಟ, ತಿಂಡಿ, ಕಾಫಿ/ಟೀ ಮತ್ತು ಮಿನರಲ್ ವಾಟರ್ ಸೇರಿರುತ್ತದೆ. ಫ್ಯಾಮಿಲಿಗೆ ಪ್ರತ್ಯೇಕ ರೂಮ್ ಇರುತ್ತದೆ. ಎಲ್ಲಾ ಸೇರಿ ಒಬ್ಬರಿಗೆ 8000/– ರೂಪಾಯಿಗಳು
7022271023

NO TOUCH NO DRUG THERAPY
ಉಚಿತ YPV ಚಿಕಿತ್ಸೆ ಅಧಿವೇಶನ
3rd Dec 10 am to 12.30 pm
9481067118

SITE FOR RENT
Industrial Site 90x120 North Face 10,800 Sqft opposite to STAR HYUNDAI service Centre Bannimantap Extension Mysore-570015
8088887802

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಸಂಬಳ 9000 ಸಮಯ ಬೆಳಿಗ್ಗೆ 9.30 ರಿಂದ ರಾತ್ರಿ 9.00 ರವರೆಗೆ ಸ್ಥಳ: ಅಗ್ರಹಾರ & ಕೆ.ಜಿ.ಕೊಪ್ಪಲ್ ಮೈಸೂರು. ಸ್ಥಳೀಯರಿಗೆ ಆದ್ಯತೆ
9986311444
9986322444

1st FLOOR TO-LET
ಬಾಡಿಗೆಗೆ ದೊರೆಯುತ್ತದೆ
Office Purpose, Bank Purpose Play Home Perpose Space Available (1200 Sqft) Siddarth Nagar, Kamangate T.N.Pura Main Road, B.D.S Complex, Mysore
7353682106, 9482139665

ಫರ್ನಿಷಿಂಗ್ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗರು ಮತ್ತು ಮಹಿಳೆಯರು
Salary - 8K to 15K
IRWIN Road & Sharadadevi Nagar, Mysore
8050744784

HOUSE FOR SALE
30X40 Single Floor Near Marimalappa School Vijayanagar 4th Stage, 2nd Phase
9845809369

ಹೊಸ ಮನೆ ಮಾರಾಟಕ್ಕಿದೆ ಹಾಗೂ ಸೈಟುಗಳು ಮಾರಾಟಕ್ಕಿವೆ.
ಶ್ರೀರಾಂಪುರ ರಿಂಗ್ ರಸ್ತೆ ಹಾಗೂ ಶ್ರೀನಗರ ಹಿಂಭಾಗ ಮೈಸೂರು
8050345574

ನಮ್ಮಲ್ಲಿ ಬಾದಾಮಿ, ಗೋಡಂಬಿ, ದ್ರಾಕ್ಷಿ, ಪಿಸ್ತಾ, ಅಂಜೂರ, ಖರ್ಜೂರ ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ.
(5 ಕಿ.ಮೀ ವರೆಗೂ ಉಚಿತ ಡೆಲಿವರಿ)
ಸಂಪರ್ಕಿಸಿ:
ರಾಜ್‌ಗುರು ಡ್ರೈಫ್ರೂಟ್ಸ್
ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342, 9845460211

MATCH MAKERS, BRIDE / GROOM
ಮದುವೆಗೆ ವಧು/ವರರ ಆಯ್ಕೆಗೆ
ಎಲ್ಲಾ ಜಾತಿಯ Govt Job, Private, ಡಾಕ್ಟರ್, ಇಂಜಿನಿಯರ್, ಬ್ಯುಸಿನೆಸ್ ಎಲ್ಲಾ ಡಿಗ್ರಿಗಳು, ಎಲ್ಲಾ ವಿದ್ಯಾಭ್ಯಾಸ ದವರು ನಮ್ಮ ಕಛೇರಿಯಲ್ಲಿರು ಕರ್ನಾಟಕದಾದ್ಯಂತ ಇರುವ ಅಂತರ್ಜಾತಿ ವಧು/ವರರು ಮದುವೆ ಆಯ್ಕೆಗೆ ನೇರ ಭೇಟಿ ನೀಡಿ 1st Marriage ಡೈವೋರ್ಸ್‌ಗಳು, ವಿಧವೆ/ವಿಧುರರ ಆಯ್ಕೆಗೆ. 600 ಸ್ವತಂತ್ರ್ಯ ವಧುಗಳಿಗೆ ವರಬೇಕು. ಬಡವರ ವಧುಗಳಿಗೆ ಉಚಿತ+ಮದುವೆ+ಉದ್ಯೋಗ + ವಸತಿ
7975728012

ಮನೆ ಮಾರಾಟಕ್ಕಿದೆ
ಮೈಸೂರಿನ ಶ್ರೀನಗರ ಬಿ ಬ್ಲಾಕ್‌ನಲ್ಲಿ 30x40 ಅಳತೆಯಲ್ಲಿರುವ ವಾಸ್ತು ಪ್ರಕಾರ ನಿರ್ಮಿಸಿರುವ ಸುಸಜ್ಜಿತವಾದ ಮನೆ ಮಾರಾಟಕ್ಕಿದೆ. 2BHK
6361061762
8618737198

ಬೇಕಾಗಿದ್ದಾರೆ
ಮಂಡ್ಯದಲ್ಲಿ ಫೀಲ್ಡ್ ವರ್ಕ್ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು 20 ರಿಂದ 40ಒಳಗೆ ಸಂಪರ್ಕಿಸಿ:
99380541232
8310853004

ವಿಶ್ವಾಸಾರ್ಹ ಬ್ಯಾಂಕಿಂಗ್ ಸಂಸ್ಥೆಯಲ್ಲಿ ಉದ್ಯೋಗ ಅವಕಾಶಕ್ಕೆ ಸೆಮಿನಾರ್ ಏರ್ಪಡಿಸಲಾಗಿದೆ.
ಕೇಂದ್ರ/ರಾಜ್ಯ/ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ನಿವೃತ್ತರಾದವರಿಗೆ ಹಾಗೂ ಆಸಕ್ತ ಮಹಿಳೆಯರು ವಯಸ್ಸು 30 ವರ್ಷ ಮೇಲ್ಪಟ್ಟು, 2) ವಿದ್ಯಾರ್ಹತೆ: SSLC above Any Degree. ದಾಖಲಾತಿಗಳು: ಆಧಾರ್, ವಿದ್ಯಾರ್ಹತೆ, ಬ್ಯಾಂಕ್ ಪಾಸ್ ಬುಕ್ (1ನೇ ಪೇಜ್), 4) ಪಾನ್ ಕಾರ್ಡ್, 5) ಫೋಟೋ ಸೆಮಿನಾರ್ ನಡಯುವ ಸ್ಥಳ: ಮೌರ್ಯ ರೆಸಿಡೆನ್ಸಿ ಹೋಟೆಲ್ ಉಡಲ್ಯಾಂಡ್ ಟಾಕೀಸ್ ಹತ್ತಿರ, ದಿನಾಂಕ: 05–12–2023 ಸಮಯ: 11 ಗಂಟೆಗೆ, Followed by Lunch
9449068132, 7022034200

WANTED
Office Assistant Office Executive Teachers (F) for Pre-School
7795301535
9448031964

ಅಡುಗೆ ಕೆಲಸದವರು ಬೇಕಾಗಿದ್ದಾರೆ
ದಟ್ಟಗಳ್ಳಿ ರೋಟರಿ ಸ್ಕೂಲ್ ಪಕ್ಕ ಇರುವ ಮನೆ ಒಂದಕ್ಕೆ ನುರಿತ ಮಹಿಳಾ ಅಡುಗೆಯವರೊಬ್ಬರು ಬೇಕಾಗಿದ್ದಾರೆ.
(Veg & Non Veg)
9448648341
9008558030

ತಕ್ಷಣ ಕೆಲಸ
ಮೈಸೂರಿನ ಹೆಸರಾಂತ ಹೆಲ್ತ್ ಕೇರ್ ಸಂಸ್ಥೆಗೆ ಮಹಿಳೆಯರು, ಪುರುಷರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ, ಊಟ ವಸತಿ ಉಚಿತದೊಂದಿಗೆ ಸಂಬಳ 12,000 ರಿಂದ 18,000 ಇರುತ್ತದೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ)
9739292222, 9035113222

ಬಟ್ಟೆ ಅಂಗಡಿ/ಪ್ರೀ–ಸ್ಕೂಲ್/ಹೋಟೆಲ್/ಬ್ಯೂಟಿ ಪಾರ್ಲರ್ ಮಾರಾಟಕ್ಕಿದೆ. ಎಲ್ಲಾ ರೀತಿಯ ಚಾಲ್ತಿಯಲ್ಲಿರುವ ವ್ಯಾಪಾರದ ಖರೀದಿ ಮಾರಾಟಕ್ಕಾಗಿ ಕರೆ ಮಾಡಿ
9036822577

ಮನೆ ಕಟ್ಟಿಕೊಡಲಾಗುವುದು
ಒಂದು ಚದುರಕ್ಕೆ ರೂ. 1,70,000/– ನಂತೆ ಎಲ್ಲಾ ನಗರ (ಸಿಟಿ) ಹಾಗೂ ಎಲ್ಲಾ ಹಳ್ಳಿಗಳಲ್ಲಿ ಕಟ್ಟಿಕೊಡಲಾಗುವುದು.
9620377533

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತದೆ. ಬೇಕಾಗುವ ದಾಖಲಾತಿಗಳು: 1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್‌ಬುಕ್. ಸ್ಥಳ: ಮೌರ್ಯ ರೆಸಿಡೆನ್ಸಿ, ಶ್ರೀ ಹರ್ಷ ರಸ್ತೆ, ಮೈಸೂರು. ದಿ.5–12–23, ಸಮಯ: ಬೆಳಿಗ್ಗೆ 11.00. Followed by Lunch
9448376423, 9886883858

ಹೊಸ ಡ್ಯೂಪ್ಲೆಕ್ಸ್ ಮನೆ ಖರೀದಿಗೆ ಲಭ್ಯವಿದೆ
#222, 30x40 ಉತ್ತರ ದಿಕ್ಕಿನ ಸೈಟಿನಲ್ಲಿ 3BHK ಅಟ್ಯಾಚ್ ಬಾತ್, ಆಲ್ ಟೀಕ್ ಇಟಾಲಿಯನ್ ಕಿಚನ್, ಕಾರ್‌ಪಾರ್ಕ್ ಸೌಲಭ್ಯವಿರುವ ಮನೆ ಕಂದಾಯನಗರ 1ನೇ ಹಂತ, ಶ್ರೀರಾಂಪುರದಲ್ಲಿ ಖರೀದಿಗೆ ಲಭ್ಯವಿದೆ.
9901899355

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಕೈಗಾರಿಕಾ ಪ್ರದೇಶ ಕೂರ್ಗಳ್ಳಿ, ಮೇಟಗಳ್ಳಿ, ಹೆಬ್ಬಾಳು, ದಟ್ಟಗಳ್ಳಿ, ಜನತಾನಗರ ಬೋಗಾದಿ ಇಲ್ಲಿ ಕೆಲಸ ಮಾಡಲು, ಸೆಕ್ಯೂರಿಟಿ ಗಾರ್ಡ್, helper, CNC Machine Operator, Computer Data Entry Operator, TeleCaller, ಕೆಲಸ ಮಾಡಲು ವಿದ್ಯಾಭ್ಯಾಸ, 7th Pass, 10 PUC, Any Degree ITI, Deploma ಪಾಸ್ & ಫೇಲ್ ಬೇಕಾಗಿದ್ದಾರೆ. ESI & PF ಸೌಲಭ್ಯವಿದೆ ವೇತನ 12000 ರಿಂದ 15000 ವರೆಗೆ
9036461347, 9108180329

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಇನ್ಫೋಸಿಸ್ ನಾರಾಯಣಮೂರ್ತಿಯವರದ್ದು ಸಂವಿಧಾನ ವಿರೋಧಿ ಹೇಳಿಕೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಮೈಸೂರು, ಡಿ.1(ಎಂಟಿವೈ)– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬೆರಳೆಣಿಕೆಯಷ್ಟು ಉದ್ಯಮಿಗಳ ಸಾವಿರಾರು ಕೋಟಿ ರೂ. ಸಾಲ ಮನ್ನಾ ಮಾಡಿದಾಗ ಯಾವುದೇ ಪ್ರತಿಕ್ರಿಯಿಸದ ಇನ್ಫೋಸಿಸ್ ಸಂಸ್ಥೆ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಇದೀಗ ರಾಜ್ಯ ಸರ್ಕಾರ ಜನರಿಗೆ ನೀಡುತ್ತಿರುವ ಉಚಿತ ಯೋಜನೆಗಳ ವಿರುದ್ಧ ಮಾತುಗಳನ್ನಾಡಿರುವುದು ಸಾಮಾಜಿಕ ನ್ಯಾಯ, ಸಂವಿಧಾನ ವಿರೋಧಿ ಧೋರಣೆಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದಿರುವ ದಲಿತರು, ಹಿಂದುಳಿದವರು, ತುಳಿತಕ್ಕೊಳಗಾದ ಸಮಾಜದವರನ್ನು ಮೇಲೆತ್ತಲು ಸಂವಿಧಾನದಲ್ಲಿ ಹಲವು ವಿಚಾರ ಪ್ರಸ್ತಾಪಿಸಲಾಗಿದೆ. ಸಂವಿಧಾನದ ಆಶಯದಂತೆ ರಾಜ್ಯ ಸರ್ಕಾರ ಅರ್ಹರಿಗಾಗಿ ಉಚಿತ ಗ್ಯಾರಂಟಿ ಯೋಜನೆ ಜಾರಿಗೊಳಿಸಿದೆ ಆದರೆ ಇನ್ಫೋಸಿಸ್ ಸಂಸ್ಥೆಯ ನಾರಾಯಣಮೂರ್ತಿ ಅವರು ಗ್ಯಾರಂಟಿ ಯೋಜನೆಗಳನ್ನು ವಿರೋಧಿಸಿದ್ದಾರೆ. ಜನರಿಗೆ ಉಚಿತವಾಗಿ ಏನನ್ನೂ ನೀಡಬಾರದು ಎಂದಿದ್ದಾರೆ. ಗ್ಯಾರಂಟಿ ಯೋಜನೆ ಟೀಕಿಸುವುದು ಸಾಮಾಜಿಕ ನ್ಯಾಯದ ವಿರುದ್ಧದ ವರ್ತನೆಯಾಗಿದೆ ಎಂದು ಕಿಡಿಕಾರಿದರು.

ಈಗ ಟೀಕೆ ಮಾಡಿರುವ ನಾರಾಯಣಮೂರ್ತಿ ಅವರು ಪ್ರಧಾನಿ ನರೇಂದ್ರಮೋದಿ ಅವರು ದೊಡ್ಡ ದೊಡ್ಡ ಉದ್ಯಮಿಗಳ ಸಾಲ ಮನ್ನಾ ಮಾಡುವಾಗ ಪ್ರಶ್ನೆ ಮಾಡಬೇಕಿತ್ತು. ಉದ್ಯಮಿಗಳ ಸಾಲ ಮನ್ನಾ ಮಾಡುವುದರ ಬದಲಿಗೆ ವ್ಯವಸಾಯಕ್ಕೆ, ಕೃಷಿ ಚಟುವಟಿಕೆಗಳಿಗೆ, ಆರ್ಥಿಕವಾಗಿ ಹಿಂದುಳಿದ ವರ್ಗಗಳ ಜನರ ಅಭಿವೃದ್ಧಿಗೆ ಬಳಸಬೇಕೆಂದು ಹೇಳಿದ್ದರೆ ಶಹಬ್ಬಾಸ್‌ಗಿರಿ ಕೊಡಬಹುದಾಗಿತ್ತು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಗ್ಯಾರಂಟಿ ಯೋಜನೆಗಳು ಜಾರಿಯಾದ ಮೇಲೆ 1.32 ಕೋಟಿ ಕುಟುಂಬದ ಜನರು ಸ್ವಾವಲಂಬನೆಯತ್ತ ಹೆಜ್ಜೆ ಇಟ್ಟಿದ್ದಾರೆ. ಇದನ್ನು ಪ್ರಶಂಸಿಸದೆ ವಿರೋಧ ಮಾಡಿರುವುದು ಸರಿಯಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ಇಂತಹ ಜನರು ಇದ್ದೇ ಇರುತ್ತಾರೆ. ಇದಕ್ಕೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ದೇಶದ ಸಂಪತ್ತು ನಾಲ್ಕೈದು ಜನರ ಬಳಿ ತುಂಬಿ ತುಳುಕಾಡುವ ಬದಲಿಗೆ ಎಲ್ಲರಿಗೂ ಹಂಚಿಕೆ ಆಗಬೇಕು. ಯಾರೋ ನಾಲ್ಕು ಜನರ ಕೈನಲ್ಲಿ ಸಂಪತ್ತು ಇದ್ದರೆ ಬಡವರ ಗತಿ ಏನು? ಬಡವರು ಅಭಿವೃದ್ಧಿ ಆಗುವುದು ಬೇಡವೇ ಎಂದು ಪ್ರಶ್ನಿಸಿದರು.

ಬಿಜೆಪಿ ವಿರುದ್ಧದ ಅಲೆ: ಪಂಚ ರಾಜ್ಯಗಳ ಚುನಾವಣೆಯ ಮತದಾನೋತ್ತರ ಸಮೀಕ್ಷೆ ನೋಡಿದರೆ ಬಿಜೆಪಿ ವಿರುದ್ಧ ಅಲೆ ಆರಂಭವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಒಂಭತ್ತು ವರ್ಷದಿಂದ ಕೇವಲ ಮಾತು, ಸುಳ್ಳು ಭರವಸೆಗಳನ್ನು ನೀಡುತ್ತಲೇ ಬಂದರೆ ಹೊರತು ಬೇರೇನೂ ಅಭಿವೃದ್ಧಿ ಕೆಲಸ ಮಾಡಲಿಲ್ಲ. ಧರ್ಮ, ಜಾತಿಯ ಹೆಸರಿನಲ್ಲಿ ರಾಜಕಾರಣ ಮಾಡುವುದು ಹೆಚ್ಚು ದಿನಗಳ ಕಾಲ ನಡೆಯಲ್ಲ. ದೇಶದ ಬಡತನ ನಿವಾರಣೆ, ಅಭಿವೃದ್ಧಿ, ಆರ್ಥಿಕತೆ ಸುಧಾರಣೆ ಮಾಡಲಿಲ್ಲ. ನೋಟು ಅಮಾನ್ಯೀಕರಣ ಮಾಡಿದ ಮೇಲೆ ದೇಶದ ಜನರು ಸಂಕಷ್ಟಕ್ಕೆ ಸಿಲುಕಿದರೂ ಸ್ಪಂದಿಸಲಿಲ್ಲ. ಸುಳ್ಳು ಭರವಸೆಗಳನ್ನೇ ಹೇಳಿ ಮೋಡಿ ಮಾಡಲಾಗದು. ಮುಂದಿನ ಲೋಕಸಭಾ ಚುನಾವಣೆಗೆ ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ದಿಕ್ಸೂಚಿ ಅಲ್ಲದೆ ಇದ್ದರೂ ಬಿಜೆಪಿ ವಿರುದ್ಧ ಅಲೆ ಶುರುವಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ನುಡಿದರು. ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಸಿಐಡಿಗೆ ವಹಿಸಿದೆ. ಜಿಲ್ಲೆಯಲ್ಲಿ ತಂಡ ರಚನೆ ಮಾಡಿ ಪ್ರತಿಯೊಂದು ಕ್ಲಿನಿಕ್, ಸ್ಕ್ಯಾನಿಂಗ್ ಸೆಂಟರ್ ಪರಿಶೀಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಹೇಳಲಾಗಿದೆ. ಮತ್ತೆ ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಅಗತ್ಯ ಕ್ರಮ ಜರುಗಿಸಲಿದೆ ಎಂದರು.

ಇಂದು ಲಾ ಗೈಡ್ ಕ್ಯಾಲೆಂಡರ್, ಡೈರಿ ಬಿಡುಗಡೆ

ಮೈಸೂರು, ಡಿ.1– ಲಾ ಗೈಡ್ ಕನ್ನಡ ಮಾಸಪತ್ರಿಕೆ ವತಿಯಿಂದ 2024ರ ಕ್ಯಾಲೆಂಡರ್, ಡೈರಿ ಬಿಡುಗಡೆ ಮತ್ತು ಪತ್ರಿಕೆಯ ವೆಬ್ ಆವೃತ್ತಿ ಲೋಕಾರ್ಪಣೆ ಕಾರ್ಯಕ್ರಮ ಮೆಟ್ರೋಪೋಲ್ ಹೋಟೆಲ್‌ನಲ್ಲಿ ಶನಿವಾರ(ಡಿ.2) ಬೆಳಗ್ಗೆ 10.30ಕ್ಕೆ ನಡೆಯಲಿದೆ.

ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಸಿ.ಜಿ.ಹುನಗುಂದ ಅವರು ಲಾ ಗೈಡ್ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆ ಮಾಡಲಿದ್ದು, ಡೇಟಾ ಸೆಕ್ಯುರಿಟಿ ಕೌನ್ಸಿಲ್ ಆಫ್ ಇಂಡಿಯಾದ ಹಿರಿಯ ನಿರ್ದೇಶಕ ಕೆ.ವೆಂಕಟೇಶ್ ಮೂರ್ತಿ ಲಾ ಗೈಡ್ ವೆಬ್ ಆವೃತ್ತಿಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಸಮಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತರಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರನ್ನು ಅಭಿನಂದಿಸಲಾಗುತ್ತದೆ. ಇದೇ ವೇಳೆ ಸಿಎಫ್‌ಟಿಆರ್‌ಐ ವಿಜ್ಞಾನಿ ಶೈಲಜಾ ಧರ್ಮೇಶ್, ಕನ್ನಡ ಪ್ರಭ ಕಾರ್ಯ ನಿರ್ವಾಹಕ ಸಂಪಾದಕ ಅಂಶಿ ಪ್ರಸನ್ನ ಕುಮಾರ್ ಸೇರಿದಂತೆ ಹಲವು ಹಿರಿಯ ವಕೀಲರನ್ನು ಸನ್ಮಾನಿಸಲಾಗುವುದು. ನಿವೃತ್ತ ಪೊಲೀಸ್ ಮಹಾ ನಿರೀಕ್ಷಕ ಡಿ.ಎನ್.ಮುನಿಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹಾಗೂ ಲಾ ಗೈಡ್ ಮಾಸಪತ್ರಿಕೆಯ ಪ್ರಧಾನ ಸಂಪಾದಕರೂ ಆದ ಅರಕಲಗೂಡು ಶಾಸಕ ಎ.ಮಂಜು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್ ಹಾಗೂ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ಲಾಗೈಡ್ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ತಿಳಿಸಿದ್ದಾರೆ.

ರೇಪ್ ಕೇಸ್ ಹಾಕುವುದಾಗಿ ಬ್ಲಾಕ್‌ಮೇಲ್; ಯುವಕ ಆತ್ಮಹತ್ಯೆ

ಕೊಳ್ಳೇಗಾಲ, ಡಿ.1–ರೇಪ್ ಕೇಸ್ ಹಾಕುವುದಾಗಿ ಬ್ಲಾಕ್‌ಮೇಲ್ ಮಾಡಿದ್ದರಿಂದ ಹೆದರಿದ ನವ ವಿವಾಹಿತನೋರ್ವ ತಂದೆಯ ಮೊಬೈಲ್‌ಗೆ ಡೆತ್ ಮೆಸೇಜ್ ರವಾನಿಸಿ ನೇಣಿಗೆ ಶರಣಾದ ಘಟನೆ ಕೊಳ್ಳೇಗಾಲ ತಾಲೂಕು ಕಜ್ಜಿಹುಂಡಿ ಗ್ರಾಮದಲ್ಲಿ ನಡೆದಿದೆ.

ಲಿಂಗರಾಜು ಎಂಬುವರ ಪುತ್ರ ಪ್ರಸನ್ನ (31) ಆತ್ಮಹತ್ಯೆಗೆ ಶರಣಾದವನಾಗಿದ್ದು, ಈತ ಕಳೆದ ಅ.22ರಂದು (ತಿಂಗಳ ಹಿಂದೆಯಷ್ಟೇ) ಹನೂರು ತಾಲೂಕಿನ ಗ್ರಾಮವೊಂದರ ಯುವತಿಯೊಂದಿಗೆ ವಿವಾಹವಾಗಿದ್ದ. ಬೆಂಗಳೂರಿನಲ್ಲಿ ಅಡುಗೆ ಕ್ಯಾಟರಿಂಗ್ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದ ಈತ ಮದುವೆಯಾದ ಒಂದು ವಾರದಲ್ಲೇ ಪತ್ನಿಯನ್ನು ತವರಿನಲ್ಲಿ ಬಿಟ್ಟು ಕೆಲಸಕ್ಕಾಗಿ ಬೆಂಗಳೂರಿಗೆ ಹೋಗಿದ್ದ. ನ.28ರಂದು ಬೆಂಗಳೂರಿನಿಂದ ಹಿಂತಿರುಗಿದ ಈತ, 29ರಂದು ತನ್ನ ಪತ್ನಿಯನ್ನು ತವರಿನಿಂದ ಕರೆತರುವುದಾಗಿ ತಂದೆ–ತಾಯಿಗೆ ಹೇಳಿ ಹೊರಟಿದ್ದಾನೆ. ಈತನ ತಂದೆ–ತಾಯಿ ಸಂಬಂದಿಕರ ಕಾರ್ಯಕ್ಕಾಗಿ ಹೋಗಿದ್ದ ವೇಳೆ ಮತ್ತೆ ಮನೆಗೆ ಬಂದಿದ್ದ ಆತ ನೇಣಿಗೆ ಶರಣಾಗಿದ್ದಾನೆ. ಅಂದು ಮಧ್ಯಾಹ್ನ 1.30ರಲ್ಲಿ ಮನೆಗೆ ಹಿಂದಿರುಗಿದ ಪ್ರಸನ್ನನ ತಂದೆ–ತಾಯಿ ಮಗ ನೇಣು ಬಿಗಿದುಕೊಂಡಿರುವುದನ್ನು ನೋಡಿದ್ದಾರೆ. ಇದೇ ವೇಳೆ ತಂದೆ ಲಿಂಗರಾಜು ಮೊಬೈಲ್‌ಗೆ ಪ್ರಸನ್ನ ಮೆಸೇಜ್ ರವಾನಿಸಿರುವುದು ಗೊತ್ತಾಗಿದೆ. ಅವರಿಗೆ ಓದಲು ಬಾರದ ಕಾರಣ ಸಂಬಂಧಿಕರಿಗೆ ಮೊಬೈಲ್ ಕೊಟ್ಟು ಓದಿಸಿದಾಗ ಅದರಲ್ಲಿ ಪ್ರಸನ್ನ, ತಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವಾಗ ಪರಿಚಯವಾದ ಹೆಬ್ಬಗೋಡಹಳ್ಳಿಯ ರವಿ, ಓರ್ವ ಯುವತಿ, ಮತ್ತಿಬ್ಬರು ಸೇರಿ ನನ್ನ ಮೇಲೆ ರೇಪ್ ಕೇಸ್ ಹಾಕುವುದಾಗಿ ಬೆದರಿಸಿ ಕಳೆದ ಮೂರು ತಿಂಗಳಿಂದ 2 ಲಕ್ಷ ರೂ. ಪಡೆದುಕೊಂಡಿದ್ದಾರೆ. ಮತ್ತೆ ನ.28ರಂದು 50 ಸಾವಿರ ರೂ. ಕೊಡಬೇಕೆಂದು, ಇಲ್ಲದಿದ್ದರೆ ರೇಪ್ ಕೇಸ್ ಹಾಕುವುದಾಗಿ ಬ್ಲಾಕ್‌ಮೇಲ್ ಮಾಡಿದರು. ಇದರಿಂದ ಸಾಯುತ್ತಿದ್ದೇನೆ ಎಂದು ಬರೆದಿತ್ತಲ್ಲದೇ, ರವಿಯ ಮೊಬೈಲ್ ಸಂಖ್ಯೆ (895164684) ನಮೂದಿಸಲಾಗಿತ್ತು. ಈ ಸಂಬಂಧ ಮಾಂಬಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅಪಘಾತದಲ್ಲಿ ವಿದ್ಯಾರ್ಥಿ ಸಾವು

ಮೈಸೂರು, ಡಿ.1–ಬೋಗಾದಿಯ ರೈಲ್ವೇ ಬಡಾವಣೆಯ ವಿದ್ಯಾರ್ಥಿ ಕೆ.ಎನ್.ವಿಕಾಸ್(22) ಎಂಬುವರು ನ.30ರಂದು ಬೆಳಗ್ಗೆ 10 ಗಂಟೆ ಸುಮಾರಿನಲ್ಲಿ ಶ್ರೀರಾಂಪುರ ಕಡೆಯಿಂದ ಮಲೆಗಾರ ಮಾರಮ್ಮ ದೇವಸ್ಥಾನದ ಕಡೆಗೆ ಕಾರಿನಲ್ಲಿ (ಕೆಎ 11 ಎಂ 9941) ಅತೀ ವೇಗವಾಗಿ ತೆರಳುತ್ತಿದ್ದಾಗ ಟಿ.ಎಸ್. ಛತ್ರದ ಬಳಿ ನಿಯಂತ್ರಣ ಕಳೆದುಕೊಂಡು ಕಾರು ರಸ್ತೆಯ ಎಡಕ್ಕೆ ಚಲಿಸಿ ಸರ್ವೀಸ್ ರಸ್ತೆಯ ವಿಭಜಕದ ಮೇಲಿಂದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ವಿಕಾಸ್ ತೀವ್ರವಾಗಿ ಗಾಯಗೊಂಡಿದ್ದಾರೆ. ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ, ಅದೇ ದಿನ 3 ಗಂಟೆಗೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಪ್ರಕರಣ ಕೆ.ಆರ್.ಸಂಚಾರ ಠಾಣೆಯಲ್ಲಿ ದಾಖಲಾಗಿವೆ.

ನಿಧನ



ನೇಹಾ ಎಸ್.ರಾಜು

ಹಾಸನ, ಡಿ. 1– ಹಾಸನ ಜಿಲ್ಲೆಯ 'ಮೈಸೂರು ಮಿತ್ರ' ಪ್ರತಿನಿಧಿ ಸೋಮೇಶ್ ಅವರ ಪುತ್ರಿ ನೇಹಾ ಎಸ್. ರಾಜು(17) ಶುಕ್ರವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಪ್ರತಿಭಾನ್ವಿತ ವಿಧ್ಯಾರ್ಥಿನಿಯಾಗಿದ್ದ ಈಕೆ, ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 624 ಅಂಕದೊಂದಿಗೆ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಳು. ಕೆಯುಡಬ್ಲ್ಯೂಜೆ ನಡೆಸಿದ ರಾಜ್ಯ ಮಟ್ಟದ ಮಕ್ಕಳ ಪ್ರತಿಭಾ ಪುರಸ್ಕಾರಕ್ಕೂ ಪಾತ್ರಳಾಗಿದ್ದ ಈಕೆ, ಅನಾರೋಗ್ಯದಿಂದಾಗಿ ಬಹು ದಿನಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಇಂದು ರಾತ್ರಿ ಕೊನೆಯುಸಿರೆಳೆದಿದ್ದಾಳೆ. ಮಗಳ ಅಂತಿಮ ಆಸೆಯಂತೆ ಈಕೆಯ ತಂದೆ ಸೋಮೇಶ್ ಮತ್ತು ಅವರ ಪತ್ನಿ, ಪುತ್ರಿ ನೇಹಾಳ ದೇಹವನ್ನು ಹಾಸನ ಮೆಡಿಕಲ್ ಕಾಲೇಜ್‌ಗೆ ಶನಿವಾರ ನೀಡಲಿದ್ದಾರೆ.

ಎಸ್.ಸಿ.ಶಂಕರನ್



ಮೈಸೂರು, ಡಿ.1– ಸಿಐಐಎಲ್‌ನ ನಿವೃತ್ತ ಮುಖ್ಯ ಛಾಯಾಗ್ರಾಹಕ, ಗೋಕುಲಂ ನಿವಾಸಿ ಎಸ್.ಸಿ.ಶಂಕರನ್(91) ಅವರು ಶುಕ್ರವಾರ ನಿಧನರಾದರು. ಇವರು ಪತ್ನಿ, ಬನುಮಯ್ಯ ಕಾಲೇಜು ನಿವೃತ್ತ ಪ್ರಾಧ್ಯಾಪಕಿ ಶ್ರೀಮತಿ ಟಿ.ಆರ್.ವಿಜಯ, ಪುತ್ರ, ಸೊಸೆ, ಮೊಮ್ಮಗಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶಂಕರನ್ ಅವರ ದೇಹವನ್ನು ಕೆಆರ್‌ಎಸ್ ರಸ್ತೆಯ ಪಂಚಕರ್ಮ ಆಸ್ಪತ್ರೆಗೆ ದಾನ ಮಾಡಲಾಗುತ್ತಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಆಯುರ್ವೇದ ವೈದ್ಯ ಆತ್ಮಹತ್ಯೆ

ಬರುತ್ತಿದ್ದರು. ಇಂದು ಬೆಳಗ್ಗೆ 10 ಗಂಟೆ ಸುಮಾರಿಗೆ ಪಿರಿಯಾಪಟ್ಟಣ ಆಸ್ಪತ್ರೆಗೆ ಬಂದಿದ್ದ ಅವರು, ಸ್ವಲ್ಪ ಬಳಲಿದಂತೆ ಕಂಡುಬಂದರು. ಸ್ವಲ್ಪ ಸಮಯದ ನಂತರ ವಾಂತಿ ಮಾಡಿಕೊಂಡಿದ್ದಾರೆ. ಸಿಬ್ಬಂದಿಯಿಂದ ಟೀ ತರಿಸಿಕೊಂಡು ಕುಡಿದ ನಂತರ ಅವರು, ಕಾರಿನಲ್ಲೇ ವಿಶ್ರಾಂತಿ ಪಡೆಯುವುದಾಗಿ ತಿಳಿಸಿ ಆಸ್ಪತ್ರೆಯಿಂದ ಬೆಳಗ್ಗೆ 11 ಗಂಟೆ ಸುಮಾರಿನಲ್ಲಿ ಹೊರ ಹೋದರು ಎಂದು ಪಿರಿಯಾಪಟ್ಟಣ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಸಿಬ್ಬಂದಿ ಅಶ್ವಥಿ ತಿಳಿಸಿದ್ದಾರೆ. ಡಾ. ಸತೀಶ್ ಒಳ್ಳೆಯ ವ್ಯಕ್ತಿಯಾಗಿದ್ದು, ಎಲ್ಲರೊಂದಿಗೂ ಪ್ರೀತಿ–ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದರು. ಅವರನ್ನು ನೋಡಿದರೆ ಜಿಗುಪ್ಸೆಗೊಂಡವರಂತೆ ಕಾಣುತ್ತಿರಲಿಲ್ಲ. ಏಕೆ ಆತ್ಮಹತ್ಯೆ ನಿರ್ಧಾರಕ್ಕೆ ಬಂದರೋ ಗೊತ್ತಿಲ್ಲ ಎಂದರು. ಆನೆಕಾಡು ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಡಾ. ಸತೀಶ್ ಸ್ನೇಹಿತ ಸಂದೀಪ್ ಅವರು, ಕಳೆದ 18 ವರ್ಷಗಳಿಂದ ಡಾ. ಸತೀಶ್ ಗುತ್ತಿಗೆ ಆಧಾರದಲ್ಲೇ ವೈದ್ಯ ವೃತ್ತಿ ಮಾಡುತ್ತಿದ್ದರು. ಕೆಲಸ ಖಾಯಂ ಆಗಿಲ್ಲ ಎಂದು ನೋವಿನಿಂದಲೇ ಹೇಳಿಕೊಳ್ಳುತ್ತಿದ್ದರು. ಅವರ ಮಗ ಅನಾರೋಗ್ಯ ಪೀಡಿತನಾಗಿದ್ದು ಡಾ. ಸತೀಶ್ ಅವರಿಗೂ ಕೂಡ ಆರೋಗ್ಯ ಸಮಸ್ಯೆ ಇತ್ತು. ಇದರಿಂದಾಗಿ ಅವರು ಜಿಗುಪ್ಸೆಗೊಂಡಿದ್ದರು. ಇದುವೇ ಆವರ ಆತ್ಮಹತ್ಯೆಗೆ ಕಾರಣವಿರಬಹುದು ಎಂದು ಹೇಳಿದರು.

ಮುಖ್ಯ ಶಿಕ್ಷಕನಿಗೆ ನೋಟಿಸ್

ಈ ಸಂಬಂಧ ಅಟೆಂಡರ್ ರಮೇಶ್‌ನನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದೇನೆ ಎಂದು ತಿಳಿಸಿದರು. ಜವಾಬ್ದಾರಿ ಸ್ಥಾನದಲ್ಲಿರುವ ಮುಖ್ಯ ಶಿಕ್ಷಕ ಶಾಲಾ ಶೈಕ್ಷಣಿಕ ಪ್ರವಾಸದ ವೇಳೆ ಮಕ್ಕಳೊಂದಿಗೆ ಅನುಚಿತವಾಗಿ ವರ್ತಿಸಿರುವುದು, ನಂತರ ಯಾರ ಗಮನಕ್ಕೂ ತಾರದೇ ಅನಧಿಕೃತವಾಗಿ ಗೈರಾಗಿರುವುದು ಸರಿಯಲ್ಲ. ಈ ಕೂಡಲೇ ಶಾಲಾ ಶೈಕ್ಷಣಿಕ ಪ್ರವಾಸ, ಅಲ್ಲಿ ನಡೆದ ಘಟನೆ ಮತ್ತು ತಾವು ಗೈರಾಗಿರುವ ಕುರಿತು ವರದಿ ನೀಡುವಂತೆ ಮುಖ್ಯ ಶಿಕ್ಷಕನಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಅವರು ಹೇಳಿದರು. ಈ ಕುರಿತು ಮಾಹಿತಿ ನೀಡದಿದ್ದರೆ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಿ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಪತ್ರ ಬರೆಯುವುದಾಗಿ ತಿಳಿಸಿ ನೋಟಿಸ್‌ಗೆ ಸಹಿ ಮಾಡಿ ಬಿಇಓ ಮಾರಯ್ಯ ಅವರಿಗೆ ಕಳುಹಿಸಲಾಗಿದ್ದು, ಅವರು ಈ ನೋಟಿಸ್ ಮುಖ್ಯ ಶಿಕ್ಷಕರಿಗೆ ಜಾರಿ ಮಾಡುವರು ಎಂದು ಹೆಚ್.ಕೆ.ಪಾಂಡು ತಿಳಿಸಿದರು.



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಕನಕದಾಸರ ಜಯಂತಿ ಆಚರಿಸಲಾಯಿತು. ಈ ವೇಳೆ ಜೆಡಿಎಸ್ ನಗರ ಅಧ್ಯಕ್ಷ ಚೆಲುವೇಗೌಡ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ. ರವಿಕುಮಾರ್, ಮಾಜಿ ಕಾರ್ಪೋರೇಟರ್‌ಗಳಾದ ಎಸ್.ಬಿ.ಎಂ. ಮಂಜು, ಎಂ.ಶಿವಣ್ಣ, ರಮಣೀ ರಮೇಶ್, ಮುಖಂಡರಾದ ಮಂಜುನಾಥ್, ಟಿ.ರಾಮು, ಫಾಲ್ಕನ್ ಬೋರೇಗೌಡ, ರಿಜ್ವಾನ್, ಸುರೇಶ್, ರಾಜ್ಯ ವಕ್ತಾರರಾದ ರವಿಚಂದ್ರೇಗೌಡ, ಭಾಗ್ಯವತಿ, ಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಮತದಾರರ ನೋಂದಣಿ ಜಾಗೃತಿ



ಮೈಸೂರು, ಡಿ.1(ಜಿಎ)–ಮೈಸೂರಲ್ಲಿ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಜಿಲ್ಲಾ ಪಂಚಾಯತ್, ನಗರ ಪಾಲಿಕೆ ಮತ್ತು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಶುಕ್ರವಾರ ನಗರದ ವಿವಿಧ ಕಾಲೇಜಿನಲ್ಲಿ ಯುವ ಮತದಾರರ ನೋಂದಣಿ ಜಾಗೃತಿ ಮೂಡಿಸಲಾಯಿತು.

ನಗರದ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಮಹಾಜನ, ಟ್ರಿನೀಟಿ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಿಗೆ ಮೊಬೈಲ್ ಆ್ಯಪ್ ಮೂಲಕ ನೂತನವಾಗಿ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳ್ಳುವುದು, ತಿದ್ದುಪಡಿ ಸೇರಿದಂತೆ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವುದರ ಬಗ್ಗೆ ಅಧಿಕಾರಿಗಳು ಅರಿವು ಮೂಡಿಸಿದರು. ಈ ವೇಳೆ ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ(ಆಡಳಿತ) ಸೋಮಶೇಖರ್ ಮಾತನಾಡಿ, ಲೋಕಸಭಾ ಚುನಾವಣೆಗೂ ಮುನ್ನ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲು ಡಿ.9ರವರೆಗೂ ಅವಕಾಶವಿದ್ದು, ಜನವರಿ 1, 2024ರ ಅವಧಿಗೆ 18 ವರ್ಷ ಪೂರ್ಣಗೊಳಿಸಿದ ಪ್ರತಿಯೊಬ್ಬ ಯುವ ಮತದಾರರು ತಮ್ಮ ಹೆಸರು ಸೇರ್ಪಡಿಸಿಕೊಳ್ಳಿ ಎಂದರು. ನಾಳೆ ಮತ್ತು ನಾಡಿದ್ದು ಮೈಸೂರಿನ ಎಲ್ಲಾ ಮತಗಟ್ಟೆಯಲ್ಲಿ ಮತಗಟ್ಟೆ ಅಧಿಕಾರಿಗಳು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೂ ಲಭ್ಯವಿರುತ್ತಾರೆ. ಈ ವೇಳೆ ಮತದಾರರು ಭೇಟಿ ನೀಡಿ ಮತದಾರರ ಗುರುತಿನ ಚೀಟಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ ಸೇರಿದಂತೆ ಇತರೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಲಯ ಕಚೇರಿ–4ರ ಆಯುಕ್ತೆ ಚಂದ್ರಮ್ಮ, ಚಾಮರಾಜ ಕ್ಷೇತ್ರದ ನೋಡಲ್ ಅಧಿಕಾರಿ ನಿರ್ಮಲ ಮಠಪತಿ, ರೆವಿನ್ಯೂ ಅಧಿಕಾರಿ ಎಂ.ಎಸ್.ಸತೀಶ್, ಎಆರ್‌ಓ ಮನು, ಕಾಲೇಜಿನ ಪ್ರಾಂಶುಪಾಲ ಸೋಮಣ್ಣ ಉಪಸ್ಥಿತರಿದ್ದರು.

ಡಿ.4, ಅಣ್ಣಯ್ಯಪ್ಪ ಸ್ಮಾರಕ ವಿದ್ಯಾಸಂಸ್ಥೆ ರಜತ ಮಹೋತ್ಸವ




ಮೈಸೂರು, ಡಿ.1(ಜಿಎ)–ಮೈಸೂರಿನ ಬಸವನಗುಡಿಯಲ್ಲಿರುವ ಅಣ್ಣಯ್ಯಪ್ಪ ಸ್ಮಾರಕ ವಿದ್ಯಾಸಂಸ್ಥೆಯ ಶ್ರೀಭೈರವೇಶ್ವರ ಶಾಲೆ ಮತ್ತು ಎಎಂಬಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ರಜತ ಮಹೋತ್ಸವವನ್ನು ಡಿ.4ರಂದು ಮಧ್ಯಾಹ್ನ 2 ಗಂಟೆಗೆ ನಗರದ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕಿ ಮತ್ತು ಕಾಲೇಜಿನ ಪ್ರಾಂಶುಪಾಲರೂ ಆದ ಎಸ್.ಸೌಮ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮವನ್ನು ಆದಿಚುಂಚನಗಿರಿ ಮಠದ ಪೀಠಾಧಿಪತಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಸಂಸ್ಥೆಯ ಸಂಚಿಕೆಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಿಡುಗಡೆಗೊಳ್ಳಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಆದಿ ಚುಂಚನಗಿರಿ ಶಾಖಾ ಮಠದ ಸೋಮೇಶ್ವರ ಸ್ವಾಮೀಜಿ, ಯೋಗನರಸಿಂಹ ಸ್ವಾಮಿ ದೇವಾಲಯದ ಡಾ.ಭಾಷ್ಯಂ ಸ್ವಾಮೀಜಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಗುತ್ತದೆ. ನಂತರ ಸಂಸ್ಥೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ನಂತರ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಸುಬ್ಬೇಗೌಡ ಮಾತನಾಡಿ, ಕಳೆದ 35 ವರ್ಷಗಳಿಂದ ಸಂಸ್ಥೆಯೂ ಯಾವುದೇ ಡೋನೇಷನ್ ಪಡೆಯದೇ ಶಾಲೆ ನಡೆಸಲಾಗುತ್ತಿದ್ದು, ಹಾಗೇ ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ವಂಚಿತರಾಗದಂತೆ ಗುಣಮಟ್ಟ ಶಿಕ್ಷಣ ನೀಡಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಉಪ ಪ್ರಾಂಶುಪಾಲ ಪುರುಷೋತ್ತಮ್, ಶಾಲೆ ಮುಖ್ಯಶಿಕ್ಷಕಿ ಕಾಮಾಕ್ಷಿ, ಉಪನ್ಯಾಸಕರಾದ ಭರತ್, ಬಸವರಾಜಪ್ಪ, ಆಡಳಿತಾಧಿಕಾರಿ ಪಂಚಾಕ್ಷರಿ ಉಪಸ್ಥಿತರಿದ್ದರು.

ಕಾಂತರಾಜು ಆಯೋಗದ ವರದಿ ಜಾರಿಗೆ ಆಗ್ರಹ



ಮೈಸೂರು, ಡಿ.1(ಜಿಎ)–ರಾಜ್ಯ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಕಾಂತರಾಜು ಆಯೋಗದ ವರದಿ ಜಾರಿಗೆ ಸಾಂಪ್ರದಾಯಿಕವಾಗಿ ಬಲಿಷ್ಠವಾಗಿರುವ ಜಾತಿಗಳ ನಾಯಕರು ತಡೆಒಡ್ಡುತ್ತಿರುವುದು ಬೇಸರದ ಸಂಗತಿ. ಆದರೂ ಸರ್ಕಾರ ಯಾವುದೇ ಒತ್ತಡಕ್ಕೆ ಮಣಿಯದೇ ವರದಿ ಅನುಷ್ಠಾನಕ್ಕೆ ತರಬೇಕೆಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಮುಖಂಡ ಹರಿಹರ ಆನಂದಸ್ವಾಮಿ ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನದಲ್ಲಿ ಎಲ್ಲಾ ಜಾತಿಗಳಿಗೆ ಸಮಾನತೆ, ಅಭಿವೃದ್ಧಿಗೆ ಅವಕಾಶ ಕಲ್ಪಿಸಿದ್ದಾರೆ. ಆದರೆ ಸ್ವಾತಂತ್ರ್ಯದ ನಂತರ ಆಡಳಿತದ ಚುಕ್ಕಾಣಿ ಹಿಡಿದಿರುವ ಎಲ್ಲಾ ರಾಜಕೀಯ ಪಕ್ಷಗಳು ಸಂವಿಧಾನದ ಆಶಯ ಜಾರಿಗೆ ತರಲು ಗಂಭೀರ ಪ್ರಯತ್ನ ನಡೆಸಿಲ್ಲ. ಈ ಕಾರಣದಿಂದಾಗಿಯೇ ತಾರತಮ್ಯ ಹೆಚ್ಚಾಗಿದೆ. ಇದರಿಂದಾಗಿ 2014–15ರಲ್ಲಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕಾಂತರಾಜ್ ನೇತೃತ್ವದಲ್ಲಿ ಹಿಂದುಳಿದ ವರ್ಗಗಳು ಮತ್ತು ಎಲ್ಲಾ ಶೋಷಿತ ಸಮುದಾಯಗಳಿಗೆ ನ್ಯಾಯ ಒದಗಿಸುವ ಸಲುವಾಗಿ ಜಾತಿ ಆಧಾರಿತ ವೈಜ್ಞಾನಿಕವಾಗಿ ಜನಗಣತಿ ನಡೆಸಲು ಆಯೋಗ ರಚಿಸಲಾಗಿತ್ತು. ಹಲವಾರು ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿದ್ದ ಆಯೋಗದ ವರದಿ ಅನುಷ್ಠಾನಕ್ಕೆ ಎಲ್ಲಾ ಶೋಷಿತ ಹಾಗೂ ಹಿಂದುಳಿದ ಜಾತಿಗಳ ಸಮೂಹಗಳು ಒತ್ತಾಯಿಸಿದ ಕಾರಣಕ್ಕಾಗಿ ಈಗ ಸರ್ಕಾರ ಜಾರಿಗೆ ತರುವ ಮಾತನ್ನಾಡುತ್ತಿದೆ ಎಂದರು.

ಮೊದಲಿನಿಂದಲೂ ಅಧಿಕಾರದ ಸವಿಯುಂಡ ಬಲಿಷ್ಠ ಜಾತಿಗಳ ನಾಯಕರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಜಾತಿ ಗಣತಿ ವರದಿಯನ್ನು ತಡೆಹಿಡಿಯಬೇಕೆಂದು ಒತ್ತಾಯಿಸುತ್ತಿರುವುದು ಖಂಡನೀಯ. ಮುಂದುವರೆದ ಜಾತಿಗಳನ್ನು ಒಳಗೊಂಡಂತೆ ಎಲ್ಲ ಬಡವರ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಹಿಂದುಳಿದಿರುವಿಕೆಯನ್ನು ವೈಜ್ಞಾನಿಕವಾಗಿ ಪರಿಷ್ಕರಿಸಿ, ಎಲ್ಲಾ ವರ್ಗದ ಬಡವರಿಗೆ ನ್ಯಾಯ ದೊರಕಿಸುವ ಸಲುವಾಗಿ ಜಾತಿ ಆಧಾರಿತ ಜನಗಣತಿ ಅತ್ಯಂತ ಅನಿವಾರ್ಯ ಮತ್ತು ಗಂಭೀರ ಸಂಗತಿಯಾಗಿದೆ. ಜೊತೆಗೆ, ಇಂದು ದೇಶದಾದ್ಯಂತ ಜಾತಿ ಜನಗಣತಿಯ ಆಶಯದಲ್ಲಿ ಕೆಲವು ರಾಜ್ಯಗಳಲ್ಲಿ ಕ್ರಮ ಕೈಗೊಳ್ಳುತ್ತಿರುವ ವೇಳೆ ಅದಕ್ಕೆ ಒಡ್ಡುತ್ತಿರುವ ತಡೆ ವಿರುದ್ಧ ಎಲ್ಲಾ ಸಮೂಹಗಳು ಬೀದಿಗಿಳಿದು ಹೋರಾಟ ಮಾಡಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಂಗವಾದಿ ನಾರಾಯಣಪ್ಪ, ಹೊರಳವಾಡಿ ನಂಜುಂಡಸ್ವಾಮಿ, ಸತೀಶ್, ದರ್ಶನ್, ಗಂಗಾಧರ್ ಹೈವೇ ವೃತ್ತ, ಬೆಲವತ್ತ ರಾಮಚಂದ್ರ ಉಪಸ್ಥಿತರಿದ್ದರು.

ನಾಳೆ ವಿಶ್ವ ವಿಕಲಚೇತನರ ದಿನಾಚರಣೆ

ಮೈಸೂರು, ಡಿ.1– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ವಿಕಲ ಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮೈಸೂರು ಜಿಲ್ಲೆ, ಮೈಸೂರು ಹಾಗೂ ವಿಕಲಚೇತನರಿಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಡಿಸೆಂಬರ್ 3 ರಂದು ಬೆಳಗ್ಗೆ 10.30ಕ್ಕೆ 'ವಿಶ್ವ ವಿಕಲ ಚೇತನರ' ದಿನಾಚರಣೆಯನ್ನು ದಸರಾ ವಸ್ತು ಪ್ರದರ್ಶನ ಆವರಣದ ಪಿ.ಕಾಳಿಂಗ ರಾವ್ ಗಾನ ಮಂಟಪದಲ್ಲಿ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲಿ, ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲೆ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಭಾಗವಹಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಟಿ.ಎಸ್.ಶ್ರೀವತ್ಸ ವಹಿಸುವರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್‌ಸಿಂಹ, ವಿ. ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು. ಸಮಾರಂಭದ ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಅನಿಲ್‌ಕುಮಾರ್.ಸಿ, ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಕೆ.ಹರೀಶ್‌ಗೌಡ ಹಾಗೂ ವಿಧಾನಪರಿಷತ್ ಶಾಸಕರಾದ ಮರಿತಿಬ್ಬೇಗೌಡ, ಎಚ್. ವಿಶ್ವನಾಥ್, ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು.ಜಿ ಮಾದೇಗೌಡ ಭಾಗವಹಿಸುವರು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಪ್ರತಿಭಾ ಪುರಸ್ಕಾರ



ಮೈಸೂರು, ಡಿ.1(ಜಿಎ)–ದೇವಲ ಮಹರ್ಷಿ ನೌಕರರ ವೇದಿಕೆಯಿಂದ ಡಿ.3ರಂದು ಬೆಳಗ್ಗೆ 8ಕ್ಕೆ ನಗರದ ಕಲಾಮಂದಿರದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾ ನೇಕಾರ ಒಕ್ಕೂಟದ ಗೌರವಾಧ್ಯಕ್ಷ ಆರ್.ಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಹಂಪಿಯ ಹೇಮಕೂಟದ ಗಾಯತ್ರಿ ಪೀಠ ಮಹಾಸಂಸ್ಥಾನದ ದಯಾನಂದ ಪುರಿ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದು, ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಲಿದ್ದಾರೆ. ಜಿಲ್ಲಾ ದೇವಾಂಗ ಸಂಘದ ಅಧ್ಯಕ್ಷ ಎಂ.ಎಸ್.ಜಯಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಾಧ್ಯಾಪಕ ಬಿ.ವಿ.ವಸಂತಕುಮಾರ್ ದೇವಲ ಮಹರ್ಷಿ ಮತ್ತು ದೇವರ ದಾಸಿಮಯ್ಯ ಬಗ್ಗೆ ಉಪನ್ಯಾಸ ನೀಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆ ಗೌರವಾಧ್ಯಕ್ಷ ಎಲ್.ವಾಸುದೇವ, ಸಂಪರ್ಕ ಸಾಧಕ ಜಿ.ಜೆ.ಹಾಲೇಶ್, ದೇವಾಂಗ ಕುಟುಂಬ ನಿರ್ದೇಶಕ ಬಾಲರಾಜು, ನೇಕಾರ ಒಕ್ಕೂಟದ ಅಧ್ಯಕ್ಷ ದಿನೇಶ್, ದೇವಾಂಗ ವಸತಿ ನಿಲಯ ಅಧ್ಯಕ್ಷ ಚಿನ್ಮಯ ಉಪಸ್ಥಿತರಿದ್ದರು.

ನಾಳೆ ಅಂಗಾಂಗ ದಾನ ನೋಂದಣಿ ಅಭಿಯಾನ



ಮೈಸೂರು, ಡಿ.1(ಜಿಎ)–ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ಜಿಲ್ಲಾ ಕಿವುಡರ ಸಂಘ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಲಯನ್ಸ್ ಕ್ಲಬ್ ಆಫ್ ಮೈಸೂರು ನಿಸರ್ಗ ಮೈಸೂರು ಬ್ಲೈಂಡ್ ಅಸೋಸಿಯೇಷನ್, ಅಂಗವಿಕಲರ ಸಂಘ, ಜಿಲ್ಲಾ ಪತ್ರಕರ್ತರ ಸಂಘ, ಬಿಜಿಎಸ್ ಆಸ್ಪತ್ರೆ ಹಾಗೂ ನರೆಡ್ಕೊ ಸಹಯೋಗದೊಂದಿಗೆ ಡಿ.3ರಂದು ಬೆಳಗ್ಗೆ 10ಕ್ಕೆ ಇಲ್ಲಿನ ಅರಮನೆ ಕೋಟೆ ಆಂಜನೇಯ ದೇವಸ್ಥಾನದ ಬಳಿ ಅಂಗಾಂಗ ದಾನ ನೋಂದಣಿಗೆ ಜನಜಾಗೃತಿ ಅಭಿಯಾನ ಆಯೋಜಿಸಲಾಗಿದೆ ಎಂದು ಜಿಲ್ಲಾ ಕಿವುಡರ ಸಂಘದ ಚೇರ್ಮನ್ ಎಸ್.ಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅಭಿಯಾನದಲ್ಲಿ ಮುಖ್ಯವಾಗಿ ಅಂಗವಿಕಲರು ಅಂಗಾಂಗ ದಾನಕ್ಕೆ ನೋಂದಣಿ ಮಾಡುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುವುದು. ಸ್ಥಳದಲ್ಲಿ ನೋಂದಣಿ ಪ್ರಕ್ರಿಯೆ ನಡೆಯಲಿದೆ. ವಿವಿಧ ಕಾರಣಗಳಿಂದ ಮೃತಪಟ್ಟ ಮನುಷ್ಯ ಮನುಕುಲಕ್ಕೆ ಮಾಡಬಹುದಾದ ಅತ್ಯಂತ ದೊಡ್ಡ ಉಪಕಾರ ಅಂಗಾಂಗ ದಾನ. ಎಲ್ಲರೂ ಭಾಗವಹಿಸಿ ಅಭಿಯಾನಕ್ಕೆ ಕೈಜೋಡಿಸಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬ್ಲೈಂಡ್ ಅಸೋಸಿಯೇಷನ್ ಅಧ್ಯಕ್ಷ ಟಿ.ವಿ.ನಾಗರಾಜ್, ಕಿವುಡರ ಸಂಘದ ಉಪ ಚೇರ್ಮನ್ ಮಹೇಶ್ ವರ್ಮಾ, ಲಯನ್ಸ್ ನಿಸರ್ಗ ಅಧ್ಯಕ್ಷ ಜಯಕುಮಾರ್, ಲಿಯೋ ಕ್ಲಬ್ ಅಧ್ಯಕ್ಷೆ ಎಸ್.ಎಸ್.ಅನನ್ಯ, ಬಿಜಿಎಸ್ ಆಸ್ಪತ್ರೆ ವೈದ್ಯ ಪ್ರವೀಣ್ ಚಂದ್ರಶೇಖರ್ ಉಪಸ್ಥಿತರಿದ್ದರು.

ನಾಳೆ ರಕ್ತದಾನ ಶಿಬಿರ



ಮೈಸೂರು, ಡಿ.1(ಜಿಎ)–ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕದ ವತಿಯಿಂದ ಡಿ.3ರಂದು ಬೆಳಗ್ಗೆ 8ರಿಂದ ಸಂಜೆ 4ಗಂಟೆವರೆಗೂ ಕಾಮಾಕ್ಷಿ ಆಸ್ಪತ್ರೆ ಮುಂಭಾಗದ ರೋಟರಿ ಪಶ್ಚಿಮ ಶಾಲೆ ಸಭಾಂಗಣದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಸಂಘದಲ್ಲಿ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ನಂಜುಂಡಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಬಿರವನ್ನು ಸಂಘದ ಅಧ್ಯಕ್ಷ ಕೆ.ಪಿ.ದಿವಾಕರ್ ಉದ್ಘಾಟಿಸುವರು, ಮುಖ್ಯ ಅತಿಥಿಗಳಾಗಿ ರೋಟರಿ ಹೆರಿಟೇಜ್ ಅಧ್ಯಕ್ಷ ಸಿ.ಜಗದೀಶ್, ಸಂಘದ ಗೌರವಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಶಾಸಕರಾದ ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ್, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಮತ್ತಿತರರು ಆಗಮಿಸಲಿದ್ದಾರೆ. ರಕ್ತದಾನ ಮಾಡಬಯಸುವವರು ಸಿ. ಜಗದೀಶ್, ಮೊ. 93417 43266, ಕೆ.ಪಿ. ದಿವಾಕರ, ಮೊ. 96636 00029ನ್ನು ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಸಿ. ಜಗದೀಶ್, ಗೋಪಾಲಕೃಷ್ಣ, ರಾಜೇಶ್, ನೀಲಕಂಠ ಕುಮಾರ ಶೆಟ್ಟಿ ಉಪಸ್ಥಿತರಿದ್ದರು.

ಬೆಳಗ್ಗೆ 10ರಿಂದ 5 ರವರೆಗೆ ಕಚೇರಿಯಲ್ಲಿ ಇರದಿದ್ದರೆ ಕ್ರಮ

ಸರ್ಕಾರಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಎಚ್ಚರಿಕೆ



ಕೆ.ಆರ್.ನಗರ, ಡಿ.1– ಅಧಿಕಾರಿಗಳು ಪ್ರತಿ ದಿನ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಕಚೇರಿಯಲ್ಲಿ ಹಾಜರಿದ್ದು, ತಮ್ಮ ಹಾಜರಾತಿಯನ್ನು ತೋರಿಸದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ನಿರ್ಧಾಕ್ಷಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಶಿಷ್ಟಾಚಾರ ಕಾರ್ಯಕ್ರಮಗಳನ್ನು, ರಜಾ ದಿನಗಳಲ್ಲಿ ಹಾಜರಿದ್ದು, ರಾಷ್ಟ್ರೀಯ ಹಬ್ಬಗಳನ್ನು ಆಚರಿಸಬೇಕೆಂಬ ಸರ್ಕಾರದ ಸುತ್ತೋಲೆ ಇದೆ. ಇದಕ್ಕೆ ಗೈರು ಹಾಜರಾದ ಅಧಿಕಾರಿಗಳ ಮಾಹಿತಿಯನ್ನು ತಹಸಿಲ್ದಾರ್ ಮತ್ತು ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು ನನ್ನ ಗಮನಕ್ಕೆ ತನ್ನಿ, ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿದರು.

ಕೃಷಿ ಇಲಾಖೆ ಅಧಿಕಾರಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕುಗಳಲ್ಲಿ ಸರ್ವೆ ಮಾಡುವ ಮೂಲಕ ಎಲ್ಲರೂ ಬರ ಪರಿಹಾರವನ್ನು ಪಡೆಯುವಂತೆ ನೋಡಿಕೊಳ್ಳಿ ಹಾಗೂ ಸೋಮವಾರ ಭತ್ತ ಖರೀದಿ ಕೇಂದ್ರವನ್ನು ತೆರೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಮತ್ತು ಕೃಷಿ ಅಧಿಕಾರಿಗಳು ಪೊಲೀಸ್ ಇಲಾಖೆ ಮತ್ತು ಆರೋಗ್ಯ ಇಲಾಖೆ ರೈತರು ಆತ್ಮಹತ್ಯೆ ಮಾಡಿಕೊಂಡರೆ, ತಕ್ಷಣ ಎಲ್ಲಾ ದಾಖಲೆಗಳನ್ನು ಕ್ರೋಡಿಕರಿಸಿ ರೈತರ ಮನೆ ಬಾಗಿಲಿಗೆ ಪರಿಹಾರವನ್ನು ನೀಡುವಂತೆ ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಸಕ ಡಿ. ರವಿಶಂಕರ್ ಮಾತನಾಡಿ ಕೆ.ಆರ್. ನಗರ ಶಿಕ್ಷಣ ಕ್ಷೇತ್ರದಲ್ಲಿ ಅತಿ ಹಿಂದುಳಿದಿದ್ದು, ಕಳೆದ ವರ್ಷ ಎಸ್ಎಸ್ಎಲ್‌ಸಿ ಫಲಿತಾಂಶದಲ್ಲಿ ತೀರಾ ಹಿಂದೆ ಉಳಿದಿತ್ತು. ಆದರೆ ಈ ಬಾರಿ ಹಾಗೆ ಆಗದಂತೆ ನೋಡಿ ಕೊಳ್ಳುವ ಜವಾಬ್ದಾರಿ ಕ್ಷೇತ್ರ ಶಿಕ್ಷಣಾಧಿಕಾರಿಯದು. ಜಿಲ್ಲೆಯಲ್ಲಿ ತಮ್ಮ ತಾಲೂಕು ಮೂರರಿಂದ ನಾಲ್ಕನೇ ಸ್ಥಾನ ಬರುವಂತೆ ನೋಡಿಕೊಳ್ಳದಿದ್ದರೆ ನಾನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ಇತ್ತೀಚೆಗೆ ತಾಲೂಕು ಆಸ್ಪತ್ರೆಯ ವೈದ್ಯರುಗಳು ಮತ್ತು ತಾಯಿ ಮಕ್ಕಳ ಆಸ್ಪತ್ರೆಯ ವೈದ್ಯರು ಗರ್ಭಿಣಿ ಸ್ತ್ರೀಯರು ಮತ್ತು ರೋಗಿಗಳಿಗೆ ರಕ್ತ ಪರೀಕ್ಷೆ, ಸ್ಕ್ಯಾನಿಂಗ್ ಸೇರಿದಂತೆ ಇನ್ನಿತರ ಪರೀಕ್ಷೆಗಳಿಗೆ ಹಾಗೂ ಔಷಧಿಗಳನ್ನು ತೆಗೆದುಕೊಳ್ಳಲು ಖಾಸಗಿ ಲ್ಯಾಬ್ ಮತ್ತು ಕ್ಲಿನಿಕ್‌ಗಳಿಗೆ ಚೀಟಿ ಬರೆಯುತ್ತಿರುವ ಬಗ್ಗೆ ದೂರು ಬರುತ್ತಿದೆ. ಈ ಬಗ್ಗೆ ಕ್ರಮ ಕೈಗೊಳ್ಳಿ. ಇಲ್ಲದಿದ್ದರೆ ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಶಾಸಕರು ಎಚ್ಚರಿಸಿದರು.

ಜಿಲ್ಲಾಧಿಕಾರಿ ಮತ್ತು ಶಾಸಕರು ಒಟ್ಟಿಗೆ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಕುಡಿಯುವ ನೀರು, ಶಾಲಾ ಕಾಂಪೌಂಡ್, ವಿದ್ಯುತ್, ಪಡಿತರ ಸೇರಿದಂತೆ ಸಂಬಂಧಪಟ್ಟ ಅಧಿಕಾರಿ ಗಳಿಂದ ಮಾಹಿತಿ ಪಡೆದು ತಕ್ಷಣ ಕ್ರಮ ಕೈಗೊಳ್ಳುವಂತೆ ತಿಳಿ ಹೇಳಿದರು. ಸಭೆಯಲ್ಲಿ ತಹಸಿಲ್ದಾರ್ ಪೂರ್ಣಿಮಾ, ಇಓ ಹೆಚ್.ಕೆ ಹರೀಶ್, ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ, ಸಮಾಜ ಕಲ್ಯಾಣಾಧಿಕಾರಿ ಅಶೋಕ್, ತಾಲೂಕು ಆಡಳಿತ ಆರೋಗ್ಯಾಧಿಕಾರಿ ಡಾ. ನಟರಾಜ್, ಆಸ್ಪತ್ರೆಯ ಆರೋಗ್ಯಾಧಿಕಾರಿ ಡಾ.ನಾಗೇಂದ್ರ ಎಇಇಗಳಾದ ಗುರುಪ್ರಸಾದ್, ವಿನುತ್, ಅರ್ಕೇಶ್, ಮಧುಸೂದನ್, ಕೆಎಸ್ಆರ್‌ಟಿಸಿ ವ್ಯವಸ್ಥಾಪಕ ಮಹೇಶ್, ಬಿಇಓ ಕೃಷ್ಣಪ್ಪ ಇನ್ನಿತರರು ಹಾಜರಿದ್ದರು.

> ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕಿನ ಹಳ್ಳಿಗಳಲ್ಲಿ ಪ್ರತಿ ಮನೆಯಲ್ಲಿಯೂ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದ್ದು ಅಬಕಾರಿ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳು ಎರಡು ಮೂರು ಬಾರಿ ಪ್ರಕರಣ ದಾಖಲಿಸಿ ಕ್ರಮ ಕೈಗೊಂಡಿದ್ದರೂ ಮದ್ಯ ಮಾರಾಟ ಮುಂದುವರೆದಿದೆ. ಅಂತಹವರ ವಿರುದ್ಧ ಗೂಂಡಾ ಕಾಯ್ದೆ ಹಾಕುವ ಜೊತೆಗೆ ಒಂದಿಬ್ಬರನ್ನು ಗಡಿಪಾರು ಮಾಡಿದರೆ ಮಧ್ಯ ಮಾರಾಟ ನಿಲ್ಲಲಿದೆ. – ಜಿಲ್ಲಾಧಿಕಾರಿ

ವಿದ್ಯಾರ್ಥಿನಿಯರ ಜೊತೆ ಅನುಚಿತವಾಗಿ ವರ್ತಿಸಿದ ಮುಖ್ಯ ಶಿಕ್ಷಕ, ಡಿ ಗ್ರೂಪ್ ನೌಕರನ ಮೇಲೆ ಪೋಕ್ಸೋ ಕೇಸ್ ದಾಖಲಿಸಿ

ಮಾಜಿ ಶಾಸಕ ಚೀಚನಹಳ್ಳಿ ಚಿಕ್ಕಣ್ಣ ಆಗ್ರಹ



ಬೀಚನಹಳ್ಳಿ, ಡಿ.1– ವಿದ್ಯಾರ್ಥಿನಿಯರ ಜೊತೆ ಅಸಭ್ಯವಾಗಿ ವರ್ತಿಸಿರುವ ಬೀಚನಹಳ್ಳಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಡಿ ಗ್ರೂಪ್ ನೌಕರ ರಮೇಶ್ ಅವರುಗಳ ಮೇಲೆ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಆಗ್ರಹಿಸಿದ್ದಾರೆ.

ಹೆಚ್.ಡಿ. ಕೋಟೆ ತಾಲೂಕಿನ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಮತ್ತು ಡಿ ಗ್ರೂಪ್ ನೌಕರ ಶೈಕ್ಷಣಿಕ ಪ್ರವಾಸದ ವೇಳೆ ವಿದ್ಯಾರ್ಥಿನಿಯರ ಜೊತೆ ಅಸಭ್ಯವಾಗಿ ವರ್ತಿಸಿದ ವಿಷಯ ತಿಳಿದು ಆಕ್ರೋಶಗೊಂಡ ಚಿಕ್ಕಣ್ಣ ಅವರು ದೌರ್ಜನ್ಯಕ್ಕೊಳಗಾದ ಶಾಲಾ ಮಕ್ಕಳು ಮತ್ತು ಅವರ ಪೋಷಕರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಇದು ನನ್ನ ಅವಧಿಯಲ್ಲಿ ಕಟ್ಟಿಸಿದ ಸರ್ಕಾರಿ ಶಾಲೆ. ರಾಜ್ಯದಲ್ಲೇ ಉತ್ತಮವಾದ ಸರ್ಕಾರಿ ಪ್ರೌಢಶಾಲೆ ಎಂಬ ಹೆಗ್ಗಳಿಕೆ ಪಡೆದಿತ್ತು. ಇದುವರೆಗೂ ಒಂದು ಕಪ್ಪುಚುಕ್ಕಿಯೂ ಇಲ್ಲದಂತೆ ನಡೆಯುತ್ತಿತ್ತು ಎಂದ ಅವರು ಮುಖ್ಯ ಶಿಕ್ಷಕ ಮತ್ತು ಡಿ ಗ್ರೂಪ್ ನೌಕರನಿಂದ ಕಪ್ಪುಚುಕ್ಕೆ ಬಿದ್ದಿದೆ. ಇಂತಹವರ ಮೇಲೆ ಪೋಕ್ಸೋ ಕೇಸ್ ದಾಖಲಿಸಿ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮಾರಯ್ಯ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ದೌರ್ಜನ್ಯಕ್ಕೊಳಗಾದ ಮಕ್ಕಳು ಮತ್ತು ಅವರ ಪೋಷಕರು ನನ್ನ ಬಳಿ ಬಂದಿದ್ದಾರೆ. ಅವರ ಮೇಲೆ ನಡೆದಿರುವ ಹೀನ ಕೃತ್ಯ ಕೇಳಿ ನನಗೆ ಬೇಸರವಾಯಿತು. ಈ ಕೂಡಲೇ ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರಲ್ಲದೆ ನೀವು ಕ್ರಮ ಕೈಗೊಳ್ಳದಿದ್ದರೆ, ಮಕ್ಕಳು ಮತ್ತು ಪೋಷಕರೊಂದಿಗೆ ಶಾಲೆಗೆ ಬೀಗ ಜಡಿದು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದರು.

ಈ ವೇಳೆ ಪ್ರತಿಕ್ರಿಯಿಸಿದ ಅವರು ಈ ಕುರಿತು ಈಗಾಗಲೇ ತನಿಖೆ ನಡೆಸಿ ವರದಿಯನ್ನು ಡಿಡಿಪಿಐಗೆ ಕಳುಹಿಸಿದ್ದು, ಅವರು ಸೂಕ್ತ ಕ್ರಮ ಕೈಗೊಂಡಿದ್ದಾರೆ ಎಂದರು.

ಓದುವ ಸಂಸ್ಕೃತಿ ಬೆಳೆಸಿಕೊಳ್ಳಿ, ಕನ್ನಡ ಸಾಹಿತ್ಯ ಬೆಳೆಸಿ

ಮಕ್ಕಳ ಕವಿಗೋಷ್ಠಿಯಲ್ಲಿ ಸಮ್ಮೇಳನಾಧ್ಯಕ್ಷೆ ಕರೆ



ತಿ.ನರಸೀಪುರ, ಡಿ.1– ಓದುವ ಸಂಸ್ಕೃತಿಯನ್ನು ಬೆಳೆಸಿಕೊಂಡು ಕನ್ನಡ ಸಾಹಿತ್ಯ ಬೆಳೆಯಲು ಪ್ರೋತ್ಸಾಹ ನೀಡಬೇಕಾದ ಅಗತ್ಯವಿದೆ ಎಂದು ಮಕ್ಕಳ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷೆ ಕು.ಸೌಜನ್ಯ ಕುಪ್ಯ ತಿಳಿಸಿದ್ದಾರೆ.

ಸಿರಿಗಂಧ ಸಾಹಿತ್ಯ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಮಕ್ಕಳ ಕವಿಗೋಷ್ಠಿ, ಭಾಷಾ ಮಾಸಾಚರಣೆ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮಕ್ಕೆ ಸಮ್ಮೇಳನಾಧ್ಯಕ್ಷರನ್ನು, ಪೂರ್ಣಕುಂಭದೊಂದಿಗೆ, ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ, ಕರೆತರಲಾಯಿತು. ತಿಂಗಳು ಪೂರ್ತಿ ಕನ್ನಡ ಇಂಗ್ಲೀಷ್, ಹಿಂದಿ ಭಾಷೆಗಳ ಚಟುವಟಿಕೆಗಳನ್ನು ನಡೆಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಮಕ್ಕಳ ಕವಿಗೋಷ್ಠಿಯಲ್ಲಿ ಎಲ್ಲಾ ತರಗತಿಗಳ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡು ತಾವು ರಚಿಸಿದ ಕವನಗಳನ್ನು ವಾಚಿಸಿದರು. ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಶ್ರೀಮತಿ ಶಶಿಕಲಾ "ನನ್ನ ತಾಯ್ನೆಲಕ್ಕೂ ಹಿರಿದುಂಟೆ ಲೋಕದಲಿ" ಕವನ ವಾಚಿಸಿ, ಚಿಕ್ಕಂದಿನಿಂದ ಓದುವ ಉತ್ತಮ ಹವ್ಯಾಸ ರೂಢಿಸಿಕೊಂಡರೆ ಭವಿಷ್ಯದಲ್ಲಿ ಉನ್ನತ ಸಾಧನೆ ಮಾಡುವಿರಿ ಎಂದು ಮಕ್ಕಳಿಗೆ ತಿಳಿ ಹೇಳಿದರು.

ಯುವ ಕವಿಗಳಾದ, ಪವನ್, ನಿಂಗಮಣಿ, ಸಿರಿ, ಜಯಲಕ್ಷ್ಮಿ, ಮೋಹನ್, ಪಾರ್ವತಿ, ಅಂಕಿತ, ಲಾವಣ್ಯ, ಹರ್ಷಿತಾ, ಲಕ್ಷ್ಮಿ, ಭಾರತಿ ಕವನ ವಾಚಿಸಿ ಉತ್ತಮ ಯುವ ಕವಿಗಳಾಗಿ ಹೊರಹೊಮ್ಮಿದರು.

ಎಲ್ಲಾ ಮಕ್ಕಳಿಗೂ ದಾನಿಗಳಾದ ಮತ್ತಿಕೆರೆ ಮಂಜೇಶ್ ಬಾಬು ಅವರ "ಬೀರೇಶ್ವರ ವಚನಗಳು" ಪುಸ್ತಕ ಬಹುಮಾನವಾಗಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಥ ಮಿಕ ಶಾಲಾ ಮುಖ್ಯ ಶಿಕ್ಷಕರಾದ ಮಮತಾ ಬಾಯಿ ಬೋಂಸ್ಲೆ, ಎಸ್ಡಿಎಂಸಿ ಅಧ್ಯಕ್ಷರಾದ ಉಮೇಶ್, ಸಿದ್ಧಮಾದು, ವೆಂಕಟಕೃಷ್ಣ, ಶಿಕ್ಷಕರಾದ ಶಂಕರ್,ವಿಜಯ್ ವಿಕ್ಟರ್, ಜ್ಯೋತಿ, ಹೇಮಲತಾ ಭಾಗವಹಿಸಿದ್ದರು.

ಮಮತ ಕುಮಾರಿ ನಿರೂಪಿಸಿದರು, ರೂಪ ಸ್ವಾಗತಿಸಿದರು, ಸಬೀನ ಅಂಜುಂ ಅತಿಥಿ ಪರಿಚಯ ಮಾಡಿಕೊಟ್ಟರು, ಲಕ್ಷ್ಮೀ ನಾರಾಯಣ ವಂದಿಸಿದರು.

ನಮ್ಮಲ್ಲಿರುವ ಹೊರ ರಾಜ್ಯದವರು ಕನ್ನಡ ಕಲಿಯಬೇಕು



ತಿ.ನರಸೀಪುರ, ಡಿ.1– ಹೊರ ರಾಜ್ಯಗಳಿಂದ ಬಂದು ನಮ್ಮ ರಾಜ್ಯದಲ್ಲಿ ನೆಲೆಸಿರುವ ಜನ ಕನ್ನಡ ಭಾಷೆಯನ್ನು ಕಲಿತು, ಕನ್ನಡ ಮಾತನಾಡುವುದನ್ನು ರೂಡಿಸಿಕೊಳ್ಳುವಂತೆ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಕರೆ ನೀಡಿದರು,

ಪಟ್ಟಣದ ತಿರುಮಕೂಡಲಿನ ಚೌಡಯ್ಯ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ತ್ರಿವೇಣಿ ಸಂಗಮ ಆಟೋ ನಿಲ್ದಾಣದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ಜನ ಸ್ವಾಭಿಮಾನಿಗಳು. ಎಲ್ಲರನ್ನೂ ತುಂಬು ಹೃದಯದಿಂದ ಸ್ವಾಗತಿಸುತ್ತಾರೆ, ಇಲ್ಲಿಗೆ ವ್ಯಾಪಾರ ವಹಿವಾಟಿಗಾಗಿ ಬರುವ ಹೊರರಾಜ್ಯದ ಜನ ಇಲ್ಲಿನ ನಾಡು ನುಡಿ ಭಾಷೆಗೆ ಹೊಂದಿಕೊಂಡು ಕನ್ನಡ ಭಾಷೆಗೆ ಹೆಚ್ಚು ಹೊತ್ತು ನೀಡುವಂತೆ ಸಲಹೆ ನೀಡಿದರು, ಇದಲ್ಲದೆ ತಮ್ಮ ವ್ಯಾಪಾರಸ್ಥಳದಲ್ಲಿ ನಾಮಫಲಕವನ್ನು ಅಳವಡಿಸುವಾಗ ಕನ್ನಡದಲ್ಲಿ ಅಳವಡಿಸುವ ಮೂಲಕ ಕನ್ನಡಕ್ಕೆ ಒತ್ತು ನೀಡುವಂತೆ ಸಲಹೆ ನೀಡಿದರು,

ನಮ್ಮ ರಾಜ್ಯದ ಜನತೆ ಪ್ರತಿನಿತ್ಯವೂ ಕನ್ನಡ ಹಬ್ಬವನ್ನು ಆಚರಿಸುವಂತಾಗಬೇಕು, ಕನ್ನಡ ನುಡಿ ಸಂಸ್ಕೃತಿ ಕಲೆ ಸಾಹಿತ್ಯ ಎಲ್ಲೆಡೆ ಪ್ರಚಲಿತವಾಗಬೇಕು ಎಂದರು,

ಕನ್ನಡಿಗರು ವೇದಿಕೆ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತವಾಗದೆ ನಿರಂತರವಾಗಿ ಕನ್ನಡ ನಾಡು, ನುಡಿ ಹಾಗೂ ಭಾಷೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ತೊಡಗಿಸಿಕೊಳ್ಳಬೇಕು, ನಾಡು–ನುಡಿ ಕಟ್ಟುವ ಕಾರ್ಯಕ್ಕೆ ಪ್ರತಿಯೊಬ್ಬರೂ ಸಹಕಾರ ನೀಡುವಂತೆ ಮನವಿ ಮಾಡಿದರು. ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜ್ ಗೌಡ ಮಾತನಾಡಿ ಆಟೋ ಚಾಲಕರು ತಮ್ಮ ವಾಹನಗಳ ಇನ್ಸೂರೆನ್ಸ್ ಹಾಗೂ ಡ್ರೈವಿಂಗ್ ಲೈಸೆನ್ಸ್‌ಗಳನ್ನು ಮಾಡಿಸಿಕೊಂಡು ಆಟಗಳನ್ನು ಸುರಕ್ಷಿತವಾಗಿ ಚಲಾಯಿಸಿ, ಅಪಘಾತಗಳು ಸಂಭವಿಸಿದರೆ ನಿಮ್ಮ ಕುಟುಂಬದ ರಕ್ಷಣೆಗೆ ಇದರಿಂದ ಅನುಕೂಲವಾಗಲಿದೆ ಆದ್ದರಿಂದ ಪ್ರತಿಯೊಬ್ಬರೂ ಕಡ್ಡಾಯವಾಗಿ ಲೈಸೆನ್ಸ್ ಹಾಗೂ ಇನ್ಸೂರೆನ್ಸ್ ಅನ್ನು ಮಾಡಿಸಿಕೊಂಡು ವಾಹನ ಚಲಾಯಿಸುವಂತೆ ಚಾಲಕರಿಗೆ ಕಿವಿಮಾತು ಹೇಳಿದರು,

ಕಾರ್ಯಕ್ರಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಆರ್.ಸಿ. ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಜಿ. ರವಿಕುಮಾರ್, ತ್ರಿವೇಣಿ ಸಂಗಮ ಆಟೋದ ನವೀನ್ ಕುಮಾರ್, ನಟೇಶ್, ಮೋಹನ್, ಕಿರಣ್, ಶಿವು, ಚಂದನ್, ರಾಜೇಶ್, ಅಭಿಷೇಕ್, ಜಯಂತ್, ಸತೀಶ್, ನಾಗೇಂದ್ರ, ರಮೇಶ್, ಸುಮಂತ್, ರಾಜು, ಬಾಬು, ಮಹದೇವಸ್ವಾಮಿ, ಸಿದ್ದಿ, ಸ್ವಾಮಿ, ಮಣಿ, ಬಸವರಾಜು, ವಿಜಿ, ಶಿವಮೂರ್ತಿ, ಶಿವಣ್ಣ, ಸತೀಶ್ ಮತ್ತಿತರ ಆಟೋ ಚಾಲಕರು ಉಪಸಿದ್ದರು.

ಹೆಜ್ಜೇನು ದಾಳಿ: ಗಾಯ

ಹಿರೀಕ್ಯಾತನಹಳ್ಳಿ, ಡಿ.1– ದನ ಮೇಯಿಸುತ್ತಿದ್ದ ರೈತನಿಗೆ ಹೆಜ್ಜೇನು ದಾಳಿ ಮಾಡಿ ಕಚ್ಚಿರುವ ಘಟನೆ ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಜಗದೀಶ್ ಊರ ಮುಂಭಾಗವಿರುವ ಕೆರೆಯ ಪಕ್ಕದ ಜಮೀನಿನಲ್ಲಿ ದನ ಮೇಯಿಸುತ್ತಿದ್ದಾಗ ಹೆಜ್ಜೇನು ದಾಳಿ ನಡೆಸಿವೆ. ಜೇನಿನ ದಾಳಿಗೆ ನೋವು ತಡೆಯಲಾರದೆ ಪಕ್ಕದಲ್ಲಿದ್ದ ಕೆರೆಗೆ ಬಿದ್ದು ಜೇನು ನೊಣಗಳಿಂದ ರಕ್ಷಿಸಿಕೊಳ್ಳಲು ಯತ್ನಿಸಿದ್ದಾರೆ. ಇದನ್ನು ಕಂಡ ದಾರಿ ಹೋಕರು ಅವರನ್ನು ರಕ್ಷಿಸಿ, ನಂತರ ಅವರನ್ನು ಹುಣಸೂರಿನ ಡಿ. ದೇವರಾಜ ಅರಸು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಕಳೆದ ವಾರ ಮಹಿಳೆಯೊಬ್ಬಳು ದನ ಮೇಯಿಸುತ್ತಿದ್ದಾಗ ಜೇನು ದಾಳಿ ಮಾಡಿತ್ತು. ಚಿಕಿತ್ಸೆ ಪಡೆದು ಇದೀಗ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಹೊಸ ತಹಶೀಲ್ದಾರ್‌ಗೆ ಸ್ವಾಗತ, ಹಳೆ ತಹಶೀಲ್ದಾರ್‌ಗೆ ಬೀಳ್ಕೊಡುಗೆ



ಹುಣಸೂರು: ಹುಣಸೂರು ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ಸಿಬ್ಬಂದಿ ವರ್ಗದ ಸಂಘದ ವತಿಯಿಂದ ತಾಲೂಕಿನ ತಹಶೀಲ್ದಾರಾಗಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ಲೆಫ್ಟಿನೆಂಟ್ ಎಸ್.ಯು.ಅಶೋಕ್ ಅವರನ್ನು ಸನ್ಮಾನಿಸಿ ಬೀಳ್ಕೊಡುಗೆ ನೀಡಲಾಯಿತು ಹಾಗೂ ಹುಣಸೂರು ತಾಲೂಕಿನ ನೂತನ ತಹಶೀಲ್ದಾರ್‌ರಾಗಿ ಬಂದಿರುವ ಮಂಜುನಾಥ್ ಅವರನ್ನು ಸ್ವಾಗತಿಸಲಾಯಿತು.

ಈ ಸಂದರ್ಭದಲ್ಲಿ ಉಪ ತಹಶೀಲ್ದಾರ್ ಶ್ರೀಪಾದ್, ಗ್ರೇಡ್–2 ತಹಶೀಲ್ದಾರ್ ನರಸಿಂಹಯ್ಯ, ಗ್ರಾಮ ಆಡಳಿತಾಧಿಕಾರಿ ಸಂಘದ ಅಧ್ಯಕ್ಷ ನಾಗೇಶ್ ಆಡಳಿತ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಆಗತ್ತೂರಿನಲ್ಲಿ ಶೀಘ್ರ ನಿವೇಶನದ ಹಕ್ಕುಪತ್ರ ವಿತರಣೆ



ಸರಗೂರು, ಡಿ.1– ಆಗತ್ತೂರು ಗ್ರಾಮದ ಸರ್ವತೋಮುಖ ಅಭಿವೃದ್ಧಿ ಹಾಗೂ ನಿವೇಶನದ ಹಕ್ಕು ಪತ್ರವನ್ನು ಶೀಘ್ರದಲ್ಲೇ ವಿತರಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದ್ದಾರೆ.

ತಾಲೂಕಿನ ಆಗತ್ತೂರು ಗ್ರಾಮದಲ್ಲಿ ಅನಿಲ್ ಚಿಕ್ಕಮಾದು ಯುವ ಬಳಗ ಹಾಗೂ ವಾಲ್ಮೀಕಿ ಯುವಕ ಸಂಘ, ಕಾಳಮ್ಮ ತಾಯಿ ಚೀಟಿದಾರರ ಸಂಘ, ಮಹಿಳಾ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಯುವಕ ಮಿತ್ರರ ಬಳಗ, ಗ್ರಾಮದ ಎಲ್ಲಾ ಜನಾಂಗದ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮದ ಎಲ್ಲಾ ಸಮುದಾಯಗಳ ಭವನ ನಿರ್ಮಾಣಕ್ಕೆ ಹಂತ–ಹಂತವಾಗಿ ಸಹಕಾರ ನೀಡಲಾಗುವುದು. ಜತೆಗೆ ಗ್ರಾಮದಲ್ಲಿನ ಅಭಿವೃದ್ಧಿ ಹಾಗೂ ನಿವೇಶನದ ಹಕ್ಕುಪತ್ರ ಶೀಘ್ರದಲ್ಲೇ ವಿತರಣೆ ಮಾಡಲಾಗುವುದು. ಹಾಗೆ ವೃತ್ತದಲ್ಲಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಲಾಗುವುದು ಎಂದರು.

ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿ, ವಾಲ್ಮೀಕಿ ಮಹರ್ಷಿ ಅವರು ಕೇವಲ ಒಂದು ಜಾತಿ, ಧರ್ಮ, ಜನಾಂಗಕ್ಕೆ ಸೀಮಿತವಾಗಿಲ್ಲ. ಬದಲಿಗೆ ರಾಮಾಯಣ ಮಹಾಕಾವ್ಯ ರಚಿಸಿದವರು. ಇವರು ಜಗತ್ತಿಗೆ ಜ್ಞಾನದ ಬೆಳಕು ನೀಡಿದ ಮಹಾನ್ ಕವಿ. ಜೀವನದ ವಿವಿಧ ಮೌಲ್ಯಗಳನ್ನು ತಿಳಿಸಿಕೊಟ್ಟವರು, ತಂದೆ ಚಿಕ್ಕಮಾದು ಅವರಂತೆ ಅನಿಲ್ ಚಿಕ್ಕಮಾದುರವರು ತಾಲೂಕಿನ ಅಭಿವೃದ್ಧಿಗಾಗಿ ಉತ್ತಮ ಕೆಲಸ ಮಾಡುತ್ತಿದ್ದು, ಇದನ್ನು ಗುರುತಿಸಿ ಇವರಿಗೆ ನಿಗಮಮಂಡಳಿ ಸ್ಥಾನ ನೀಡಲಾಗುತ್ತಿದೆ. ಇದು ನಿಮ್ಮೆಲ್ಲರ ಸಹಕಾರದಿಂದ ಇನ್ನು ಹೆಚ್ಚು ಅಭಿವೃದ್ಧಿ ಮಾಡುವ ಉದ್ದೇಶವು ಶಾಸಕರಿಗೆ ಒಲಿದು ಬಂದಿದೆ ಎಂದು ಹೇಳಿದರು.

ನಾಯಕ ಸಮಾಜದ ಯುವ ಮುಖಂಡರಾದ ಕ್ಯಾತನಹಳ್ಳಿ ನಾಗರಾಜು, ಮಹರ್ಷಿ ವಾಲ್ಮೀಕಿ ಅವರ ಜೀವನ ಚರಿತ್ರೆಯ ಸಂದೇಶದ ಬಗ್ಗೆ ಮಕ್ಕಳಿಗೆ ವಿವರಿಸಿದರು,

ಗ್ರಾಮದ ಯಜಮಾನರಾದ ಅಂಕನಾಯಕ ಮಾತನಾಡಿದರು, ಶಾಸಕ ಅನಿಲ್ ಚಿಕ್ಕಮಾದು, ಮುಖಂಡರಾದ ಶಂಭುಲಿಂಗನಾಯಕ, ಕ್ಯಾತನಹಳ್ಳಿ ನಾಗರಾಜು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪಿ. ರವಿ, ಮೈಮುಲ್ ನಿರ್ದೇಶಕ ಈರೇಗೌಡ, ನಾಗನಹಳ್ಳಿ ಪ್ರತೀಪ್, ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಕಾರ್ಯಕ್ರಮದಲ್ಲಿ ಪಿಎಲ್.ಡಿ ಬ್ಯಾಂಕ್ ಉಪಾಧ್ಯಕ್ಷ ನಾಗರಾಜು, ಬಿ.ಸಿ.ರಾಜು, ಸಾಗರೆ ಮಹೇಂದ್ರ, ಸಾಗರೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ವಸಂತಮ್ಮ ಸಣ್ಣಪ್ಪ, ಉಪಾಧ್ಯಕ್ಷೆ ಬಸವಲಿಂಗಮ್ಮ ಶಿವಣ್ಣನಾಯಕ, ಸದಸ್ಯರಾದ ಪುಟ್ಟತಾಯಮ್ಮ, ಪುಟ್ಟಮಹದೇವನಾಯಕ, ಸಂತೋಷ್‌ಕುಮಾರ್, ಎನ್. ನಂಜಯ್ಯ, ಗಡಿ ಯಜಮಾನರಾದ ಜವರನಾಯಕ, ನಾಯಕ ಸಮಾಜದ ಯಜಮಾನರಾದ ಅಂಕನಾಯಕ, ಪುಟ್ಟನಾಯಕ, ಊರು ಗೌಡ್ರು ಸುನಂದಕುಮಾರ್, ಗಾಣಿಗ ಸಮಾಜದ ಯಜಮಾನರಾದ ಪುಟ್ಟಶೆಟ್ಟರು, ವಿಶ್ವಕರ್ಮ ಸಮಾಜದ ಯಜಮಾನರಾದ ಸಿದ್ದಪ್ಪಾಜಿ, ಚಲುವಚಾರಿ, ಆದಿಕರ್ನಾಟಕ ಸಮಾಜದ ಯಜಮಾನರಾದ ಸಣ್ಣಯ್ಯ, ಸವಿತಾ ಸಮಾಯದ ಯಜಮಾನರಾದ ಜವರಶೆಟ್ಟಿ, ಚಿಕ್ಕಂಣಜವಾನರಾದ ಭೀಮನಾಯಕ, ದಾಸನಾಯಕ ಹಾಗೂ ಬೆಳ್ಳಿ ರಥದ ಸೇವಾರ್ಥದಾರರಾದ ಪುಟ್ಟನಾಯಕ, ಹಾಗೂ ಗ್ರಾಮದ ಎಲ್ಲಾ ಸಮುದಾಯದ ಬಂದುಗಳು, ಭಾಗವಹಿಸಿದ್ದರು,

ಅಗತ್ತೂರು ಗ್ರಾಮದಲ್ಲಿ ಸರ್ಕಾರಿ ನೌಕರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಮುದಾಯದ ಅಧಿಕಾರಿಗಳನ್ನು ಇದೇ ಸಂದರ್ಭದಲ್ಲಿ ಗೌರವಿಸಿ ಸನ್ಮಾನಿಸಲಾಯಿತು,

ಇದಕ್ಕೂ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ವಾಲ್ಮೀಕಿ ಭಾವಚಿತ್ರ, ಸ್ತಬ್ಧಚಿತ್ರಗಳು, ವಿವಿಧ ಕಲಾ ತಂಡಗಳ ಮೆರವಣಿಗೆಗೆ ವಿಜೃಂಭಣೆಯಾಗಿ ನಡೆಸಲಾಯಿತು,

> ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಶ್ರೀರಾಮನ ದೇವಾಲಯದಲ್ಲಿ ರಾಮಾಯಣ ಮಹಾಭಾರತ ಗ್ರಂಥವನ್ನು ರಚಿಸಿದ ಮಹಾಪುರಷರಾದ ಮಹರ್ಷಿ ವಾಲ್ಮೀಕಿ ಅವರ ಮಂದಿರ ನಿರ್ಮಾಣ ಮಾಡಬೇಕು, ಇದು ನನ್ನ ಮನದಾಸೆಯಾಗಿದೆ. ಕೇಂದ್ರಕ್ಕೆ ನಾನು ಸಹ ಮನವಿ ಮಾಡುತ್ತೇನೆ.
> –ಅನಿಲ್ ಚಿಕ್ಕಮಾದು, ಶಾಸಕರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತೇಜಸ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅನಾವರಣ (ಕ) 2 ಪ್ರದರ್ಶನಗಳು; ಗಾರುಡಿಗ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಅನಿಮಲ್ (ಹಿಂ)	2 ಪ್ರದರ್ಶನಗಳು
ರಾಜಕಮಲ್	
ಅನ್ನಪೂರ್ಣೆ (ತ)	4 ಪ್ರದರ್ಶನಗಳು
ಸಂಗಂ	
ಅನಿಮಲ್ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್‌ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ಪ್ರಭಾ	
ರಾಖಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಶುಗರ್ ಫ್ಯಾಕ್ಟರಿ (ಕ): ಮ.1.25ಕ್ಕೆ, ಸಂ.4.15ಕ್ಕೆ, ನೆಪೋಲಿಯನ್ (ಇಂ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಬ್ಯಾಡ್ ಮ್ಯಾನರ್ಸ್ (ಕ): ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಕಾಥಲ್ ದಿ ಕೋರ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಕಾಥಲ್ ದಿ ಕೋರ್ (ಮ): ಬೆ.10.45ಕ್ಕೆ, ಫೆರ್ರಿ (ಹಿಂ): ಮ.1.05ಕ್ಕೆ, ವಿಶ್ (3ಡಿ) (ಇಂ): ಮ.3.20ಕ್ಕೆ, ಸಂ.5.25ಕ್ಕೆ, ಸ್ವಾತಿ ಮುತ್ತಿನ ಮಳೆ ಹನಿಯೇ (ಕ): ರಾ.7.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.9.25ಕ್ಕೆ, ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.3.55ಕ್ಕೆ.
ಸ್ಕ್ರೀನ್ 4	ಅನಿಮಲ್ (ಹಿಂ): ಬೆ.8.05ಕ್ಕೆ, ಮ.12.10ಕ್ಕೆ, ಅರ್ಧಂ ಬರ್ಧ ಪ್ರೇಮ ಕಥೆ (ಕ): ಸಂ.4.15ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ರಾ.7.10ಕ್ಕೆ, ಪಾರ್ಕಿಂಗ್ (ತ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರೈತರ ಹಿತ ಕಾಪಾಡುವಲ್ಲಿ ಸರ್ಕಾರ ವಿಫಲ

ಹುಲಿ ದಾಳಿಗೆ ಬಲಿಯಾದ ಮಹಿಳೆ ನಿವಾಸಕ್ಕೆ ಮಾಜಿ ಶಾಸಕ ಹರ್ಷವರ್ಧನ್ ಭೇಟಿ, ಸಾಂತ್ವನ



ಮಲ್ಕುಂಡಿ, ಡಿ.1– ಇತ್ತೀಚೆಗೆ ಹುಲಿ ದಾಳಿಗೆ ಬಲಿಯಾದ ಬಳ್ಳೂರು ಹುಂಡಿ ಗ್ರಾಮದ ರತ್ನಮ್ಮ ಅವರ ನಿವಾಸಕ್ಕೆ ಮಾಜಿ ಶಾಸಕ ಬಿ.ಹರ್ಷವರ್ಧನ್ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿ ವೈಯಕ್ತಿಕವಾಗಿ ನೆರವು ನೀಡಿದರು.

ಬಳಿಕ ಮಾತನಾಡಿದ ಅವರು ಇತ್ತೀಚಿನ ದಿನಗಳಲ್ಲಿ ಕಾಡಾಂಚಿನ ಗ್ರಾಮಗಳಲ್ಲಿ ಹುಲಿ, ಚಿರತೆ ಹಾವಳಿ ಹೆಚ್ಚಾಗಿದೆ. ಕಾಡಂಚಿನ ಗ್ರಾಮಗಳಲ್ಲಿ ಜನರು ವಾಸ ಮಾಡಲು ಭಯಭೀತರಾಗಿದ್ದಾರೆ. ರೈತರು ಬೆಳೆದ ಫಸಲು ಕೈಗೆ ಸಿಗದಂತಾಗಿ ರೈತರು ಕಂಗಾಲಾಗಿದ್ದಾರೆ. ಈಗಾಗಲೇ ಅರಣ್ಯ ಇಲಾಖೆಯು ಹುಲಿಯನ್ನು ಸೆರೆ ಹಿಡಿದಿದೆ. ಆದರೂ ಕಾಡಂಚಿನ ಗ್ರಾಮಗಳಲ್ಲಿ ಇನ್ನೂ ಭಯದ ವಾತಾವರಣ ಇದೆ.

ಪ್ರತಿ ಗ್ರಾಮಗಳಲ್ಲೂ ಹುಲಿ ಚಿರತೆ ಕಾಣಿಸಿಕೊಳ್ಳುತ್ತಿವೆ. ಇದರ ಬಗ್ಗೆ ಸರ್ಕಾರ ಎಚ್ಚೆತ್ತುಕೊಳ್ಳಬೇಕಿದೆ ಈಗಿನ ರಾಜ್ಯ ಸರ್ಕಾರ ರೈತರ ಹಿತ ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದ ಅವರು ಗ್ರಾಮೀಣ ಭಾಗಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಿ ರೈತರ ಹಿತ ಕಾಪಾಡಲು ಸರ್ಕಾರ ಮುಂದಾಗಬೇಕಿದೆ ಎಂದು ಒತ್ತಾಯಿಸಿದರು. ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಗ್ರಾಪಂ ಉಪಾಧ್ಯಕ್ಷ ಬಿ.ಟಿ.ಕುಮಾರ್ ಇದ್ದರು.

ಅಪರಿಚಿತ ವೃದ್ಧ ಸಾವು

ಮೈಸೂರು: ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಅಪರಿಚಿತ ವೃದ್ಧ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಸುಮಾರು 60 ರಿಂದ 65 ವರ್ಷ ವಯಸ್ಸಿನ ಅಪರಿಚಿತ ವೃದ್ಧ ನ.14ರಂದು ರಾತ್ರಿ 9 ಗಂಟೆ ಸುಮಾರಿನಲ್ಲಿ ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್ ಬಳಿ ಫುಟ್‌ಪಾತ್‌ನಲ್ಲಿ ಅಸ್ವಸ್ಥನಾಗಿ ಬಿದ್ದಿದ್ದು, ಸಾರ್ವಜನಿಕರು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ನ.27ರಂದು ಮಧ್ಯಾಹ್ನ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದು, ವಾರಸುದಾರರು ಲಷ್ಕರ್ ಠಾಣೆ ದೂ.ಸಂ.0821–2418307 ಅನ್ನು ಸಂಪರ್ಕಿಸುವಂತೆ ಕೋರಿದೆ.

ಶ್ರೀಗೌಡ ನಿಧನ



ಹುಣಸೂರು, ಡಿ.1– ಟಿಎಪಿಸಿಎಂಎಸ್ ಅಧ್ಯಕ್ಷ ಹಾಗೂ ಕುಪ್ಪೆ ಗ್ರಾಮದ ವಾಸಿ ಕರಿಗೌಡರ ಮಗ ಶ್ರೀಗೌಡ(58) ಶುಕ್ರವಾರ ಹೃದಯಘಾತದಿಂದ ನಿಧನರಾದರು.

ಇಂದು ಬೆಳಿಗ್ಗೆ ಬಚ್ಚಲು ಮನೆಯಲ್ಲಿ ಹೃದಯಾಘಾತದಿಂದ ಕುಸಿದು ಬಿದ್ದರು. ತಕ್ಷಣ ಹುಣಸೂರಿನ ಖಾಸಗಿ ಆಸ್ಪತ್ರೆಗೆ ಕರೆತಂದು ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. ಮೃತರು ಪತ್ನಿ, ಮತ್ತು ಇಬ್ಬರು ಗಂಡು ಮಕ್ಕಳು ಹಾಗೂ ಅಪಾರ ಬಂಧು ಬಳಗ ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗ್ರಾಮದ ಮೃತರ ತೋಟದಲ್ಲಿ ಇಂದು ನೆರವೇರಿತು.

ಐದು ವರ್ಷದಲ್ಲಿ ರಾಜ್ಯ ಮಾತ್ರವಲ್ಲ, ಇಡೀ ಭಾರತ ಏಡ್ಸ್ ಮುಕ್ತ

● ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ● ಈ ನಿಟ್ಟಿನಲ್ಲಿ ಒಟ್ಟಾಗಿ ಕಾರ್ಯ ಪ್ರವೃತ್ತರಾಗೋಣ ● ವಿಶ್ವ ಏಡ್ಸ್ ದಿನ–2023 ಸಮಾರಂಭದಲ್ಲಿ ಭಾಗಿ



ಬೆಂಗಳೂರು, ಡಿ.1(ಕೆಎಂಶಿ)–ಮುಂದಿನ ಐದು ವರ್ಷಗಳಲ್ಲಿ ಕರ್ನಾಟಕ ಸೇರಿದಂತೆ ಭಾರತ ಏಡ್ಸ್ ಮುಕ್ತ ದೇಶವಾಗಲಿದ್ದು, ಈ ದಿಕ್ಕಿನಲ್ಲಿ ಎಲ್ಲರೂ ಒಟ್ಟಾಗಿ ಕಾರ್ಯಪ್ರವೃತ್ತರಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದ ವಿಶ್ವ ಏಡ್ಸ್ ದಿನ–2023 ಮತ್ತು 25ನೇ ರಜತ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಏಡ್ಸ್ ಸಾಂಕ್ರಾಮಿಕ ರೋಗ ತಡೆಯುವ ಜವಾಬ್ದಾರಿ ಎಲ್ಲರ ಮೇಲಿದೆ. ಈ ರೋಗ 1986ರಲ್ಲಿ ಭಾರತದಲ್ಲಿ ಹಾಗೂ 1987ರಲ್ಲಿ ಕರ್ನಾಟಕದಲ್ಲಿ ಪತ್ತೆಯಾಯಿತು ಎಂದರು.

ಇತ್ತೀಚಿನ ದಿನಗಳಲ್ಲಿ ಹೆಚ್‌ಐವಿ ಪೀಡಿತರ ಹಾಗೂ ಅದರ ಹರಡುವಿಕೆಯೂ ಕಡಿಮೆಯಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆ. ನಮ್ಮ ಸಮಾಜವನ್ನು ಹೆಚ್‌ಐವಿ ಮುಕ್ತವನ್ನಾಗಿ ಮಾಡಬೇಕು. ಇದಕ್ಕಾಗಿ ಜನರಲ್ಲಿ ಮತ್ತು ಯುವಜನರಲ್ಲಿ ಜಾಗೃತಿ ಮೂಡಿಸಬೇಕು. ಏಡ್ಸ್ ಪೀಡಿತರ ಸಂಖ್ಯೆಯನ್ನು 2015–2020ರ ಅವಧಿಯೊಳಗೆ ಸೊನ್ನೆಗೆ ತರಬೇಕೆಂಬ ಘೋಷವಾಕ್ಯವಿತ್ತು. ಆದರೆ, ಗುರಿ ಇನ್ನೂ ಸಾಧಿಸಲಾಗಿಲ್ಲ. ಈ ಘೋಷಣೆಯನ್ನು ಕಾರ್ಯರೂಪಕ್ಕೆ ತರುವುದು ಕೇವಲ ಆರೋಗ್ಯ ಇಲಾಖೆಯ ಹೊಣೆಯಾಗಿರದೇ, ಇಡೀ ಸಮಾಜದ ಹೊಣೆಯಾಗಿದೆ ಎಂದರು.

ಸಾಂಕ್ರಾಮಿಕ ರೋಗ ಪೂರ್ಣ ವಾಸಿಯಾದರೆ ಏಡ್ಸ್ ಪೀಡಿತರು ನೆಮ್ಮದಿಯ ಜೀವನ ನಡೆಸಲು ಸಾಧ್ಯ. ಮುಂದಿನ ಐದಾರು ವರ್ಷಗಳಲ್ಲಿ ಶೂನ್ಯಕ್ಕೆ ಬರಲಿ ಎಂದು ಹಾರೈಸುತ್ತೇನೆ.


ಭಾರತ, ಏಡ್ಸ್ ಪ್ರಕರಣಗಳಲ್ಲಿ ವಿಶ್ವದಲ್ಲಿಯೇ 3ನೇ ಸ್ಥಾನದಲ್ಲಿದೆ. ನಾವು ಹೆಚ್ಚು ಜಾಗೃತರಾಗುವುದು ಅವಶ್ಯ. ಕೆಲವರಿಗೆ ತಪ್ಪು ತಿಳುವಳಿಕೆಗಳಿವೆ. ರೋಗಿಗಳೊಂದಿಗೆ ಮಾತನಾಡಿದರೆ ರೋಗ ಬರುತ್ತದೆ ಎಂದು. ಆದರೆ ಹಾಗಾಗುವುದಿಲ್ಲ, ಹೆಚ್ಚಾಗಿ ರಕ್ತದ ಮೂಲಕವಾಗಿ ಹರಡುತ್ತದೆ. ಇದು ಜನರಿಗೆ ಗೊತ್ತಿರಬೇಕು, ಗೊತ್ತಿಲ್ಲದಿದ್ದರೆ ಕಾಯಿಲೆ ತಡೆಗಟ್ಟುವುದು ಅಸಾಧ್ಯ ಎಂದರು.

ಮೊದಲೇ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾಮೂಹಿಕವಾಗಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಬೇಕು. ಏಡ್ಸ್ ರೋಗ ಬಂದರೆ ತಕ್ಷಣ ಪ್ರಾಣಾಪಾಯವಿಲ್ಲ. ಆದರೆ, ಇದು ವಾಸಿಯಾಗದ ರೋಗ, ಇಷ್ಟೆಲ್ಲಾ ವಿಜ್ಞಾನದ ಬೆಳವಣಿಗೆಯಾದರೂ ಏಡ್ಸ್ ರೋಗಕ್ಕೆ ಇನ್ನೂ ಔಷಧಿ ಕಂಡುಹಿಡಿದಿಲ್ಲ. ಆರೋಗ್ಯ ಇಲಾಖೆ ಈ ಬಗ್ಗೆ ಸಂಶೋಧನೆಗಳನ್ನು ಹೆಚ್ಚು–ಹೆಚ್ಚು ಮಾಡಬೇಕು ಎಂದರು. ಸಮುದಾಯಗಳು ಮುನ್ನಡೆಸಲಿ ಎಂಬ ಧ್ಯೇಯವಾಕ್ಯದೊಂದಿಗೆ ಈ ವರ್ಷದ ಏಡ್ಸ್ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. 2017ರಲ್ಲಿ ಏಡ್ಸ್ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದಿದ್ದು ನಮ್ಮ ಸರ್ಕಾರ ಎಂದರು.

ಸಮಾರಂಭದಲ್ಲಿ ಭಾಗವಹಿಸಿದ್ದ ಏಡ್ಸ್ ತಗುಲಿರುವ ವ್ಯಕ್ತಿಯೊಂದಿಗೆ ಸಂವಾದ ನಡೆಸಿದ ಮುಖ್ಯಮಂತ್ರಿ, ಕಾಯಿಲೆ ಬಂದ ನಂತರ 26 ವರ್ಷಗಳ ಕಾಲ ಬದುಕಿದ್ದಾರೆ ಹಾಗೂ ಧೈರ್ಯವಾಗಿದ್ದಾರೆ ಎಂದು ಸಭಿಕರಿಗೆ ತಿಳಿಸಿದರು.

ಗೃಹ ಜ್ಯೋತಿಯಿಂದ ವಿದ್ಯುತ್ ಬಳಕೆ ದ್ವಿಗುಣ

ವಿದ್ಯುತ್ ಖರೀದಿಗಾಗಿ ಹಣಕ್ಕೆ ಜಲವಿದ್ಯುತ್ ಘಟಕ, ಇಂಧನ ಇಲಾಖೆ ಕಟ್ಟಡಗಳ ಅಡವಿಟ್ಟ ಸರ್ಕಾರ!



ಬೆಂಗಳೂರು, ಡಿ. 1(ಕೆಎಂಶಿ)–ರಾಜ್ಯದಲ್ಲಿ ತಲೆದೋರಿರುವ ವಿದ್ಯುತ್ ಅಭಾವ ಪರಿಸ್ಥಿತಿ ನಿಭಾಯಿಸಲು ಜಲ ವಿದ್ಯುತ್ ಉತ್ಪಾದನಾ ಅಣೆಕಟ್ಟೆ ಹಾಗೂ ಇಂಧನ ಇಲಾಖೆಯ ಪ್ರಮುಖ ಕಟ್ಟಡಗಳನ್ನು ಸರ್ಕಾರ ಅಡಮಾನ ಇಟ್ಟಿರುವುದು ಬೆಳಕಿಗೆ ಬಂದಿದೆ. ಕರ್ನಾಟಕದ ಇತಿಹಾಸದಲ್ಲೇ ಇದೇ ಮೊದಲು ವಿದ್ಯುತ್ ಬಳಕೆ ಪ್ರಮಾಣ ದ್ವಿಗುಣಗೊಂಡಿದೆ. ಈ ಸಂದರ್ಭದಲ್ಲಿ ಉತ್ಪಾದನೆ ಕುಂಠಿತಗೊಂಡಿದೆ. ವಿದ್ಯುತ್ ಪ್ರಸರಣ ನಿಗಮಗಳು ಮತ್ತು ಸರ್ಕಾರ ಕೆಪಿಸಿಎಲ್‌ಗೆ ಹಣ ಪಾವತಿಸದೆ ಇರುವುದರಿಂದ ಅಣೆಕಟ್ಟೆ ಹಾಗೂ ವಿದ್ಯುತ್ ಉತ್ಪಾದಿಸುವ ಯಂತ್ರಗಳನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಅಡವಿಟ್ಟು ಸಾಲ ಪಡೆದಿದೆ.

ರಾಜ್ಯ ಸರ್ಕಾರ ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ 21,000 ಕೋಟಿ ರೂ. ಬಾಕಿ ಪಾವತಿಸಬೇಕು, ಆದರೆ, ಬಾಕಿ ಕೊಡುವುದಿರಲಿ, ಪ್ರತಿ ತಿಂಗಳು ನಾನಾ ಯೋಜನೆಗಳಿದೆ. ಒಂದು ಸಾವಿರದಿಂದ 1,200 ಕೋಟಿ ರೂ. ನೀಡಬೇಕಾದ ಹಣವನ್ನೂ ಸರ್ಕಾರ ಪಾವತಿಸಿಲ್ಲ.

ಗೃಹಜ್ಯೋತಿ ಯೋಜನೆ ಜಾರಿ ನಂತರ ಪ್ರಸರಣ ನಿಗಮಗಳು ಕೆಪಿಟಿಸಿಎಲ್‌ಗೆ ನೀಡಬೇಕಾದ ಹಣದಲ್ಲೂ ಕಡಿತವಾಗುತ್ತಿದೆ. ಸರ್ಕಾರದ ಗ್ಯಾರಂಟಿ ಯೋಜನೆ ಅನುಷ್ಠಾನ, ಮತ್ತೊಂದೆಡೆ ರಾಜ್ಯದ ಬಹುಭಾಗ ಬರಕ್ಕೆ ಸಿಲುಕಿರುವುದರಿಂದ ವಿದ್ಯುತ್ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬೇಡಿಕೆ ಒಂದೆಡೆ ಹೆಚ್ಚಳವಾಗುತ್ತಿದ್ದರೆ, ಮತ್ತೊಂದೆಡೆ, ಉತ್ಪಾದನೆ ಕುಂಠಿತವಾಗುತ್ತಿದೆ. ಗ್ರಾಹಕರ ಬೇಡಿಕೆ ಈಡೇರಿಸಲು ಕೆಪಿಟಿಸಿಎಲ್ ಅನ್ಯ ರಾಜ್ಯಗಳು ಮತ್ತು ಖಾಸಗಿ ಕಂಪನಿಗಳಿಂದ ವಿದ್ಯುತ್ ಖರೀದಿ ಮಾಡುವುದು ಅನಿವಾರ್ಯ. ಖರೀದಿ ಮಾಡಲು ತಮ್ಮ ಬಳಿಯೂ ಹಣವಿಲ್ಲ, ಸರ್ಕಾರವೂ ನೀಡುತ್ತಿಲ್ಲ. ಆದರೆ, ಗ್ರಾಹಕರ ವಿದ್ಯುತ್ ಬೇಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಈಡೇರಿಸಬೇಕಿದೆ.

ಈ ಕಾರಣಕ್ಕಾಗಿ ತನ್ನ ಜಲಾಶಯಗಳನ್ನೇ ಅಡವಿಟ್ಟು ಸಾಲ ಪಡೆದಿದೆ, ಇದರೊಟ್ಟಿಗೆ ಪ್ರಮುಖ ಕಟ್ಟಡಗಳೂ ಅಡಮಾನದಲ್ಲಿವೆ.

ವಿವಿಧ ಇಲಾಖೆಗಳು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಾಲ ಪಡೆಯಲು ಸರ್ಕಾರ ಗ್ಯಾರಂಟಿ ಕೊಡುತ್ತದೆ. ಇದೇ ರೀತಿ ಕೆಪಿಟಿಸಿಎಲ್‌ಗೂ ಗ್ಯಾರಂಟಿ ಇದ್ದರೂ ಅದೂ ಸಾಲದೆ, ಅಡಮಾನ ಇಡುವಂತಾಗಿದೆ. ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಸರ್ಕಾರಿ ನೌಕರರಿಗೆ ವೇತನ ನೀಡಲು ಕೋಲ್ಕತ್ತಾ ಮೂಲದ ಖಾಸಗಿ ವಿಮಾ ಸಂಸ್ಥೆಯಿಂದ 300 ಕೋಟಿ ರೂ. ಸಾಲ ಪಡೆದಿದ್ದರು. ಅಂದು ಇದು ಭಾರೀ ವಿವಾದಕ್ಕೆ ಎಡೆ ಮಾಡಿತ್ತು. ನಂತರದ ದಿನಗಳಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಐದು ಲಕ್ಷ ಕೋಟಿ ರೂ.ಗೂ ಹೆಚ್ಚು ಸಾಲ ಮಾಡಿವೆ.

ಪಶು ಸಂಗೋಪನೆ ಇಲಾಖೆ ಖಾಲಿ ಹುದ್ದೆಗಳು ಶೀಘ್ರ ಭರ್ತಿ



ಮೈಸೂರು, ಡಿ.1(ಎಂಟಿವೈ)– ಪಶು ಸಂಗೋಪನೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ ಅವರು, ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ಈಗಾಗಲೇ ಚಾಲನೆ ನೀಡಲಾಗಿದೆ. ಹಂತ ಹಂತವಾಗಿ ಖಾಲಿ ಹುದ್ದೆಗಳನ್ನು ಕೆಪಿಎಸ್‌ಸಿ ಮೂಲಕ ಭರ್ತಿ ಮಾಡಲಾಗುತ್ತದೆ ಎಂದರು.

ಬರದ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಆಗದಂತೆ ನೋಡಿಕೊಳ್ಳಲಾಗುವುದು. ಮೇವನ್ನು ಹೊರ ರಾಜ್ಯಗಳಿಗೆ ಸಾಗಾಣಿಕೆ ಮಾಡದಂತೆ ಈಗಾಗಲೇ ನಿರ್ಬಂಧ ಹೇರಲಾಗಿದೆ. ರಾಜ್ಯಾದ್ಯಂತ ಮೇವಿನ ಬೀಜಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಬಡವರ ಪರ ಯೋಜನೆ ಟೀಕೆ ಖಂಡನೀಯ: ಬಡವರ ಪರವಾಗಿ ಇದ್ದವರು ಯಾವಾಗಲೂ ಬಡತನವನ್ನು ಮೇಲೆತ್ತುವ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಾರೆ. ಶ್ರೀಮಂತರ ಪರವಾಗಿದ್ದವರು ಬರೀ ಅವರ ಬಗ್ಗೆ ಮಾತ್ರ ಯೋಚನೆ ಮಾಡುತ್ತಾರೆ. ಇನ್ಫೋಸಿಸ್ ಸಂಸ್ಥೆಯ ನಾರಾಯಣಮೂರ್ತಿ ಅವರು ಯಾವ ರೀತಿಯಲ್ಲಿ ಉಚಿತ ಯೋಜನೆಗಳ ಬಗ್ಗೆ ಮಾತನಾಡಿದ್ದಾರೋ ಗೊತ್ತಿಲ್ಲ. ಯಾರು ಏನೇ ಮಾತನಾಡಿದರೂ ಜನರಿಗೆ ಉಚಿತವಾಗಿ ನೀಡುತ್ತಿರುವ ಗ್ಯಾರಂಟಿ ಯೋಜನೆ ನಿಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಮೈಸೂರು ಸಿಟಿ, ವಿಜಯನಗರ 3 ನೇ ಹಂತ ಎ1 ಬ್ಲಾಕ್, 3 ನೇ ಕ್ರಾಸ್, ಮನೆ ನಂ 197 ರಲ್ಲಿ ವಾಸವಾಗಿರುವ ಶ್ರೀ. ದೀಪಕ್ ಕುಮಾರ್ ಇವರ ಪತ್ನಿ ಸುಮಾರು 47 ವರ್ಷ ವಯಸ್ಸಿನ ಶ್ರೀಮತಿ. ಎಸ್.ಎಂ. ಶೋಭಾ ಮತ್ತು ಇವರ ಪತಿ ಸುಮಾರು 49 ವರ್ಷ ವಯಸ್ಸಿನ ದೀಪಕ್ ಕುಮಾರ್.ಎನ್ ರವರಿಂದ ಷೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದ್ದು ಈ ಕ್ರಯದ ವ್ಯವಹಾರಕ್ಕೆ ಯಾರದಾದರೂ ಯಾವುದಾದರೂ ತಕರಾರು ಅಥವಾ ಈ ಆಸ್ತಿಯ ಬಗ್ಗೆ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಹತ್ತು ದಿನಗಳೊಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನುಬದ್ಧ ತಕರಾರು ಬರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದೂ ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು ಮತ್ತು ನಂತರ ಬರುವ ಯಾವ ತಕರಾರಿಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ತಿಳಿಯುವುದು

ಷೆಡ್ಯೂಲ್: ಮೈಸೂರು ಸಿಟಿ, ವಿಜಯನಗರ ಬಡಾವಣೆ, 4ನೇ ಹಂತ, 2ನೇ ಫೇಸ್, ನಿವೇಶನ ಸಂಖ್ಯೆ 3365 ವಿಸ್ತೀರ್ಣ ಪೂರ್ವ ಪಶ್ಚಿಮ 12 ಮೀಟರ್ ದಕ್ಷಿಣೋತ್ತರ 09 ಮೀಟರ್ ನಿವೇಶನಕ್ಕೆ ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ: 3484, ಉತ್ತರಕ್ಕೆ: ನಿವೇಶನ ಸಂಖ್ಯೆ 3364, ದಕ್ಷಿಣಕ್ಕೆ: ನಿವೇಶನ ಸಂಖ್ಯೆ 3366

Sd/- O.Shamabhat, BA., LL.B,
O.Sathisha, B.Sc, LL.B, advocates
#20/C, 2nd floor, near airlines hotel, Jayalakshmi vilas road mysore, chamarajapuram, Mysuru- 570005, Ph: 0821-4246475

ನಗರಸಭಾ ಕಾರ್ಯಾಲಯ, ಹುಣಸೂರು
ಮೈಸೂರು ಜಿಲ್ಲೆ–571105
email: itstaff_ulb_hunsur@gmail.com, Ph: 08222-252048

ಸಂ.ಹುನಸ/24.10.7.25 ಹಾಗೂ 5%/ಪಿಆರ್–03/2023-24 ದಿನಾಂಕ: 01.12.2023

ಅವಧಿ ವಿಸ್ತರಣಾ ಪ್ರಕಟಣೆ

ಹುಣಸೂರು ನಗರಸಭೆಯ 2023–24 ನೇ ಸಾಲಿನ ಎಸ್.ಎಫ್.ಸಿ ಮತ್ತು ನಗರಸಭಾ ನಿಧಿಯಡಿಯಲ್ಲಿ ಶೇ.24.10, 7.25 ಮತ್ತು 5% ರಲ್ಲಿ ವಿವಿಧ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪಟ್ಟಣ ವ್ಯಾಪ್ತಿಯಲ್ಲಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಧನ ಸಹಾಯ ನೀಡಲು ಅರ್ಜಿಗಳನ್ನು 2ನೇ ಬಾರಿಗೆ ಆಹ್ವಾನಿಸಲಾಗಿದೆ ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಅವರ ಅಧಿಕೃತ ಜ್ಞಾಪನ ಸಂಖ್ಯೆ: ಮುನಿಸಿ (04)/ಎಸ್.ಎಫ್.ಸಿಮು.ನಿ/ಹು.ನ.ಸ/ಕ್ರಿಯೋ/ಸಿ.ಆರ್–03/ 2023–24 ದಿನಾಂಕ 20/07/2023 ರಲ್ಲಿ ಅನುಮೋದನೆಗೊಂಡಂತೆ 2ನೇ ಪ್ರಕಟಣೆಯಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 30.11.2023 ಕ್ಕೆ ನಿಗಧಿಪಡಿಸಲಾಗಿತ್ತು. ನಿರ್ಧಿಷ್ಟ ಅರ್ಜಿಗಳು ಸ್ವೀಕೃತಗೊಳ್ಳದ ಕಾರಣಾಂತರದಿಂದ ಹಿಂದಿನ ಷರತ್ತಿನಂತೆ ಅರ್ಜಿ ಸ್ವೀಕರಿಸುವ ದಿನಾಂಕವನ್ನು 15.12.2023 ಸಂಜೆ 5–30 ರವರೆಗೆ ಮತ್ತೊಮ್ಮೆ ಅವಧಿಯನ್ನು ವಿಸ್ತರಿಸಿ ಪ್ರಕಟಿಸಲಾಗಿರುತ್ತದೆ.

ವಿಶೇಷ ಸೂಚನೆ : ಹೆಚ್ಚಿನ ಮಾಹಿತಿಯನ್ನು ಕಛೇರಿಯ ಡೇ–ನಲ್ಮ್ ಹಾಗೂ ಬಡತನ ನಿರ್ಮೂಲನಾ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಮಾನ್ಯ ಆಡಳಿತಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ನಗರಸಭೆ, ಹುಣಸೂರು

ಸಹಿ/– ಪೌರಾಯುಕ್ತರು ನಗರಸಭೆ, ಹುಣಸೂರು

ಬ್ರಾಹ್ಮಣ ಧರ್ಮ ಸಹಾಯ ಸಭಾ(ರಿ.)
ಕಲ್ಯಾಣ ಭವನ, ತ್ಯಾಗರಾಜ ರಸ್ತೆ, ಮೈಸೂರು, ದೂರವಾಣಿ : 9449606311

ಪ್ರಕಟಣೆ

ನಮ್ಮ ಸಭೆಯ 2024, 2025 ಹಾಗೂ 2026ನೇ ಸಾಲಿನ ಮೂರು ವರ್ಷಗಳ ಅವಧಿಗೆ ಈ ಕೆಳಕಂಡ ಮಹನೀಯರುಗಳು ಆಡಳಿತಮಂಡಳಿಗೆ ಅವಿರೋಧವಾಗಿ ಆಯ್ಕೆ ಆಗಿರುತ್ತಾರೆಂದು ಮಾನ್ಯ ಸದಸ್ಯರುಗಳ ಅವಗಾಹನೆಗೆ ತರಲಾಗಿದೆ.

1. ಶ್ರೀ ಹೆಚ್. ಅಶ್ವತ್ಥ ನಾರಾಯಣ, ಅಧ್ಯಕ್ಷರು
2. ಶ್ರೀ ಹೆಚ್.ಕೆ. ಅನಂತ, ಉಪಾಧ್ಯಕ್ಷರು
3. ಶ್ರೀ ಕೆ.ಜಿ. ಶಂಕರ ನಾರಾಯಣಶಾಸ್ತ್ರಿ, ಉಪಾಧ್ಯಕ್ಷರು
4. ಶ್ರೀ ಎಂ.ಎಸ್. ರವೀಂದ್ರ, ಗೌ|| ಕಾರ್ಯದರ್ಶಿಗಳು
5. ಶ್ರೀ ಆರ್.ಅನಂತರಾಮು, ಜಂಟಿಕಾರ್ಯದರ್ಶಿಗಳು
6. ಶ್ರೀ ಕೆ.ಎಸ್. ಹಿರಿಯಣ್ಣ, ಜಂಟಿಕಾರ್ಯದರ್ಶಿಗಳು
7. ಶ್ರೀ ಎಸ್.ಕೆ ಜಗದೀಶ್, ಧರ್ಮಾಧಿಕಾರಿಗಳು
8. ಶ್ರೀ ಎ.ರಾಮು, ಗೌ|| ಖಜಾಂಚಿ
9. ಶ್ರೀ ಎನ್.ಶ್ರೀನಿವಾಸ, ನಿರ್ದೇಶಕರು
10. ಶ್ರೀ ಎಂ.ಮಂಜುನಾಥ, ನಿರ್ದೇಶಕರು
11. ಶ್ರೀ ಎಲ್.ವೆಂಕಟಕೃಷ್ಣಶಾಸ್ತ್ರಿ, ನಿರ್ದೇಶಕರು
12. ಶ್ರೀ ಕೆ.ಜಿ.ಸತೀಶ್, ನಿರ್ದೇಶಕರು
13. ಶ್ರೀ ಎನ್.ವೈ.ವಿಶ್ವನಾಥ್, ನಿರ್ದೇಶಕರು
14. ಶ್ರೀ ಜಿ.ಸುಬ್ಬನರಸಿಂಹ, ನಿರ್ದೇಶಕರು
15. ಶ್ರೀ ಎ.ಆರ್.ವೆಂಕಟೇಶ್, ನಿರ್ದೇಶಕರು

ಚುನಾವಣೆಯ ಫಲಿತಾಂಶದ ಘೋಷಣೆಯನ್ನು ಸಹಕಾರ ಇಲಾಖೆಯಿಂದ ನೇಮಿಸಿರುವ ರಿಟರ್ನಿಂಗ್ ಅಧಿಕಾರಿ ಶ್ರೀ ಜಿ. ರಮೇಶ್ ರವರು ಘೋಷಿಸಿರುತ್ತಾರೆ.

ಸ್ಥಳ: ಮೈಸೂರು,
ದಿನಾಂಕ: 30–11–2023

ಸಹಿ/– (ವಿ.ಸುದರ್ಶನ) ವ್ಯವಸ್ಥಾಪಕರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ವಿಭಾಗೀಯ ಕಛೇರಿ, ಚಾಮರಾಜನಗರ ವಿಭಾಗ, ಚಾಮರಾಜನಗರ.

ಸಂ: ಕರಾಸಾ/ಚಾನವಿ/ಸಂ/ವಾ/1887/2023–24 ದಿನಾಂಕ: 28.11.2023

ಇ–ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ: 03/2023–24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ **ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು ಹೊಸ ಬಸ್ ನಿಲ್ದಾಣ, ಹುಲ್ಲಹಳ್ಳಿ, ಸುತ್ತೂರು, ಬೇಗೂರು, ತೆರಕಣಾಂಬಿ, ಹನೂರು ಮತ್ತು ಕೊಳ್ಳೇಗಾಲ ನಗರಸಭೆಯ ಕೊಳ್ಳೇಗಾಲ ಕ.ರಾ.ರ.ಸಾ.ನಿಗಮ ಬಸ್ ನಿಲ್ದಾಣದ ಮೊದಲನೇ ಮಹಡಿ ಮತ್ತು ಎರಡನೇ ಮಹಡಿಗೆ ಏಕೈಕ ಪರವಾನಗಿದಾರರನ್ನು, ಹಾಗೂ ಖಾಲಿಯಿರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ ಮತ್ತು ತೆರೆದ ಸ್ಥಳಗಳಿಗೆ, ಮಳಿಗೆ** ನಡೆಸಲು ಆಸಕ್ತ ಅರ್ಜಿದಾರರನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡುವ ಸಲುವಾಗಿ ಮತ್ತು ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್‌ಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಟೆಂಡರ್ / ಮ್ಯಾನ್ಯುವಲ್ ಟೆಂಡರ್ ಹಾಗೂ ಸಂಧಾನ ಪ್ರಕಟಣೆ ಸಂ. 03/2023–24, ದಿನಾಂಕ: 28.11.2023 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು (3) ವರ್ಷಗಳ ಅವಧಿಗೆ ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಇರುವ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್ / ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ–ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

(1) ಸಂಧಾನ ಅರ್ಜಿ ಪಡೆಯಲು ಕೊನೆಯ ದಿನಾಂಕ: **26.12.2023, 16.00 ಗಂಟೆವರೆಗೆ.** (2) ಸಂಧಾನ ಅರ್ಜಿ & ಇಎಂಡಿ ಡಿ.ಡಿ. ಸಲ್ಲಿಸಲು ಕೊನೆಯ ದಿನಾಂಕ: **27.12.2023, 16.00 ಗಂಟೆವರೆಗೆ.** (3) ಸಂಧಾನ ಸಭೆಯ ದಿನಾಂಕ: **28.12.2023, ಮಧ್ಯಾಹ್ನ 12.30 ಗಂಟೆಯಿಂದ.**

1. ಇ–ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: **26.12.2023, 16.00 ಗಂಟೆವರೆಗೆ.** 2. ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಸಲ್ಲಿಸಬೇಕಾದ ಮೂಲ ಇ.ಎಂ.ಡಿ. ಡಿ.ಡಿ. ಮತ್ತು ಇತರೆ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **27.12.2023, 16.00 ಗಂಟೆವರೆಗೆ.** 3. ಇ–ಟೆಂಡರ್ ತೆರೆಯುವ ದಿನಾಂಕ: **28.12.2023, ಬೆಳಿಗ್ಗೆ 11.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ) ರವರನ್ನು ಸಂಪರ್ಕಿಸಲು ಕೋರಲಾಗಿದೆ (**ದೂ: 7760990302, 7760990311**).

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ಕರಾರಸಾನಿಗಮ, ಚಾಮರಾಜನಗರ ವಿಭಾಗ

DIPR/CP/YC/2364/2023-24